ಶ್ರೀ ವಾಟಾಳ್‌ನಾಗರಾಜ್:- ಗ್ರಾನೈಟ್ ಲೂಟಿಕೋರರ ಪರವಾಗಿ ನೀವು ಇದ್ದೀರಿ. ಮೊದಲಿನಿಂದಲೂ ತಾವು ಖಾಸಗಿಯವರ ಪರ ಇದ್ದೀರಿ. ಈ ಸದನದಲ್ಲಿ ಗ್ರಾನೈಟ್ ಬಗ್ಗೆ ನಡೆದ ಚರ್ಚೆ ಏನು? ಇದಕ್ಕೆ ನೇಮಕ ಮಾಡಿದ ಸಮಿತಿಯ ಉದ್ದೇಶ ಏನು? ಈ ಉದ್ದೇಶಕ್ಕೆ ತಾವು ಭಂಗ ತಂದಿದ್ದೀರಿ. ಮೋಸದ ವರದಿ ಅದು. ಲೂಟಿಕೋರರ ಪರ ನೀವು ಇದ್ದೀರಿ. ನೀವು ಹೇಳಿಕೆ ಕೊಡುವುದಕ್ಕೆ ಸಾಧ್ಯವಿಲ್ಲ.

ಅಧ್ಯಕ್ಷರು:- ಮಾನ್ಯ ವಾಟಾಳ್‌ನಾಗರಾಜ್‌ರವರೆ, ತಾವು ಕುಳಿತುಕೊಳ್ಳಿ. ಅವರು ಚರ್ಚೆ ಪ್ರಾರಂಭ ಮಾಡಲಿ.

ಶ್ರೀ ವಾಟಾಳ್‌ನಾಗರಾಜ್: ನೀವು ಮೊದಲಿನಿಂದಲೂ ಖಾಸಗಿಯವರ ಪರ ಇದ್ದೀರಿ.

ಶ್ರೀ ಡಿ.ಎ. ಚಿಣ್ಣಪ್ಪ:-ನಾನು ವರದಿಯನ್ನು ಮಂಡಿಸುತ್ತೇನೆ.

ಶ್ರೀ.ಬಿ.ಎಸ್.ಯಡಿಯೂರಪ್ಪ:- ನಾಳೆ ಸರ್ಕಾರ ಹೋಗುತ್ತದೆನ್ನುವ ಭಯವೇನು ನಿಮಗೆ?

ಶ್ರೀ ವಾಟಾಳ್‌ನಾಗರಾಜ್:- ಈ ಸದನದಲ್ಲಿ ಗ್ರಾನೈಟ್ ಬಗ್ಗೆ ನಡೆದ ಚರ್ಚೆಯೇನು? ಅದಕ್ಕೆ ನೇಮಕವಾದ ಸಮಿತಿಯ ಉದ್ದೇಶವೇನು? ಆ ಉದ್ದೇಶಕ್ಕೆ ನೀವು ಭಂಗ ತಂದಿದ್ದೀರಿ.

ಶ್ರೀ ಡಿ.ಎ.ಚಿಣ್ಣಪ್ಪ: ನಾನು ವರದಿಯನ್ನು ಮಂಡಿಸುತ್ತೇನೆ.

ಶ್ರೀ ವಾಟಾಳ್‌ನಾಗರಾಜ್:- ನಿಮ್ಮ ವರದಿಯನ್ನು ನಾನು ಸುಡುತ್ತೇನೆ. ಇದು ಸರಿಯಲ್ಲ ಮೋಸದ ವರದಿ ಅದು.

ಶ್ರೀ ಸಿ.ಬೈರೇಗೌಡ:-ಮಾನ್ಯ ಅಧ್ಯಕ್ಷರೆ, ತಮ್ಮ ಗಮನಕ್ಕೆ ತರತಕ್ಕದ್ದು ಅಂದರೆ ಇವತ್ತು ನಾವು ಚರ್ಚೆಗೆ ತೆಗೆದುಕೊಂಡಿರತಕ್ಕದ್ದು ಅವಿಶ್ವಾಸ ನಿರ್ಣಯ. ಅದರ ಮಧ್ಯೆ ಯಾವುದೂ ಬರಬಾರದು ಎನ್ನುವುದು it gets precedence over all other business of the House. That is according to our Rules of Procedure. All and Sundry things are being discussed. The No Confidence Motion loses its significance. ನಾವು ಧಿನಾ ಬೆಳಿಗ್ಗೆ ಎದ್ದರೆ ಈ ಮೋಷನ್ ಬಗ್ಗೆ ಚರ್ಚೆ ಮಾಡತಕ್ಕದ್ದಲ್ಲ. ಇದನ್ನು ನಾವು ದಿನನಿತ್ಯ ತರತಕ್ಕದ್ದು ಕೂಡ ಅಲ್ಲ. ಇದಕ್ಕೆ ನೀತಿ ನಿಬಂಧನೆಗಳಿವೆ. ಅದಕ್ಕೆ ವಿರುದ್ಧವಾದ ರೀತಿಯಲ್ಲಿ ತಾವು ಈ ನಡವಳಿಕೆಗಳನ್ನು ಸದನದಲ್ಲಿ ನಡೆಯುವುದಕ್ಕೆ ದಯವಿಟ್ಟು ಅವಕಾಶ ಕೊಡಬಾರದೆಂದು ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು: ಮಾನ್ಯ ವಿರೋಧಪಕ್ಷದ ನಾಯಕರಾದ ದೇಶಪಾಂಡೆಯವರೇ ತಾವು ಶುರು ಮಾಡಿ.

ಅವಿಶ್ವಾಸ ನಿರ್ಣಯದ ಮೇಲೆ ಚರ್ಚೆ

ವಿಷಯ:- "ಈ ಸದನವು ಶ್ರೀ ಎಂ.ವೀರಪ್ಪಮೊಯಿಲಿ ಅವರ ಸಚಿವ ಸಂಪುಟದ ಮೇಲೆ ಅವಿಶ್ವಾಸವನ್ನು ಸೂಚಿಸುತ್ತದೆ".

ಶ್ರೀ ಆರ್.ವಿ. ದೇಶಪಾಂಡೆ (ವಿರೋಧಪಕ್ಷದ ನಾಯಕರು) :- ಮಾನ್ಯ ಅಧ್ಯಕ್ಷರೇ, ಅವಿಶ್ವಾಸ ನಿರ್ಣಯವನ್ನು ಇವತ್ತು ವಿರೋಧಪಕ್ಷಗಳೆಲ್ಲ ಸೇರಿ ಏನು ಮಂಡಿಸಿದ್ದೇವೆ ಅದಕ್ಕೆ ತಾವು ಅನುಮತಿಯನ್ನು ಕೊಟ್ಟಿದ್ದೀರಿ. ಇದು ವಿರೋಧಪಕ್ಷದ ಕೊನೆಯ ಅಸ್ತ್ರವೆಂದು ನನಗೆ ಗೊತ್ತು. It

becomes the last weapon to be used. ಆದರೆ ಇದರ ಬಗ್ಗೆ ಸಾಕಷ್ಟು ವಿಚಾರ ವಿನಿಮಯ ಮಾಡಿ ಇವತ್ತು ರಾಜ್ಯದಲ್ಲಿ ಆಡಳಿತ ವ್ಯವಸ್ಥೆ ಬಗ್ಗೆ, ಅಭಿವೃದ್ಧಿ ಕೆಲಸಗಳ ಬಗ್ಗೆ, ಕಾಂಗ್ರೆಸ್ ಪಕ್ಷದಲ್ಲಿನ ಕಚ್ಚಾಟದ ಬಗ್ಗೆ ಈ ಎಲ್ಲವನ್ನೂ ವಿಚಾರ ಮಾಡಿದಾಗ, ಈ ಸಮಯದಲ್ಲಿ ನಾವು ಅವಿಶ್ವಾಸ ನಿರ್ಣಯವನ್ನು ಮೂವ್ ಮಾಡಲಿಲ್ಲವೆಂದರೆ ನಾಡಿನ ಜನರಿಗೆ ದ್ರೋಹ ಮಾಡಿದಂತಾಗುತ್ತದೆ. ಇದು ನಮ್ಮ ಕರ್ತವ್ಯ, ನಮ್ಮ ಶಕ್ತಿ ಏನಿದೆ ಅದು ನಮಗೆ ಗೊತ್ತು. ನಾವು ಎಷ್ಟು ಜನರು ಇದ್ದೇವೆ ಎಂಬುದು ನನಗೆ ಗೊತ್ತು. ಆದರೂ ಇವತ್ತು ನಮ್ಮ ಕರ್ತವ್ಯ ನಡೆಯುತ್ತಿದೆ. ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬಂದು ಮೂರು ಮುಕ್ಕಾಲು ವರ್ಷವಾಯಿತು. ಮೂರು ಮುಕ್ಕಾಲು ವರ್ಷದಲ್ಲಿ ಅವರು ಏನು ಮಾಡಿದ್ದಾರೆ ಈಗಿನ ಮುಖ್ಯಮಂತ್ರಿಗಳು ಏನು ಮಾಡಿದ್ದಾರೆ...

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ:- ಬೊಮ್ಮಾಯಿಯವರು ಮುಖ್ಯಮಂತ್ರಿಗಳಿದ್ದಾಗ ಏನಾಗಿದೆ?

ಶ್ರೀ ಆರ್.ವಿ ದೇಶಪಾಂಡೆ:- ಬೊಮ್ಮಾಯಿಯವರು ಮುಖ್ಯಮಂತ್ರಿಗಳಿದ್ದಾಗ ಏನಾಗಿದೆ ಎಂದು ಇಲ್ಲಿ ಕೂತು ನೀವು ಹೇಳಿದ್ದೀರಿ. ಬೊಮ್ಮಾಯಿಯವರು ಇದ್ದಾಗ ನಾವು ಮಾತುಕತೆ ಮಾಡಿದ್ದೇವೆ. ಮಚ್ಚೀಲಿ ಹೊಡೆದಾಡಲಿಕ್ಕೆ ಹತ್ತಿದ್ದೀರಿ. ನಿಮಗೆ ನಾಚಿಕೆಯಾಗಬೇಕು. ಅಂತಹ ಕೆಲಸ ನಾವು ಮಾಡಲಿಲ್ಲ.

ಶ್ರೀ ಎಸ್.ಹೆಚ್.ಕೌಜಲಗಿ:- ಈಗ ಚಾಕುಚೂರಿ ಸಂಸ್ಕೃತಿ ಪ್ರಾರಂಭವಾಗಿದೆ.

ಶ್ರೀ ಕೆ.ಹೆಚ್.ರಂಗನಾಥ್(ಲೋಕೋಪಯೋಗಿ ಸಚಿವರು):- ಮಾನ್ಯ ವಿರೋಧಪಕ್ಷದ ನಾಯಕರಿಗೆ ಏಕೆ ಇಷ್ಟು ಉದ್ವೇಗ? ಅವರು ಅಧ್ಯಕ್ಷರನ್ನು ಕುರಿತು ಅಡ್ರಸ್ ಮಾಡಬೇಕು. ಅದನ್ನು ಬಿಟ್ಟು ಅವರ ಕಡೆಗೆ ಕೈ ತೋರಿಸಿ ಹೇಳತಕ್ಕದ್ದು ಸತ್‌ಸಂಪ್ರದಾಯವಲ್ಲ.

ಶ್ರೀ ವಾಟಾಳ್‌ನಾಗರಾಜ್: ಮಚ್ಚೀಲಿ ಅಂದರೆ ಕನ್ನಡದಲ್ಲಿ ಏನು ಅರ್ಥ?

ಶ್ರೀ ಆರ್.ವಿ.ದೇಶಪಾಂಡೆ:- ನಮ್ಮ ಕಡೆ ಮಚ್ಚೀಲಿ ಎಂದು ಹೇಳುತ್ತಾರೆ. ಪಾದರಕ್ಷೆಗೆ ಹಾಗೆ ಹೇಳುತ್ತಾರೆ.

ಶ್ರೀ ವಾಟಾಳ್‌ನಾಗರಾಜ್: ಚಪ್ಪಲಿಗೆ ಹಾಗೆ ಹೇಳುತ್ತಾರೋ?

ಶ್ರೀ ಕೆ.ಹೆಚ್.ರಂಗನಾಥ್:- ಸಂಸ್ಕೃತದಲ್ಲಿ ಪಾದರಕ್ಷೆ ಎಂದು ಹೇಳುತ್ತಾರೆ.

ಶ್ರೀ ಆರ್.ವಿ. ದೇಶಪಾಂಡೆ :- ಹಾಗಾಗಿ ನಾನೇನು ಭಾವಿಸಿದ್ದೆ ಅಂದರೆ ಇವತ್ತು ಆಡಳಿತ ಪಕ್ಷದಲ್ಲಿ ಕಚ್ಚಾಟ ನಡೆಯುತ್ತಿದೆ; ಮುಖ್ಯಮಂತ್ರಿಗಳು ನನಗೆ ಮಾತನಾಡಲು ಅವಕಾಶ ಕೊಡುವುದಿಲ್ಲ, ಅವರೇ ರಾಜೀನಾಮೆಯನ್ನು ಕೊಟ್ಟು ಹೋಗುತ್ತಾರೆಂದು ತಿಳಿದುಕೊಂಡಿದ್ದೆ. ಏಕೆಂದರೆ ಎಲ್ಲಾ ಹಂತದಲ್ಲೂ ಅವರು ವಿಫಲರಾಗಿದ್ದಾರೆ. ಇವತ್ತು ಆಡಳಿತ ವ್ಯವಸ್ಥೆಯೆಲ್ಲ ಸಂಪೂರ್ಣವಾಗಿ ಕುಸಿದು ಬಿದ್ದಿದೆ. ಅಭಿವೃದ್ಧಿ ಕೆಲಸಗಳೆಲ್ಲ ಸ್ಟ್ಯಾಂಡ್‌ಸ್ಟಿಲ್ ಆಗಿವೆ. ಯಾವ ಹಂತದಲ್ಲೂ ಸರ್ಕಾರ ಇವತ್ತು ಕೆಲಸ ಮಾಡುತ್ತಿಲ್ಲ. ಮತ್ತು ಕಾಂಗ್ರೆಸ್ ಪಕ್ಷದಲ್ಲಿ ಏನು ಜಗಳ ಇದೆ, ಆ internal quarrelsನ ಬಗ್ಗೆ ಹೇಳುವುದಕ್ಕೆ ನನಗೆ ಇಚ್ಛೆ ಇಲ್ಲದಿದ್ದರೂ ಸಹ, ಇವತ್ತು ಅವರು ಅದು ನಮ್ಮ family affair ಎಂದು ಹೇಳುತ್ತಾ ಬಂದರು. family affair ಎಲ್ಲಿಯ ತನಕ ಇರುತ್ತಿತ್ತು? ನಾಲ್ಕು ಗೋಡೆಗಳ ಮಧ್ಯೆ ಇದ್ದರೆ ಅದು ಇರುತ್ತಿತ್ತು. ಆದರೆ ಮುಖ್ಯಮಂತ್ರಿಗಳು ತಮ್ಮ ಜೀವಕ್ಕೆ ಅಪಾಯ ಇದೆಯೆಂದು ಹೇಳುತ್ತಿದ್ದಾರೆ.

ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ:- ನಿಮಗೆ ಮಾತನಾಡತಕ್ಕಂಥ ನೈತಿಕತೆ ಎಲ್ಲಿ ಬಂತು? ಬೊಮ್ಮಾಯಿಯವರು ಇದ್ದಾಗ ರಾಜ್ಯಪಾಲರ ಹತ್ತಿರ ಹೋಗಿರಲಿಲ್ವಾ?

(ಗೊಂದಲ)

ಅಧ್ಯಕ್ಷರು:- ಎಲ್ಲರೂ ಕುಳಿತುಕೊಳ್ಳಿ.

ಶ್ರೀ ಆರ್.ವಿ. ದೇಶಪಾಂಡೆ:- ಹಾಗಾಗಿ ಮುಖ್ಯಮಂತ್ರಿಗಳು ಎಲ್ಲ ಹಂತದಲ್ಲಿ ವಿಫಲರಾಗಿದ್ದಾರೆ. ಅವರ ಪಕ್ಷದಲ್ಲೇ ಅವರ ಮೇಲೆ ವಿಶ್ವಾಸ ಇಲ್ಲ, ಅವರ ಪಕ್ಷದಲ್ಲಿ ಅವರು ಹಿರಿಯ ನಾಯಕರ ವಿಶ್ವಾಸ ಕಳೆದುಕೊಂಡಿದ್ದಾರೆ. ಮಂತ್ರಿಮಂಡಲದ ಸದಸ್ಯರ ವಿಶ್ವಾಸ ಕಳೆದುಕೊಂಡಿದ್ದಾರೆ. ಹಾಗಾಗಿ ಅವರು ತಾವಾಗಿಯೇ ರಾಜೀನಾಮೆ ಕೊಟ್ಟು ಹೋಗಬೇಕಿತ್ತು. ಈ ಅವಕಾಶವನ್ನು ವಿರೋಧಪಕ್ಷಕ್ಕೆ ಅವರಾಗಿಯೇ, ಕೊಡುತ್ತಾರೆ ಎಂದು ನಾನು ಭಾವಿಸಿದ್ದೆ.

(ಮಾನ್ಯ ಉಪಾಧ್ಯಕ್ಷರು ಅಧ್ಯಕ್ಷರ ಪೀಠದಲ್ಲಿ ಉಪಸ್ಥಿತರಾದರು)

ಇವತ್ತು total breakdown of constitutional machinery ರಾಜ್ಯದಲ್ಲಿ ಆಗಿದೆ ಮತ್ತು financially total bankruptcy ಆಗಿದೆ. ಈಗ ಆರ್ಥಿಕವಾಗಿ ಸರ್ಕಾರ ಸಂಪೂರ್ಣವಾಗಿ ದಿವಾಳಿಯಾಗಿದೆ. ನಾನು ಈ ವಿಚಾರವನ್ನು ನೇರವಾಗಿ ಹೇಳುವಾಗ ಕೆಲವು ಉದಾಹರಣೆಗಳನ್ನು ಕೊಡಬೇಕಾಗುತ್ತದೆ. ಮುಖ್ಯವಾಗಿ ಮುಖ್ಯಮಂತ್ರಿಗಳು ಮತ್ತು ಮಂತ್ರಿಗಳು ತಮ್ಮ ಎಲ್ಲ ಸಮಯವನ್ನು ಇವತ್ತು loyalistsಗೂ dissident activitiesಗೂ ಕೊಡುತ್ತಿದ್ದಾರೆಯೇ ವಿನಃ ರಾಜ್ಯದ ಜನರ ಬಗ್ಗೆ, ನಾಡಿನ ಜನರ ಬಗ್ಗೆ ಗಮನಕೊಡುತ್ತಿಲ್ಲ. ರಾಜ್ಯದಲ್ಲಿ ಇವತ್ತು ಭೀಕರವಾದ ಬರಗಾಲದಿಂದ ಕಂಗಾಲಾದ ರೈತರ ಬಗ್ಗೆ ಇವತ್ತು ಸರ್ಕಾರ ಯಾವ ವಿಚಾರವನ್ನೂ ಮಾಡುತ್ತಿಲ್ಲ. ಈಗಾಗಲೇ ನಮ್ಮ ಸ್ನೇಹಿತರು ಹೇಳಿದರು. ರಾಯಚೂರಿನಲ್ಲಿ ಯಾವ ಪ್ರಕಾರ ಭಾರಿ ಮಳೆಯಾಗಿ 20 ಸಾವಿರ ಜನ ಬೀದಿಪಾಲಾಗಿದ್ದಾರೆಂದು; ಅದರ ಬಗ್ಗೆ ಈ ಸರ್ಕಾರಕ್ಕೆ ಚಿಂತನೆ ಇಲ್ಲ. ರೂಲಿಂಗ್ ಪಾರ್ಟಿ ಶಾಸಕರಿಗೆ ಇದರ ಬಗ್ಗೆ ಚಿಂತನೆ ಇಲ್ಲ.

ಅವರವರ ಮತದಾನ ಕ್ಷೇತ್ರದಲ್ಲಿ ಇಷ್ಟೊಂದು ಭೀಕರ ಬರಗಾಲ ಇದ್ದಾಗಲೂ ಸಹ ಅವರು ಯಾವ ಚಿಂತೆಯನ್ನೂ ಮಾಡದೆ ಕೇವಲ 60 ಜನ ಶಾಸಕರು ಡೆಲ್ಲಿಗೆ ಹೋದರು, 70 ಜನ ಬೆಂಗಳೂರಿನಲ್ಲಿದ್ದರು ಎಂದು ಇಷ್ಟೇ ವಿನಹ ಬೇರೆ ಏನೂ ಮಾಡುತ್ತಿಲ್ಲ. ಇವತ್ತು ನಮ್ಮ ರಾಜ್ಯದಲ್ಲಿರತಕ್ಕ ಸಮಸ್ಯೆಗಳಿಗೆ ಏನು ಪರಿಹಾರವನ್ನು ಕಂಡುಹಿಡಿಯಬೇಕಾಗಿತ್ತು. ಆ ಬಗ್ಗೆ ಯಾವ ಪ್ರಯತ್ನವನ್ನೂ ಇವರು ಮಾಡಿಲ್ಲ. ಹೀಗಾಗಿ ಕಳೆದ ಮೂರುವರೆ ವರ್ಷಗಳ ನಿಮ್ಮ ಕಾಂಗ್ರೆಸ್ ಪಕ್ಷದ ಆಡಳಿತ ನಾಡಿನ ಜನರಿಗೆ ಒಂದು ಶಾಪವಾಗಿದೆ. It has become a curse. ಈ ಶಾಪದಿಂದ ನಾಡಿನ ಜನರನ್ನು ಮುಕ್ತರನ್ನಾಗಿ ಮಾಡಬೇಕಾಗಿದೆ. ಇದು ನಮ್ಮ ಕರ್ತವ್ಯ. ಇವರಿಗೆ ಇಷ್ಟೊಂದು ಬಹುಮತ ಇದ್ದು, 180 ಜನರ ದೈತ್ಯಶಕ್ತಿಯಿಂದಾಗಿ ಈ ಎಲ್ಲ ಪರಿಣಾಮಗಳಾಗಿವೆ. ಈ ನಾಡಿನ ಇತಿಹಾಸದಲ್ಲಿ ಯಾವ ರಾಜಕೀಯ ಪಕ್ಷದಲ್ಲೂ ಇಷ್ಟೊಂದು ದೊಡ್ಡ ಬಹುಮತ ಸಿಕ್ಕಿರಲಿಲ್ಲ. ಇವತ್ತು ನಮಗೆ ಅದೇ ಒಂದು ದೊಡ್ಡ ಸಮಸ್ಯೆಯಾಗಿದೆ. ನಾಡಿನ ಜನತೆಯ ತೀರ್ಪನ್ನು ನಾವು ಒಪ್ಪಿಕೊಳ್ಳಬೇಕು. ನಿಮಗೆ ಯಾವ ಪ್ರಕಾರ ಬೇಕೋ ಹಾಗೆ ಉಪಯೋಗಮಾಡಿಕೊಳ್ಳುತ್ತಿದ್ದೀರಿ. ಚುನಾವಣೆ ಬಂದಾಗ ನಿಮಗೆ ಗೊತ್ತಾಗುತ್ತದೆ. ಇವತ್ತು ಮೂರು ಮುಖ್ಯಮಂತ್ರಿಗಳು ಆದರು.

ಈಗಾಗಲೇ 80-90 ಜನ ಮಂತ್ರಿಗಳು ನಿಮ್ಮ ಪೈಕಿ ಆಗಿದ್ದಾರೆ. ಇನ್ನೂ ಒಂದು ವರ್ಷ ಇದೆ. ಇನ್ನೂ ಇಬ್ಬರು ಮುಖ್ಯಮಂತ್ರಿಗಳಾಗಿ, ಉಳಿದವರೂ ಮಂತ್ರಿಗಳಾಗಿ ಎಲ್ಲರೂ ಎಕ್ಸ್ ಮಿನಿಸ್ಟರ್ ಅಂತ ಹೇಳಿಕೊಳ್ಳಬಹುದು. ಆ ಪ್ರಕಾರ ಇವತ್ತು ಕಾಂಗ್ರೆಸ್ ಹೈಕಮಾಂಡ್‌ನಲ್ಲಿ ತೀರ್ಮಾನ ಮಾಡಿ ರೊಟೇಶನ್ ಸಿಸ್ಟಮ್ ಪ್ರಕಾರ ಆರು ತಿಂಗಳಿಗೆ ಒಬ್ಬ ಮುಖ್ಯಮಂತ್ರಿ, ಎಂಟು ತಿಂಗಳಿಗೆ ಒಬ್ಬರು ಮಂತ್ರಿಗಳು ಎಂದು ಮಾಡಬಹುದು. ಒಂದೊಂದು ಕ್ಯಾಬಿನೇಟ್‌ನಲ್ಲೂ 40 ಜನ ಮಂತ್ರಿಗಳು ಇರುತ್ತಾರೆ. ಯಾವಾಗ ಶ್ರೀ ವೀರಪ್ಪಮೊಯಿಲಿಯವರು ಮುಖ್ಯಮಂತ್ರಿಗಳಾದರು, ಆಗ ನಮಗೆ ಅವರಲ್ಲಿ ಒಂದು ವಿಶ್ವಾಸ ಹುಟ್ಟಿತ್ತು. ಓಪನ್ ಗವರ್ನಮೆಂಟ್ ಅಂತ ಹೇಳಿದರು, ಸ್ವಚ್ಛ ಆಡಳಿತ ಎಂದು ಹೇಳಿದರು. ಏನೋ ಒಳ್ಳೆಯದನ್ನು ಮಾಡುತ್ತಾರೆ ಎಂದು ನಾನು ತಿಳಿದುಕೊಂಡಿದ್ದೆ.

ಕೆಲವು ಒಳ್ಳೆಯ ಅಧಿಕಾರಿಗಳು ಬಂದರು; ಅದರ ನಂತರ ಏನಾಯಿತು. ಅದರ ನಂತರ ನಿಮ್ಮ ಮಂತ್ರಿಮಂಡಲದ ಗಾತ್ರವನ್ನು 41ಕ್ಕೆ ತೆಗೆದುಕೊಂಡು ಹೋಗಿ, ಏನು ಮಾಡಿದ್ದೀರಿ? ಏನು ಸಾಧನೆ ಮಾಡಿದ್ದೀರಿ? ಅದರಲ್ಲಿ ಯಾವ ತರಹದ ಮಂತ್ರಿಗಳು ಇದ್ದಾರೆಂದು ನಿಮಗೆ ಗೊತ್ತು. ಎಷ್ಟೋ ಆಪಾದನೆಗಳಿರುವಂಥ ಮಂತ್ರಿಗಳೂ ಇದ್ದಾರೆ. ಎಷ್ಟೋ ಅಪವಾದಗಳನ್ನು ನಿಮ್ಮ ಮಂತ್ರಿಮಂಡಲದ ಸದಸ್ಯರ ಮೇಲೆ ಮಾಡಿದರೂ ಕೂಡ ತಾವು ಕಿವಿ ಕೊಟ್ಟಿಲ್ಲ. ಒಬ್ಬರು ಡೌರಿ ಕೇಸ್‌ನಲ್ಲಿ ಇನ್‌ವಾಲ್ವ್ ಆಗುತ್ತಾರೆ, ಅವರ ಮೇಲೆ ಯಾವುದೇ ಕ್ರಮ ಇಲ್ಲ, ಮತ್ತೊಬ್ಬರು ವರ್ತೂರಿನಲ್ಲಿ ಸಾವಿರಾರು ನಿವೇಶನಗಳನ್ನು ಮಾಡಿ ಮಾರಾಟ ಮಾಡಿ ಹಣ ಮಾಡುತ್ತಾರೆ. ಟ್ಯಾಂಕ್ ಬೆಡ್ಸ್ ಎನ್‌ಕ್ರೋಚ್ ಮಾಡುತ್ತಾರೆ, ಕಂದಾಯ ಸಚಿವರು, ವಿಭಾಗಾಧಿಕಾರಿಗಳು ನಿಮಗೆ ವರದಿ ಕೊಡುತ್ತಾರೆ. ನೀವು ಅಲಾಟ್‌ಮೆಂಟ್ ರದ್ದು ಮಾಡುತ್ತೀರಿ. ಆದರೆ, ಅವರ ಮೇಲೆ ಏನೂ ಕ್ರಮ ಇಲ್ಲ.

ಶ್ರೀ ಎ. ಕೃಷ್ಣಪ್ಪ (ತೋಟಗಾರಿಕೆ ರಾಜ್ಯ ಸಚಿವರು) :- ತಾವು ಟ್ಯಾಂಕ್ ಬೆಡ್ಸ್ ವಿಚಾರ ಹೇಳಿದಿರಿ. ಇಲ್ಲಿ ನೀವು ಅಪವಾದವನ್ನು ಮಾಡಿದಂಥ ಸಮಯದಲ್ಲಿ, ಟ್ಯಾಂಕ್‌ಬೆಡ್ಸ್ ವಿಷಯದಲ್ಲಿ ನನ್ನ ಇನ್‌ವಾಲ್‌ಮೆಂಟ್ ಇಲ್ಲ, ಎಲ್ಲಿಯೂ ಈ ದಾಖಲೆ ಇಲ್ಲ. ಅದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಆರ್.ವಿ. ದೇಶಪಾಂಡೆ :- ನನಗೆ ಬಂದ ಮಾಹಿತಿ ಪ್ರಕಾರ ಹೇಳುತ್ತಿದ್ದೇನೆ. ನನ್ನ ಮಾಹಿತಿ ಸರಿಯಿಲ್ಲವೆಂದರೆ, ಮುಖ್ಯಮಂತ್ರಿಗಳು ಉತ್ತರ ಕೊಡುವಾಗ ಹೇಳಬಹುದು. ಮತ್ತೊಬ್ಬ ಮಂತ್ರಿಗಳು, ನಿಮ್ಮ ಅಜ್ಞೆ ಪಡೆದು, ಯಾವಯಾವ ಟಿ.ಸಿ.ಹೆಚ್. ಸಂಸ್ಥೆಗಳಿಗೆ , ಎಷ್ಟೆಷ್ಟು ವರ್ಷದಲ್ಲಿ ರೆಕಗ್ನಿಷನ್ ಇಲ್ಲ, ಅಂತಹ ಕಡೆಗಳಲ್ಲಿ 865 ವಿದ್ಯಾರ್ಥಿಗಳು ಪರೀಕ್ಷೆಗೆ ಕುಳಿತುಕೊಳ್ಳುವುದಕ್ಕೆ ಪರ್ಮಿಷನ್ ಕೊಡುತ್ತಾರೆ. ಇನ್ನು ಆಡಳಿತ ಕನ್ನಡ ಭಾಷೆಯಲ್ಲಿಯೇ ನಡೆಯಬೇಕು, ಇಂಗ್ಲೀಷ್ ಭಾಷಾ ಶಾಲೆಗಳಿಗೆ ಎನ್‌ಕರೇಜ್ ಮಾಡವುದಿಲ್ಲ ಎಂದು ತಾವು ಹೇಳುತ್ತೀರಿ. ಆದರೂ ಸಹ ಅವರು ಇಂಗ್ಲೀಷ್ ಮೀಡಿಯಂ ಶಾಲೆಗಳಿಗೆ ಸ್ಯಾಂಕ್ಷನ್ ಮಾಡುತ್ತಾರೆ. ಟಿ.ಸಿ.ಹೆಚ್. ವಿಚಾರವಾಗಿ ಸ್ಟೇಟ್ ಫೈವ್ ಇಯರ್ ಪ್ಲಾನ್‌ವರೆಗೆ ಯಾವುದೇ ರೆಕಗ್ನಿಷನ್ ಕೊಡಬಾರದು ಎಂದು ಸಚಿವ ಸಂಪುಟದ ತೀರ್ಮಾನವಾಗಿದೆ. ಆದರೆ, ಸಚಿವ ಸಂಪುಟದಲ್ಲಿ ಈ ವಿಷಯ ಬರುವುದೇ ಇಲ್ಲ. ರೀಸರ್ಚ್ ಇಲಾಖೆಯ ನಿರ್ದೇಶಕರು ಪತ್ರ ಬರೆಯುತ್ತಾರೆ, ಮುಖ್ಯಮಂತ್ರಿಗಳ ಆದೇಶದ ಮೇರೆಗೆ ಪತ್ರ ಬರೆಯುತ್ತಿದ್ದೇನೆ ಪರ್ಮಿಷನ್ ಕೊಡಿ ಎಂದು ಹೇಳುತ್ತಾರೆ. ಪತ್ರಿಕಾ ವರದಿಗಾರರು ತಮ್ಮನ್ನು ಕೇಳಿದಾಗ ಪತ್ರವನ್ನೂ ಕೊಟ್ಟಿಲ್ಲ, ಅಧಿಕಾರವನ್ನೂ ಕೊಟ್ಟಿಲ್ಲವೆಂದು ತಾವು ಹೇಳುತ್ತೀರಿ; ಹಾಗಾದರೆ, ತಾವು ಕ್ರಮ

ತೆಗೆದುಕೊಂಡಿದ್ದೇನು? ಅವರ ಇಲಾಖೆ ಕೇವಲ ಬದಲಾವಣೆ. ಇದೇನು ನಿಮ್ಮ ಸ್ವಚ್ಛ ಆಡಳಿತ ಎಂದು ನಾನು ಕೇಳುತ್ತಿದ್ದೇನೆ. ಹಲವಾರು ವಿಷಯಗಳನ್ನು ವಿರೋಧಪಕ್ಷದವರು ಇಲ್ಲಿ ಪ್ರಸ್ತಾಪ ಮಾಡಿದರೂ ಸಹ ಅದರ ಮೇಲೆ ಯಾವುದೇ ಕ್ರಮ ತೆಗೆದುಕೊಂಡಿಲ್ಲ. ನಿಮ್ಮ ಆಡಳಿತ ಸ್ವಚ್ಛ ಇದೆ ಎಂದು, ಯಾವ ಪ್ರಕಾರ ನಾಡಿನ ಜನ ನಂಬಬೇಕಾಗಿದೆ? ಎಲ್ಲಾ ಹಂತಗಳಲ್ಲಿಯೂ ತಾವು ವಿಫಲರಾಗಿದ್ದೀರಿ. ಇವತ್ತು ಜನಗಳು ನಿರಾಶರಾಗಿದ್ದಾರೆ. ಇವತ್ತು ಎಷ್ಟು ಬೇಗನೆ ನೀವು ಹೋಗುತ್ತೀರೋ, ಅಷ್ಟು ಬೇಗನೆ ಕಳುಹಿಸುವುದಕ್ಕೆ ಜನ ತೀರ್ಮಾನಕ್ಕೆ ಬಂದಿದ್ದಾರೆ. ಏಕೆಂದರೆ, ಜನರಿಗೆ ಏನೂ ಪರಿಹಾರ ಸಿಕ್ಕಿಲ್ಲ , ರೈತರಿಗೆ ಪರಿಹಾರ ಸಿಕ್ಕಿಲ್ಲ, ಕಾರ್ಮಿಕರಿಗೆ ಪರಿಹಾರ ಸಿಕ್ಕಿಲ್ಲ, ಸಾಮಾನ್ಯ ಜನರಿಗೆ ಪರಿಹಾರ ಸಿಕ್ಕಿಲ್ಲ, ಕೂಲಿ ಕಾರ್ಮಿಕರಿಗೆ ಪರಿಹಾರ ಸಿಕ್ಕಿಲ್ಲ ಕೇವಲ ದಿನವೂ ಪತ್ರಿಕೆಗಳಲ್ಲಿ ನಿಮ್ಮ ಜಗಳ ಬರುತ್ತಿದೆ. ಇದುಬಿಟ್ಟು ಬೇರೆ ಯಾವುದೇ ವಿಚಾರ ಇಲ್ಲ. ಈ ವಿಚಾರದಲ್ಲಿ ಮಾನ್ಯ ರಾಜ್ಯಪಾಲರನ್ನು ಎಲ್ಲಾ ವಿರೋಧಪಕ್ಷದವರು ಹೋಗಿ ಭೇಟಿಯಾದೆವು. ಏಕೆಂದರೆ, ಅವರು ಸಂವಿಧಾನದ ಮುಖ್ಯಸ್ಥರು. ನಾವು ತಿಳುದುಕೊಂಡಿದ್ದೆವು, ಅವರು ಕೂಡಲೇ ಮಧ್ಯೆ ಪ್ರವೇಶ ಮಾಡಿ, ಏನಾದರೂ ನ್ಯಾಯ ಮಾಡಿಕೊಡುತ್ತಾರೆ ಎಂದು. ಆದರೆ, ಅವರ ಕಡೆಯಿಂದಲೂ ನಮಗೆ ನ್ಯಾಯ ಸಿಕ್ಕುತ್ತಾ ಇಲ್ಲ. Because he is more dictated by the Centre and by the Prime Minister than by the Constitution.ಹಾಗಾಗಿ, ಇವತ್ತು ಮಾಡುವುದು ಬೇರೆ ಯಾವುದೂ ಉಳಿದಿಲ್ಲ. ಎಲ್ಲಾ ಹಂತಗಳಲ್ಲಿಯೂ ವಿಫಲರಾಗಿ, ತಮ್ಮ ಸರ್ಕಾರಕ್ಕೆ ಒಂದು ಕ್ಷಣವೂ ಸಹ ಅಧಿಕಾರದಲ್ಲಿ ಉಳಿಯುವುದಕ್ಕೆ ಅರ್ಹತೆ ಇಲ್ಲ. Chief Minister is morally and legally bound to quit ಅಂತ ಹೇಳುವ ಮಟ್ಟಕ್ಕೆ ಈ ಸರ್ಕಾರ ಬಂದಿದೆ. ಹಾಗಾಗಿ ಇವತ್ತು, ಈ ಕಾಂಗ್ರೆಸ್ ಸರ್ಕಾರ ಏನಿದೆ, ರಾಜ್ಯದ ಜನತೆಗೆ ಒಂದು ದೊಡ್ಡ ಲಯಬಿಲಿಟಿ ಆಗಿದೆ, ಇವತ್ತು ಕಲೆಕ್ಟೀವ್ ಡಿಸಿಷನ್ಸ್ ಇಲ್ಲ, ಸಚಿವ ಸಂಪುಟದಲ್ಲಿ ಯಾವುದೇ ಸೌಹಾರ್ದತೆ ಇಲ್ಲ, ಕಲೆಕ್ಟೀವ್ ರೆಸ್ಪಾನ್ಸಿಬಿಲಿಟಿ ಇಲ್ಲ ; ರಾಜ್ಯದಲ್ಲಿ ಸ್ಟೆಬಿಲಿಟಿ ಇಲ್ಲ. ಭಿನ್ನಮತೀಯರು ಹೇಳುತ್ತಾರೆ, ಮುಖ್ಯಮಂತ್ರಿಗಳು ಇನ್ನು ನಾಲ್ಕು ದಿವಸಗಳಲ್ಲಿ ಹೋಗುತ್ತಾರೆ ಎಂದು.

3.05 ಪಿ.ಎಂ.

ಇನ್ನೊಬ್ಬರು ಲಾಂಜ್‌ನಲ್ಲಿ ಹೇಳುತ್ತಿದ್ದರು 11ನೇ ತಾರೀಖಿನಿಂದ 20ನೇ ತಾರೀಖಿನ ಒಳಗೆ ಇರುತ್ತಾರೋ ಇಲ್ಲವೋ ನೋಡಿ ಎಂದು ಹೇಳುತ್ತಿದ್ದರು. ಮುಖ್ಯಮಂತ್ರಿಗಳಿಗೆ ಏನೂ ಆಗುವುದಿಲ್ಲವೆಂದು ಲಾಯಲಿಸ್ಟ್‌ಗಳು ಹೇಳುತ್ತಾರೆ. ಇದರಿಂದ ಓವರ್ ಆಲ್ ಏನಾಗಿದೆ ಎಂದರೆ ರಾಜ್ಯದಲ್ಲಿ ಸ್ಥಿರವಾದ ಸರ್ಕಾರ ಇಲ್ಲ. ಇಷ್ಟೊಂದು ದೈತ್ಯ ಶಕ್ತಿ ನಿಮ್ಮ ಕಡೆ ಇದ್ದರೂ ಸಹಾ ಸ್ಥಿರವಾದ ಸರ್ಕಾರವನ್ನು ಕೊಡಲಿಕ್ಕೆ ನಿಮ್ಮ ಕೈಯಲ್ಲಿ ಆಗುತ್ತಿಲ್ಲ. ತಾವು ನಾಡಿನ ಜನಕ್ಕೆ ಲಯಬಿಲಿಟಿ ಆಗಿದ್ದೀರಿ. ತಾವು ಎಷ್ಟು ಬೇಗ ಹೋಗುತ್ತೀರೋ ಅಷ್ಟು ರಿಲೀಫ್ ನಾಡಿನ ಜನಕ್ಕೆ ಕೊಟ್ಟ ಹಾಗೆ ಆಗುತ್ತದೆ. ಮಾನ್ಯ ಅಧ್ಯಕ್ಷರೆ, ಮಾನ್ಯ ಡೆಪ್ಯುಟಿ ಚೀಫ್ ಮಿನಿಸ್ಟರ್ ಅವರು ದೆಹಲಿಯಲ್ಲಿ ಹೇಳುತ್ತಾರೆ:- Who

"Krishna, was believed to be summoned to the capital by the Party High Command, said here on Monday, Credibility has become a victim with Veerappa Moily." ಎಂದು.

ಇವತ್ತು ನಿಮ್ಮ ಕ್ರೆಡಿಬಿಲಿಟಿಯನ್ನು ನಿಮ್ಮ ಡೆಪ್ಯುಟಿ ಚೀಫ್ ಮಿನಿಸ್ಟರ್‌ರವರೇ ಛಾಲೆಂಜ್ ಮಾಡುತ್ತಿದ್ದಾರೆ. ಇಂಥವರನ್ನು ಪಕ್ಕದಲ್ಲೇ ಕೂರಿಸಿಕೊಂಡು ಸರ್ಕಾರ ನಡೆಸುತ್ತಿದ್ದೀರಿ; ಯಾವ ತರಹ ಸರ್ಕಾರ ನಡೆಸುತ್ತಿದ್ದೀರಿ? ಯಾವ ತರಹದ ಸರ್ಕಾರ ನಿಮ್ಮದು? ಇವತ್ತು ನಾನು ನಿಮ್ಮ ಮೇಲೆ ನೋ-ಕಾನ್ಫಿಡೆನ್ಸ್ ಮೋಷನ್ ತರುತ್ತಿದ್ದೇನೆ. ನನಗಿಂತ ಮುಂಚೇನೆ ನಿಮ್ಮ ಜನ ನಿಮ್ಮ ಕ್ರೆಡಿಬಿಲಿಟಿ ಛಾಲೆಂಜ್ ಮಾಡುವಾಗ ಇವತ್ತು ನಾವು ಮಾಡುವಾಗ ಅದಕ್ಕೆ ಅವರು ಸಪೋರ್ಟ್ ಮಾಡಬೇಕಾಗುತ್ತದೆ. ಇವತ್ತು ಪುನಃ ಮುಖ್ಯಮಂತ್ರಿಗಳು ಪ್ರೆಸ್‌ಗೆ ಏನು ಹೇಳುತ್ತಾರೆಂದರೆ "Replying to a query Mr. Krishna admitted that developmental work has suffered a setback due to abnormal situation prevailing in the State."

ಅಂದರೆ, ನಿಮ್ಮ ಕ್ರೆಡಿಬಿಲಿಟಿ ಬಗ್ಗೆ ನಾನು ಏನು ಹೇಳಿದ್ದೇನೋ ಆ ಮಾತನ್ನು ಅವರು ಹೇಳುತ್ತಾರೆ. ಅಭಿವೃದ್ಧಿ ಕೆಲಸವಾಗುವುದಿಲ್ಲವೆಂದು ಹೇಳುತ್ತಾರೆ. ನಿಮ್ಮ ಉಪಮುಖ್ಯಮಂತ್ರಿಗಳು, ನಿಮ್ಮ ಸ್ನೇಹಿತರು, ನಿಮ್ಮ ಸಚಿವ ಸಂಪುಟದ ಹಿರಿಯ ನಾಯಕರು ಈ ಮಾತು ಹೇಳಿದ ನಂತರ ನಾವು ಇಲ್ಲಿ ವಿರೋಧಪಕ್ಷದಲ್ಲಿ ಕೂತು ನಿಮ್ಮ ಮೇಲೆ ಈ ಮಾತು ಹೇಳಿದರೆ ನಿಮಗೆ ಆಶ್ಚರ್ಯವಾಗಬಾರದು. ಅವರಿಗೆ ನಿಮ್ಮ ಕಾರ್ಯವೈಖರಿ ಬಗ್ಗೆ ಯಾವ ರೀತಿ ವಿಶ್ವಾಸ ಉಂಟಾಗಿದೆ. ಅದರಿಂದ ಅವರು ಹೇಳಿರಬಹುದು. ನಿಮ್ಮ ಕಂದಾಯಸಚಿವರು ಇವತ್ತು ಒಂದು ಪ್ರೆಸ್ ಸ್ಟೇಟ್‌ಮೆಂಟ್ ಕೊಟ್ಟಿದ್ದಾರೆ. ಕಂದಾಯ ಮಂತ್ರಿಗಳು ಹೇಳುತ್ತಾರೆ, ನಾನು ಏಕೆ ಮುಖ್ಯಮಂತ್ರಿಗಳ ಕೈ ಬಲಪಡಿಸಬೇಕು ಎಂದು; ಏನು ಅವಶ್ಯಕತೆ ಇದೆ ಎಂದು ಅವರು ಯಾವ ರೀತಿ ಡ್ಯಾಮೇಜ್ ಸ್ಟೇಟ್‌ಮೆಂಟ್ ಮಾಡಿದ್ದಾರೆ ಅದೇ ಪ್ರಕಾರ ನಾವು ರಿಟಾರ್ಟ್ ಮಾಡುತ್ತೇವೆ. ಮತ್ತೊಬ್ಬರು ಹೌಸಿಂಗ್ ಮಿನಿಸ್ಟರ್ ಅವರು ಹುಬ್ಬಳ್ಳಿಯಲ್ಲಿ ಡೆಪ್ಯುಟಿ ಮಿನಿಸ್ಟರ್ ಮತ್ತು ರೆವಿನ್ಯೂ ಮಿನಿಸ್ಟರ್ ಅವರನ್ನು ಡಿಸ್ಮಿಸ್ ಮಾಡ್ರಿ ಎಂದು ಹೇಳುತ್ತಾರೆ. ಪಕ್ಷದ ಅಧ್ಯಕ್ಷರ ಮೇಲೆ ಆಪಾದನೆ ಮಾಡುತ್ತಾರೆ. ಏನು ಸೌಹಾರ್ದತೆ ಇದೆ ನಿಮ್ಮ ಕ್ಯಾಬಿನೆಟ್‌ನಲ್ಲಿ? ಇವತ್ತು ಡೆಪ್ಯುಟಿ ಚೀಫ್ ಮಿನಿಸ್ಟರ್‌ನ್ನು ವಜಾ ಮಾಡಬೇಕೋ ರೆವಿನ್ಯೂ ಮಿನಿಸ್ಟರನ್ನು ವಜಾ ಮಾಡಬೇಕೋ ಅದು ನಿಮಗೆ ಬಿಟ್ಟ ಪ್ರಶ್ನೆ. ನಿಮ್ಮ ಕ್ಯಾಬಿನೆಟ್‌ನಲ್ಲಿ ಸೌಹಾರ್ದತೆ ಇಲ್ಲ. ನಿಮ್ಮ ನಿಮ್ಮಲ್ಲಿ ಪರಸ್ಪರ ವಿಶ್ವಾಸ ಇಲ್ಲ. ಹೀಗಾದರೆ ಯಾವ ಪ್ರಕಾರ ನೀವು ಸರ್ಕಾರ ಕೊಡಲಿಕ್ಕೆ ಸಾಧ್ಯ? ಏನು ಮಾಡಲಿಕ್ಕೆ ನಿಮಗೆ ಸಾಧ್ಯ? ಇದರಿಂದ ಏನಾಗಿದೆ ಎಂದರೆ ನಾಡಿನ ಜನ ಕಷ್ಟದಲ್ಲಿ ಸಿಕ್ಕಿದ್ದಾರೆ. ನಿಮಗೆ ಇದು ಪವರ್ ಗೇಮ್ ಆಗಿದೆ. ಇವತ್ತು ವೀರಪ್ಪಮೊಯಿಲಿಯವರು ಹೋಗಬಹುದು ನಾಳೆ ಇನ್ನೊಬ್ಬರು ಮುಖ್ಯಮಂತ್ರಿಯಾಗಿ ಬರಬಹುದು; ಆದರೆ ನಾಡಿನ ಜನ ಏನು ಮಾಡಬೇಕು? ನಾಡಿನ ಜನ ಏನು ತೊಂದರೆ ಮಾಡಿದ್ದಾರೆ ನಿಮಗೆ? ನಿಮಗೆ ಆರಿಸಿ ಕಳುಹಿಸಿದ್ದು ತಪ್ಪೇ? ನಿಮಗೆ ದೊಡ್ಡ ಬಹುಮತ ಕೊಟ್ಟಿರುವುದು ಅವರ ಪಾಪವೆ? ಅದರ ಬಗ್ಗೆ ಅವರು ಇವತ್ತು ಪ್ರಾಯಶ್ಚಿತ್ತ ಪಡೆಯುತ್ತಿದ್ದಾರೆ. ಕಾಂಗ್ರೆಸ್‌ನಿಂದ ಆರಿಸಿ ಬಂದಿರುವವರಗೆ ರೈತರ ಬಗ್ಗೆ ಬಡವರ ಬಗ್ಗೆ ಯಾವ ಚಿಂತನೆಯೂ ಇಲ್ಲ. ನಾಡಿನ ಬಗ್ಗೆ ನಾಡಿನ ಅಭಿವೃದ್ಧಿ ಬಗ್ಗೆ ನಿಮಗೆ ಚಿಂತನೆ ಇಲ್ಲ. ಕೇವಲ ಕಚ್ಚಾಟ, ಜಗಳ, ಅಧಿಕಾರದ ಸಲುವಾಗಿ ನಿಮ್ಮ ಸ್ಪರ್ಧೆ ನಡೆಯುತ್ತಿದೆಯೇ ವಿನಃ ಈ ರಾಜ್ಯದಲ್ಲಿ ಜನ ನಮಗೆ ಅಧಿಕಾರ ಕೊಟ್ಟಿದ್ದಾರೆ ಒಳ್ಳೆಯ ಕೆಲಸ ಮಾಡೋಣ ಎನ್ನುವ ಸದ್ಭಾವನೆ ನಿಮ್ಮಲ್ಲಿ ಇವತ್ತು ಕಂಡುಬರುತ್ತಿಲ್ಲ. ಈ ಸರ್ಕಾರ ಎಲ್ಲಾ ಹಂತದಲ್ಲಿ, ಎಲ್ಲಾ ವಿಷಯದಲ್ಲಿ ಇವತ್ತು ಸದನದಲ್ಲಿ ಅಷ್ಟೇ ಅಲ್ಲ, ಇಡೀ ನಾಡಿನ ಜನರ ವಿಶ್ವಾಸವನ್ನು ಕಳೆದುಕೊಂಡಿದೆ. ಈ

ಸರ್ಕಾರದಲ್ಲಿ ಏನು ನಡೆಯುತ್ತಿದೆ ಮಾನ್ಯ ಅಧ್ಯಕ್ಷರೆ? ನಾನು ಹೇಳಿದ ಹಾಗೆ ಜಗಳ, power game, Government has become Government of all promises.

ನೀವು ಕೊಟ್ಟ ಭರವಸೆಗಳನ್ನು ಪಟ್ಟಿ ಮಾಡುವುದಕ್ಕಾಗುತ್ತಿಲ್ಲ. ಎಲ್ಲಿ ಮುಖ್ಯಮಂತ್ರಿಗಳು ಹೋಗುತ್ತಾರೋ, ಎಲ್ಲಿ ಮಂತ್ರಿಗಳು ಹೋಗುತ್ತಾರೋ ಅಲ್ಲಿ, ಭರವಸೆಗಳು. ಇಂಪ್ಲಿಮೆಂಟ್ ಮಾಡುವ ಯಾವ ಭರವಸೆಗಳೂ ಇಲ್ಲ. ಇವತ್ತು ಇದು ಜೋಕ್ ಆಗಿದೆ. ಮುಖ್ಯಮಂತ್ರಿಗಳು ಭರವಸೆ ಕೊಟ್ಟರೆ it has become a laughing stock.

ಜನರು ನಾಡಿನ ಮುಖ್ಯಮಂತ್ರಿಗಳ ಮೇಲೆ, ಮಂತ್ರಿಗಳ ಮೇಲೆ ವಿಶ್ವಾಸವನ್ನು ಕಳೆದು ಕೊಳ್ಳುತ್ತಿದ್ದಾರೆ ಇವು ಯಾವ ತರಹದ ಭರವಸೆಗಳು? ತಮ್ಮ ಜೀವನದಲ್ಲೇ ಇಂಪ್ಲಿಮೆಂಟ್ ಮಾಡದೇ ಇರುವುದಕ್ಕೆ ಆಗಿರುವಂಥ ಭರವಸೆಗಳು. ಹಣಕಾಸಿನ ಬಗ್ಗೆ ಡಿಸಿಪ್ಲೀನ್ ಇಲ್ಲ, ಅದರ ಕಾನ್ಸಿಕ್ವೆನ್ಸ್ ಬಗ್ಗೆ ವಿಚಾರ ಮಾಡುವುದಿಲ್ಲ. ಈ ಪ್ರಕಾರವಾಗಿ ಈ ಸರ್ಕಾರ ನಡೆದಿದೆ. ಇಷ್ಟೊಂದು ಅಶ್ಯೂರೆನ್ಸ್‌ಗಳು ಯಾವ ಸರ್ಕಾರದಿಂದಲೂ ಬಂದಿಲ್ಲ. ಏಕೆಂದರೆ ನಿಮಗೆ ಇಂಪ್ಲಿಮೆಂಟ್ ಮಾಡುವ ಇಚ್ಛೆ ಇಲ್ಲ. ನೀವು ಏನು ಮಾಡುತ್ತಿದ್ದೀರಿ ಜನಕ್ಕೆ ಅಂದರೇ, ಆ ಕ್ಷಣಕ್ಕೆ ಒಂದು ಸುಳ್ಳು ಮಾತು ಹೇಳಿ ಹೋಗುವಷ್ಟೇ ವಿನಃ ಅದಕ್ಕೆ ನಿಜವಾಗಿ ಒಂದು ಪರಿಹಾರ ಕಂಡುಹಿಡಿಯಬೇಕೆನ್ನುವ ವಿಚಾರ ನಿಮ್ಮ ಸರ್ಕಾರದಲ್ಲಿ ಕಂಡು ಬರುವುದಿಲ್ಲ. ಇದೇ ಮಾನ್ಯ ಮುಖ್ಯಮಂತ್ರಿಗಳು ಜೂನ್ 30,1993 ರೊಳಗೆ ಚಿನ್ನಪ್ಪರೆಡ್ಡಿ ಆಯೋಗದ ರಿಪೋರ್ಟ್‌ನ್ನು ಇಂಪ್ಲಿಮೆಂಟ್ ಮಾಡುತ್ತೇನೆಂದು ಹೇಳಿದ್ದರು. ಈ ರೀತಿ ಸದನದಲ್ಲಿ ಹೇಳಿದ ನಂತರ ನೆಕ್ಸ್ಟ್ ಡೇ ನಿಮ್ಮ ಕಾಂಗ್ರೆಸ್ (ಐ) ಪಾರ್ಟಿ ಲೆಜಿಸ್ಲೇಟರ್ಸ್ ಮೀಟಿಂಗ್ ಇತ್ತು. ಅಲ್ಲಿ, ಈ ತರಹ ಭರವಸೆಯನ್ನು ಏಕೆ ಕೊಟ್ರಿ ಎಂದು ಮುಖ್ಯಮಂತ್ರಿಗಳಿಗೆ ಕೇಳಿದ್ದಕ್ಕೆ, ನಾನು ಚಿನ್ನಪ್ಪರೆಡ್ಡಿ ರಿಪೋರ್ಟ್‌ನ್ನು ಇಂಪ್ಲಿಮೆಂಟ್ ಮಾಡುತ್ತೇವೆಂದು ಹೇಳಿಲ್ಲ. ಇಂಪ್ಲಿಮೆಂಟ್ ಮಾಡುವ ಬಗ್ಗೆ ಕನ್ಸಿಡರ್ ಮಾಡುತ್ತೇವೆಂದು ಹೇಳಿದ್ದೇನೆ ಎಂದು ಹೇಳಿದರು. ಏನು ಕಮಿಟ್‌ಮೆಂಟೇ ಇಲ್ಲ. ಬ್ಯಾಕ್‌ವರ್ಡ್ ಕ್ಲಾಸ್‌ದು ಕಮಿಟ್‌ಮೆಂಟ್ ಇಲ್ಲ. ಪರಿಶಿಷ್ಟ ವರ್ಗದವರ ಬಗ್ಗೆ ಕಮಿಟ್‌ಮೆಂಟ್ ಇಲ್ಲ. ಇವತ್ತು ಜಸ್ಟೀಸ್ ರೆಡ್ಡಿಯವರ ರಿಪೋರ್ಟ್‌ನ್ನು ಇಂಪ್ಲಿಮೆಂಟ್ ಮಾಡುವುದಕ್ಕೆ ಯಾರು ಅಡ್ಡ ಬರುತ್ತಿದ್ದಾರೆ? ಏನು ತಾವು ಅಡ್ಡ ಬಂದಿದ್ದೇವೆಯೆ? ಹೇಳಿ. ನಿಮ್ಮ ಪಕ್ಷದವರೇ ಇದಕ್ಕೆ ಅಡ್ಡ ಬಂದಿದ್ದಾರೆ. ನಿಮ್ಮ ಪಕ್ಷದ ಕೆಲವು ಹಿರಿಯ ನಾಯಕರಿಗೆ ಕೆಲವು ಶಾಸಕರಿಗೆ ಇದರ ಇಂಪ್ಲಿಮೆಂಟೇಷನ್ ಬೇಡವಾಗಿದೆ. ಇದರ ಬಗ್ಗೆ ಸಬ್ ಕಮಿಟಿ ರಚನೆ ಮಾಡಿದ್ದೇವೆಂದು ಹೇಳಿದ್ದೀರಿ, ಆ ಸಬ್ ಕಮಿಟಿ ಇದರ ಬಗ್ಗೆ ಚರ್ಚೆ ಮಾಡುವುದಿಲ್ಲ. ಇವತ್ತು ಕೇವಲ ಜನರಿಗೆ ಮೋಸ ಮಾಡಿ ದಿನಗಳನ್ನು ತಳ್ಳಿಕೊಂಡು ಹೋಗುತ್ತಿದ್ದೀರೇ ವಿನಃ ಯಾವ ತರಹದ ಪರಿಹಾರವನ್ನು ಕೊಡುವ ಇಚ್ಛೆಯೂ ನಿಮಗೆ ಇಲ್ಲ. ಆಶಕ್ತಿಯೂ ಇವತ್ತು ನಿಮ್ಮಲ್ಲಿ ಉಳಿದಿಲ್ಲ. ನಿಜವಾದ ಕಮಿಟ್‌ಮೆಂಟ್ ಬ್ಯಾಕ್‌ವರ್ಡ್ ಕ್ಲಾಸ್ ಬಗ್ಗೆ ಇದ್ರೆ ಇಷ್ಟರೊಳಗೆ ಆ ಕಮಿಷನ್ ರಿಪೋರ್ಟ್‌ನ್ನು ಇಂಪ್ಲಿಮೆಂಟ್ ಮಾಡಬೇಕಾಗಿತ್ತು. ಬಂಗಾರಪ್ಪನವರು ಬಂದು ನಾನು ಹಿಂದುಳಿದ ನಾಯಕ ಎಂದು ಹೇಳಿದರು. ಅವರು ಸಹ ಬಂದರು ಹೋದರು. ಅವರು ಜನರಿಗೆ ಏನು ಮಾಡಿದರು? ಇದನ್ನು ಇಂಪ್ಲಿಮೆಂಟ್ ಮಾಡಲಿಕ್ಕೆ ಅವರಿಗೆ ಏನು ಕಷ್ಟ ಇತ್ತು? ವೀರಪ್ಪಮೊಯಿಲಿಯವರಿಗೆ ಏನು ಕಷ್ಟ ಇದೆ ಇಂಪ್ಲಿಮೆಂಟ್ ಮಾಡುವುದಕ್ಕೆ? ಅವರು ರಾಜಕೀಯದಲ್ಲಿ ಇರಬಹುದು, ಹೋಗಬಹುದು, ಕಮಿಟ್‌ಮೆಂಟ್ ಇದ್ರೆ ಇಂಪ್ಲಿಮೆಂಟ್ ಮಾಡಿ. ಯಾರು ವಿರೋಧ ಮಾಡುತ್ತಾರೋ ಅದನ್ನು ಎಕ್ಸ್‌ಪೋಸ್ ಮಾಡಿ. ಅದು ಬಿಟ್ಟು ಯಾವ ಪ್ರಕಾರ

ಟೈಮ್ ಹೋಗುತ್ತದೋ ಆ ಪ್ರಕಾರ ಜನ ಮರೆಯುತ್ತಾರೆಂದು ನಿಮ್ಮ ಸರ್ಕಾರ ತಿಳಿದುಕೊಂಡಿದೆ. ಆದರೆ ಅದು ಸಾಧ್ಯವಿಲ್ಲ. ಇವರು ತಮ್ಮ ಬಜೆಟ್‌ನಲ್ಲಿ ಹಲವಾರು ಭರವಸೆಗಳನ್ನು ಕೊಟ್ಟರು. ಇವೊತ್ತು "ಉದ್ಯೋಗಜ್ಯೋತಿ" ಎಂಬ ಒಂದು ಹೊಸ ಕಾರ್ಯಕ್ರಮವನ್ನು ತರುತ್ತೇವೆ ಎಂದು ಹೇಳಿದರು. ಹೀಗೆ ತಮ್ಮ ಬಜೆಟ್ ಸ್ಪೀಚ್‌ನಲ್ಲಿ ಹಲವಾರು ಆಶ್ವಾಸನೆಗಳನ್ನು ಕೊಟ್ಟರು. ಇದು ಯಾರ ಸಲುವಾಗಿ?

" A comprehensive scheme to encourage and provide support to self-employed persons and unemployed youth who wish to set up units in the tertiary sector will be introduced. For both the target groups..." ಅಂತ ಹೇಳಿದರು.

ಈ ಸ್ಕೀಮ್ ಎಲ್ಲಿ ಇದೆ? ಉದ್ಯೋಗ ಜ್ಯೋತಿ ಇಲ್ಲ, ಈಗ ನಿಮ್ಮದೇ ಜ್ಯೋತಿಯನ್ನು ಹೊರಡಿಸುವ ಪಾಳಿ ಬಂದಿದೆ ಅದರ ನಂತರ ಎರಡನೇನಾಗಿ "ಕೆರೆ ಕಲ್ಯಾಣ' ಯೋಜನೆ. ಇದು ಒಳ್ಳೆಯ ಹೆಸರು, ಇವರಿಗೆ ಒಳ್ಳೆಯ ಹೆಸರುಗಳನ್ನು ಕೊಡಲು ಯಾರು ಅಡ್ವೈಸ್ ಮಾಡುತ್ತಾರೆ? ಇದು ನಮಗೂ ಕೂಡ ಅಧಿಕಾರದಲ್ಲಿದ್ದಾಗ ಹೊಳೆಯಲಿಲ್ಲ. "ಕೆರೆಕಲ್ಯಾಣದಲ್ಲಿ" ಕೆರೆಗಳ ರಿಪೇರಿ ಮಾಡಿಸುವುದು ಇದೆ. ಹಾಗಾದರೆ ನೀವು ಎಲ್ಲಿ ರಿಪೇರಿ ಮಾಡಿಸಿದ್ದೀರಿ ಎಂಬುದನ್ನು ಹೇಳಿ?

ಶ್ರೀ ಗೋಪಾಲ ಮುಕುಂದ ಕಾನಡೆ: – ನಿಮ್ಮ ಕಾಲದಲ್ಲಿ ಗಂಗಾ ಕಲ್ಯಾಣ ಏಕೆ ಆಗಿತ್ತು?

ಶ್ರೀ ಆರ್.ವಿ. ದೇಶಪಾಂಡೆ : – "ಕೆರೆ ಕಲ್ಯಾಣದ" ಬಗ್ಗೆ ಯಾರಾದರೂ ಒಬ್ಬರು ಶಾಸಕರು ಹೇಳಲಿ, ಈ ಯೋಜನೆ ಜಾರಿಗೆ ಬಂದಿದೆ ಎಂದು. ಯಾವುದಾದರೂ ಒಂದು ಮತ ಕ್ಷೇತ್ರದಲ್ಲಿ ಉದ್ಯೋಗ ಜ್ಯೊತಿ ಮತ್ತು ಕೆರೆ ಕಲ್ಯಾಣ ಯೋಜನೆಯನ್ನು ಮಾಡಿದ್ದಾರೆಯೇ ಎಂದು ಹೇಳಲಿ. ಏಕೆ ಇಂಥ ಸುಳ್ಳು ಭರವಸೆಗಳನ್ನು ಕೊಡುತ್ತೀರಿ?

ಶ್ರೀ ವಸಂತ ವಿ. ಸಾಲ್ಯಾನ್: – "ಕೆರೆ ಕಲ್ಯಾಣ" ಯೋಜನೆಯಡಿಯಲ್ಲಿ ನಮ್ಮ ಕ್ಷೇತ್ರದಲ್ಲಿ ಕೆಲಸ ಆಗಿದೆ.

ಶ್ರೀ ಆರ್.ವಿ. ದೇಶಪಾಂಡೆ: – ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅವರು ಮಾಡಿಕೊಂಡಿರಬಹುದು. ಬೇರೆ ಎಲ್ಲಿಯೂ ಆಗಿಲ್ಲ.

(ಗೊಂದಲ)

ಶ್ರೀ ಬಿ.ಹೆಚ್. ಬನ್ನಿಕೋಡ್: – 'ಕೆರೆ ಕಲ್ಯಾಣ' ಯೋಜನೆಗೆ ಬಜೆಟ್‌ನಲ್ಲಿ ಎಷ್ಟು ಹಣ ಇಡಲಾಗಿತ್ತು ಮತ್ತು ಎಷ್ಟು ಖರ್ಚಾಗಿದೆ ಎಂಬುದನ್ನು ಹೇಳಿ?

ಶ್ರೀ ವಾಟಾಳ್‌ನಾಗರಾಜ್: – "ಕೆರೆ ಕಲ್ಯಾಣ" ಅಂದರೆ ಏನು?

ಶ್ರೀ ಆರ್. ವಿ. ದೇಶಪಾಂಡೆ: – ಈ ಯೋಜನೆಯಲ್ಲಿ ಕೆರೆಗಳ ರಿಪೇರಿ ಮುಂತಾಗಿ ಬರುತ್ತದೆ. ಬಜೆಟ್‌ಬುಕ್‌ನಲ್ಲಿ ಎಲ್ಲವನ್ನೂ ಹೇಳಿದ್ದಾರೆ.

ಶ್ರೀ ವಾಟಾಳ್‌ನಾಗರಾಜ್: – ನೀರು ಬತ್ತಿ ಹೋದ ಕೆರೆಗಳ ಜಾಗದಲ್ಲಿ ಸೈಟ್ ಮಾಡುವುದು ಕೂಡ ಇದಕ್ಕೆ ಬರುತ್ತದೋ?

(ಸಭೆಯಲ್ಲಿ ನಗು)

ಶ್ರೀ ಆರ್.ವಿ.ದೇಶಪಾಂಡೆ: - ಮುಂದೆ ಸಂಪದ, "I propose to launch a new scheme "Sampada" with the object of developing income-maximising, integrated.." ಎಲ್ಲಿದೆ ಈ ಸಂಪದ? ಈ ಕಾರ್ಯಕ್ರಮ ನಮಗೇ ಗೊತ್ತಿಲ್ಲ? ದೇವರೇ ಕಾಪಾಡಬೇಕು. ಇದಾದ ನಂತರ ನಿಮ್ಮ ಸ್ಕೀಮ್‌ಗಳಿಗೆ ಲೆಕ್ಕವೇ ಇಲ್ಲ. ಇನ್ನು ಮೀನುಗಾರಿಕೆಗೆ ಸಂಬಂಧಪಟ್ಟ ಯೋಜನೆ "ನೀಲಿ ಕ್ರಾಂತಿ" . ನಿಮ್ಮ ಉತ್ತರ ಕನ್ನಡ ಜಿಲ್ಲೆಯಲ್ಲಿ ಏನು "ನೀಲಿಕ್ರಾಂತಿ" ಮಾಡಿದ್ದೀರಿ? ಮಾನ್ಯ ಮೀನುಗಾರಿಕೆ ಸಚಿವರು ಇದಕ್ಕೆ ಉತ್ತರ ಹೇಳ ಬೇಕು. ಮೀನುಗಾರಿಕೆ ಬರುವುದು ಹೆಚ್ಚಾಗಿ ಉತ್ತರ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ. ನೀಲಿ ಕ್ರಾಂತಿ ಆಗಿದ್ದರೆ ನೀವು ಹೇಳಬೇಕು, ನನಗಂತೂ ಕಾಣಿಸಲಿಲ್ಲ. ಆದರ ನಂತರ "ಸಾಗರ ದೀಪ" ಎಂಬ ಯೋಜನೆ. "It is proposed to revive "Sagara Deepa" scheme to assist about 6000 poor and traditional fishermen through a 50 interest subsidy for loans..." ಇದು ಕೂಡ ನಿಮ್ಮದೇ ಕಾರ್ಯಕ್ರಮ. ಆದರಲ್ಲಿ ಏನು ನಡೆದಿದೆ ಎಂದು ಗೊತ್ತಾಗುತ್ತಾ ಇಲ್ಲ. ಇದರಿಂದ ಆರು ಸಾವಿರ ಜನರಿಗೆ ಸಹಾಯ ಆಗಬೇಕು. ಆದರೆ ಇವೊತ್ತು ಆಗಸ್ಟ್ ಮುಗಿಯಿತು. ಅರ್ಧದಷ್ಟಾದರೂ ಆಗಬೇಕಾಗಿತ್ತು. ಎಲ್ಲಿದೆ ನಿಮ್ಮ ಸಾಗರ ದೀಪ? ನಮಗೆ ಸಾಗರ ಮಾತ್ರ ಕಾಣುತ್ತದೆ, ದೀಪ ಎಲ್ಲಿದೆ? No sagar deepa.

ಶ್ರೀ ವಸಂತ ವಿ.ಸಾಲ್ಯಾನ: - ಬೋಟ್‌ಗಳಿಗೆ ಇಂಜಿನ್ ಫಿಕ್ಸ್ ಮಾಡಿ ಸಹಾಯ ಮಾಡುತ್ತಾ ಇದ್ದೇವೆ. ದಕ್ಷಿಣ ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿ ಈ ಕೆಲಸವನ್ನು ಮಾಡುತ್ತಾ ಇದ್ದೇವೆ.

ಶ್ರೀ ಆರ್.ವಿ.ದೇಶಪಾಂಡೆ: - ಒಳ್ಳೆಯದು, ಆ ಯೋಜನೆಯನ್ನು ಮಾಡಿ. ಇನ್ನು "ಆಶ್ರಯ ಯೋಜನೆ". ಇದರ ಬಗ್ಗೆ ಬಹಳಷ್ಟು ಹೇಳಬೇಕಾಗುತ್ತದೆ. ಇದೊಂದು ಸ್ಕ್ಯಾಂಡಲ್ ಆಫ್ ಸೆಂಚುರಿಯಾಗಿತ್ತು, ಬಂಗಾರಪ್ಪನವರ ಕಾಲದಲ್ಲಿ. ನಾನು ತಿಳಿದುಕೊಂಡಿದ್ದೆ ಬಂಗಾರಪ್ಪನವರು ಹೋದರು, ಈ ಮುಖ್ಯಮಂತ್ರಿಗಳು ಇದರ ಬಗ್ಗೆ ಏನಾದರೂ ಮಾಡ್ತಾರೆ ಅಂತ. 30-35 ಕೋಟಿ ರೂ.ಗಳು ಏನು ಲೂಟಿಯಾಗಿದೆ, ಇದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತಾರೆ ಅಂತ ತಿಳಿದುಕೊಂಡಿದ್ದೆ. ನಿಲುವಳಿ ಸೂಚನೆ ತಂದು ಚರ್ಚೆ ಮಾಡಿದೆವು. ನಾವು ಸಿಬಿಐ ಎನ್‌ಕ್ವೈರಿ ಕೇಳಿದೆವು, ಸಿಓಡಿ ಎನ್‌ಕ್ವೈರಿ ಮಾಡಿದಿರಿ. ಎಲ್ಲಿ ಏನು ಸಿಓಡಿ ಎನ್‌ಕ್ವೈರಿ ನಡೆಯುತ್ತಿದೆ ನಿಮ್ಮದು? ಎಷ್ಟು ಜನರನ್ನು ಅರೆಸ್ಟ್ ಮಾಡಿದ್ದೀರಿ? ಏನು ಕ್ರಮ ತೆಗೆದುಕೊಂಡಿದ್ದೀರಿ? ಯಾರು ನಿಮ್ಮ ಆದೇಶದ ಮೇಲೆ ಕೆಲಸ ಮಾಡಿದ್ದರೋ ಅವರನ್ನು ನೀವು ಅರೆಸ್ಟ್ ಮಾಡ್ತೀರಿ, ಇದರಲ್ಲಿ ಮುಖ್ಯ ಸೂತ್ರಧಾರಿ ಅವರ ಮೇಲೆ ಯಾವ ಕ್ರಮವೂ ಇಲ್ಲ; ಏಕೆ? ಕೃಷ್ಣಪ್ಪನವರ ಮೇಲೆ ಕ್ರಮ ತೆಗೆದುಕೊಳ್ಳುವುದಿಲ್ಲ, ಏಕೆ ನಿಮಗೆ ಸಪೋರ್ಟ್ ಮಾಡ್ತಾರೆ ಅಂತನಾ? ಸಾಂಡ್ರಾ ಮೇಲೆ ನೀವು ಕ್ರಮ ತೆಗೆದುಕೊಳ್ಳುವುದಿಲ್ಲ, ಏಕೆ ನಿಮಗೆ ಸಪೋರ್ಟ್ ಮಾಡ್ತಾರೆ ಅಂತನಾ? ಲಂಬಾಣಿ ಮೇಲೆ ಕ್ರಮ ತೆಗೆದುಕೊಳ್ಳುವುದಿಲ್ಲ, ನಿಮಗೆ ಸಪೋರ್ಟ್ ಮಾಡ್ತಾರೆ ಅಂತನಾ? ಈಗ ಕಾಗೋಡು ತಿಮ್ಮಪ್ಪ ನಿಮಗೆ ಸಹಾಯ ಮಾಡ್ತಾ ಇದ್ದಾರೆ. ಇದೇ ನಿಮ್ಮ ಸ್ವಚ್ಛ, ಕ್ಲೀನ್ ಸರ್ಕಾರ ಇದ್ದರೆ, ಇಂತಹ ಕ್ಲೀನ್ ಸರ್ಕಾರ ನಮ್ಮ ನಾಡಿನ ಜನರಿಗೆ, ನಮಗೆ ಬೇಡ. ಅಧ್ಯಕ್ಷರೇ 35 ಕೋಟಿ ರೂ. ಲೂಟಿಯಾಗಿದೆ. ಒಬ್ಬ ನಾಗರಾಜ್ ಅನ್ನುವ ಕಂಟ್ರಾಕ್ಟರ್ ಐದೂವರೆ ಕೋಟಿ ರೂ. ಯಾವುದೇ ಸೆಕ್ಯೂರಿಟಿ ಇಲ್ಲದೆ ಅಡ್ವಾನ್ಸ್ ತಗೊಂಡುಹೋಗ್ತಾನೆ ಕೇವಲ ಕಮೀಶನ್ ಮೇಲೆ. ಇವತ್ತು ಆ ಎಕ್ಸಿಕ್ಯುಟಿವ್ ಇಂಜಿನಿಯರ್ ಮೇಲೆ ಕ್ರಮ ತೆಗೆದುಕೊಳ್ಳುತ್ತಾರೆ,

ಇವರ ಸರ್ಕಾರಕ್ಕೆ ಇದರಿಂದ ನಾಚಿಕೆ ಬರಬೇಕು. ಅಧಿಕಾರದಲ್ಲಿದ್ದಾಗ ನಾವು ಆದೇಶ ಕೊಟ್ಟಾಗ ಸರಿಯೋ ತಪ್ಪೋ ಆ ಜವಾಬ್ದಾರಿಯನ್ನು ನಾವು ತೆಗೆದುಕೊಳ್ಳಬೇಕು. ನಾನು ಮಂತ್ರಿಯಾಗಿ ಆದೇಶ ಕೊಟ್ಟಿದ್ದರೆ ಕೇವಲ ಒಬ್ಬ ಸಣ್ಣ ಅಧಿಕಾರಿಯನ್ನು ಸ್ಕೇಪ್‌ಗೋಟ್‌ಗಳನ್ನಾಗಿ ಮಾಡಿಕೊಂಡು ಹೊಗ್ತಿದ್ದೀರಿ, ಮುಖ್ಯ ಸೂತ್ರಧಾರಿಗಳು ಯಾರು? ಏಕೆ ನೀವು ಕ್ರಮ ತೆಗೆದುಕೊಳ್ಳುವುದಿಲ್ಲ? ಯಾಕೆ ಕಾಗೋಡು ತಿಮ್ಮಪ್ಪನವರ ವಿರುದ್ಧ ಕ್ರಮ ತೆಗೆದುಕೊಳ್ಳುವುದಿಲ್ಲ? ಅವರು ಅಧ್ಯಕ್ಷರಿದ್ದರು, ಅವರದೂ ಜವಾಬ್ದಾರಿ ಇದೆ. ಇದರ ಬಗ್ಗೆ ಯಾವ ಉತ್ತರವೂ ಮುಖ್ಯಮಂತ್ರಿ ಕಡೆಯಿಂದ ಇಲ್ಲ. ಮುಖ್ಯಮಂತ್ರಿ ಏನು ಭರವಸೆ ಕೊಟ್ಟರು, ಇವರು ಆಶ್ರಯದ ಬಗ್ಗೆ of the 4.27 lakh siteless families in the State as on 1.1.1993, 2 lakh will be given free sites in 1993-94 for which a budget provision of Rs. 10.00 crores has been made; the balance will be covered the year after. Of the target of 2.35 lakh houses to be constructed in 1991-92. Only 1579 houses were completed upto December 1992. After review, it is now proposed that 1.06 lakh houses at a total cost of Rs. 160.50 crores will be constructed by June 1993, and a further 1 lakh houses taken up during 1993-94. ಅಂತ ಹೇಳಿದ್ದರು. ಬಂಗಾರಪ್ಪನವರು ಮುಖ್ಯಮಂತ್ರಿಯಾಗಿ ಇದ್ದಾಗ 2.35 ಲಕ್ಷ ಮನೆಗಳನ್ನು ಆಶ್ರಯ ಯೋಜನೆಯಲ್ಲಿ ಕಟ್ಟುತ್ತೇವೆಂದು ಹೇಳಿದ್ದರು. ಮುಖ್ಯಮಂತ್ರಿಯವರು ಈ ಬಜೆಟ್ ಮಂಡನೆ ಮಾಡುವಾಗ ಹೇಳಿದರು ಕೇವಲ 1571 ಮನೆಗಳು ಆಗಿವೆ ಎಂದು. ಇವರದು ಮತ್ತೊಂದು ಭರವಸೆ ಜೂನ್ 1993ರ ಒಳಗಾಗಿ ಒಂದು ಲಕ್ಷ 06 ಮನೆ ಕಟ್ಟುತ್ತೇವೆ ಅಂತ. ಆದರೆ, ಎಲ್ಲಿವೆ ಮನೆ? ಮೊನ್ನೆ ಹೌಸಿಂಗ್ ಮಿನಿಸ್ಟರ್ ಸಾಂಡ್ರಾ ಸಾಹೇಬರೇ ಒಪ್ಪಿಕೊಂಡರು; ಏನೆಂದರೆ, ಇಡೀ ರಾಜ್ಯದಲ್ಲಿ ಇವತ್ತಿನತನಕ ಕಟ್ಟಿದ ಮನೆಗಳು 7 ಸಾವಿರ ಎಂದು; ಜೂನ್‌ನಲ್ಲಿ ಒಂದು ಲಕ್ಷ 6 ಸಾವಿರ ಮನೆ ಕಟ್ತೇವೆ ಅಂತ ಹೇಳೋ ಮುಖ್ಯಮಂತ್ರಿ ಒಂದುಕಡೆ ಆದರೆ ನಿಮ್ಮ ಸಚಿವರು ರಿಪ್ಲೈ ಕೊಡ್ತಾರೆ ಆಗಸ್ಟ್ ತನಕ ಆಗಿರುವ ಮನೆಗಳು 7 ಸಾವಿರ ಎಂದು; ಬಡಜನರಿಗೆ ಯಾಕೆ ಮೋಸ ಮಾಡ್ತಿದ್ದೀರಿ? ಎಲ್ಲಿ ನಿಮ್ಮ ನಿವೇಶನಗಳ ವಿತರಣೆ ಆಗಿದೆ? ಯಾವುವು ನಿಮ್ಮ ಕಾರ್ಯಕ್ರಮಗಳು? ಇವತ್ತು ಆಶ್ರಯ ಯೋಜನೆಯಲ್ಲಿ ಹಣವನ್ನು ಲೂಟಿ ಮಾಡೋದಿಕ್ಕೆ ಅವಕಾಶ ಕೊಟ್ಟು ಲೂಟಿ ಮಾಡಿದ ಜನರಿಗೆ ತಾವು ಸಂರಕ್ಷಣೇನೂ ಕೊಟ್ಟರೆ ಮನೆ ಕೊಡಲಿಕ್ಕೆ ನಿಮಗೆ ಹೇಗೆ ಸಾಧ್ಯವಿದೆ? ನಿಮ್ಮ ಕಡೆ ಇವತ್ತು ಮನೆ ಕಟ್ಟಲಿಕ್ಕೆ ಹಣ ಇಲ್ಲ. ನನ್ನದೇ ಕ್ಷೇತ್ರವಾದ ಹಳಿಯಾಳದಲ್ಲಿ ಸ್ವಲ್ಪ ಮನೆ ಬಿಟ್ಟರೆ ಮುಳುಗೋಡು ಮತ್ತು ಯಲ್ಲಾಪುರದಲ್ಲಿ ಒಂದು ಮನೇನೂ ಇಲ್ಲ. ಹಾಗಾಗಿ ಮುಖ್ಯಮಂತ್ರಿಗಳು ಇವತ್ತು ಬಹಳ ಜವಾಬ್ದಾರಿಯಿಂದ ಉತ್ತರ ಕೊಡಬೇಕು. Government has become Government of promises, false promises. This has become a non-performance Government ಎಂದು ನಾನು ಮೊದಲೇ ಹೇಳಿದೆ. ಈ ಸರ್ಕಾರದಿಂದ ಇವತ್ತು ನಾವು ಏನನ್ನು ಅಪೇಕ್ಷೆ ಮಾಡಲಿಕ್ಕೂ ಸಾಧ್ಯವಿಲ್ಲ. ಒಂದು ಲಕ್ಷ ಮನೆಯನ್ನು ಅಡಿಶನಲ್ ಆಗಿ ಕಟ್ಟುತ್ತೇವೆಂದು ಹೇಳಿದ್ದಾರೆ. ಒಂದು ಲಕ್ಷದ 6 ಸಾವಿರ ಮನೆಯೂ ಆಗಿಲ್ಲ. ಕೇವಲ 7 ಸಾವಿರ ಮನೆಯಾಗಿವೆ ಎಂದು ತಾವು ಒಪ್ಪಿಕೊಳ್ಳುತ್ತೀರಿ, ಆ ಫಿಗರ್‌ನ್ನು ನಾನು ಒಪ್ಪುವುದಿಲ್ಲ. ನಾನು ರಾಜ್ಯದ 20 ಜಿಲ್ಲೆಗಳಲ್ಲಿ ಪ್ರವಾಸ ಮಾಡಿದ್ದೇನೆ. ಎಲ್ಲೆಲ್ಲಿ ನಾನು ಹೋಗಿದ್ದೆ, ಅಲ್ಲಿನ ಎಲ್ಲಾ

ಜಿಲ್ಲಾಧಿಕಾರಿಗಳ ಹತ್ತಿರ ಚರ್ಚೆ ಮಾಡಿದ್ದೇನೆ. ನನ್ನ ದೃಷ್ಟಿಯಲ್ಲಿ ರಾಜ್ಯದಲ್ಲಿ 4 ಸಾವಿರ ಮನೆಗಳನ್ನು ಸಹ ಕಟ್ಟಿ ಆಗಿಲ್ಲ. ಛಾವಣಿ ಲೆವಲ್‌ಗೆ ಬಂದಿವೆ, ಲಿಂಟಲ್ ಲೆವೆಲ್‌ಗೆ ಬಂದಿವೆ, ಅಂತ ಎಲ್ಲಾ ಫಾಲ್ಸ್ ಉತ್ತರವನ್ನು ಕೊಟ್ಟಿದ್ದಾರೆ. ಆದ್ದರಿಂದ ಆ ಫಿಗರ್ಸ್ ಅನ್ನು ನಾವು ನಂಬಲಿಕ್ಕೆ ಸಾಧ್ಯವಿಲ್ಲ. ಇವರು ಅಧಿಕಾರಕ್ಕೆ ಬಂದು ಮೂರುಮುಕ್ಕಾಲು ವರ್ಷವಾಯಿತು, ಮೂರುಮುಕ್ಕಾಲು ವರ್ಷಗಳಲ್ಲಿ ಇವರ ಲೆಕ್ಕದ ಪ್ರಕಾರ ಇವರು ಕಟ್ಟಿದ ಮನೆಗಳು 8 ಸಾವಿರ. ನನ್ನ ಲೆಕ್ಕದ ಪ್ರಕಾರ ಅಲ್ಲ; What right you have got to say you are the Government of poor ಅಂತ ಹೇಳುವುದಕ್ಕೆ ನಿಮಗೆ ಏನು ಅಧಿಕಾರ ಇದೆ? ಡಾ : ಬಾಬಾ ಸಾಹೇಬ್ ಅಂಬೇಡ್ಕರ್ ಶತಮಾನೋತ್ಸವ ವರ್ಷದ ಅಂಗವಾಗಿ 25 ಸಾವಿರ ಮನೆಗಳನ್ನು ಕಟ್ಟುತ್ತೇವೆಂದು ಹೇಳಿದರು, ಆದರೆ ಒಂದೇ ಮನೆ ಕೂಡ ಕಟ್ಟಿ ಆಗಿಲ್ಲ. I am taking a challenge ತೋರಿಸಿ; ಇವತ್ತಿನವರೆಗೂ ಒಂದು ಮನೆಯನ್ನೂ ಕಟ್ಟಿಲ್ಲ. ಎಲ್ಲಿ ಕಟ್ಟಿದ್ದೀರಿ ಹೇಳಿ; ನಾನು ನಿಮ್ಮ ಜೊತೆಯಲ್ಲಿ ನೋಡಲಿಕ್ಕೆ ಬರುತ್ತೇನೆ. ಒಂದು ಮನೆಯೂ ಆಗಿಲ್ಲ. ಮತ್ತೊಂದು ಯೋಜನೆ "ನೆರಳಿನ ಭಾಗ್ಯ" ಇದರಲ್ಲಿ ಒಂದು ಲಕ್ಷ ಮನೆಯನ್ನು ಕಟ್ಟುವ ಯೋಜನೆಯಿದೆ.

ಈ ಆಶ್ರಯಯೋಜನೆಯಲ್ಲಿ 2 ಲಕ್ಷ 6 ಸಾವಿರ In addition to ಆಶ್ರಯ ಅಂಬೇಡ್ಕರ್ ಮತ್ತೊಂದು ನೆರಳಿನ ಭಾಗ್ಯ ಅದರಲ್ಲಿ ಒಂದು ಲಕ್ಷ ಮನೆ. ಆ ಯೋಜನೆ ಬಗ್ಗೆ ನಮಗೆ ಗೊತ್ತಿಲ್ಲ. ಗೊತ್ತಿದ್ದರೆ ಹೇಳಿ, ನೀವೆಲ್ಲ ಪಂಚಾಯತ್ ಸಮಿತಿಯ ಅಧ್ಯಕ್ಷರಾಗಿದ್ದೀರಿ, ಯಾರಿಗಾದರೂ ಮನೆ ಅಲಾಟ್ ಮಾಡಿದ್ದೀರಾ; ನಿಮಗೆ ಏನಾದರೂ ಸರ್ಕ್ಯುಲರ್ ಬಂದಿದೆಯಾ?

ಶ್ರೀ ಎಂ. ಮಹದೇವ್ :– ನಾವು ಬಹಳ ಮನೆಗಳನ್ನು ಕಟ್ಟಿದ್ದೇವೆ. ಸತ್ಯ ಬಿಟ್ಟು ಸುಳ್ಳು ಅಂತೂ ನಾವು ಹೇಳುವುದಿಲ್ಲ. ಅದನ್ನು ಮಾತ್ರ ನಮಗೆ ಬಿಟ್ಟುಬಿಡಿ.

ಶ್ರೀ ಆರ್.ವಿ. ದೇಶಪಾಂಡೆ :– ನೆರಳಿನ ಭಾಗ್ಯದ ಮನೆಯ ಆರ್ಡರ್ ನಮಗೆ ಬಂದು ಮುಟ್ಟಿಲ್ಲ.

ಶ್ರೀ ಎಂ. ಮಹದೇವ್ :– ನಾವು ಮಾಡಿದ್ದೇವೆ. ಕೆಲವು ಆಶ್ರಯ ಸ್ಕೀಮ್‌ನಲ್ಲಿಯೂ ಮಾಡಿದ್ದೇವೆ. ನೆರಳಿನ ಭಾಗ್ಯಯೋಜನೆಯಲ್ಲಿಯೂ ಮಾಡಿದ್ದೇವೆ. ನಮ್ಮ ಕ್ಷೇತ್ರದಲ್ಲಿ ಮಾಡಿದ್ದೇವೆ.

ಶ್ರೀ ಆರ್.ವಿ.ದೇಶಪಾಂಡೆ :– ಇವತ್ತು ಎಲ್ಲ ಪೊಳ್ಳು ಘೋಷಣೆಗಳು ಹಾಗೂ ಪೊಳ್ಳು ಮಾತುಗಳನ್ನಾಡುತ್ತಿದ್ದೀರಿ. ಮತ್ತೊಂದು ಯೋಜನೆ ಅಂದರೆ ಈ ಹಿಂದುಳಿದ ಜನಾಂಗಕ್ಕೆ ಆಶ್ರಯದಲ್ಲಿ ಸ್ಕೂಲ್ ಕಟ್ಟಡ ಕಟ್ಟಿಕೊಡುವುದು. ಆ ಯೋಜನೆಯನ್ನು ಇನ್ನೂ ಜಾರಿ ಮಾಡಿಲ್ಲ. ವಿಮೆನ್ ಡೆವಲಪ್‌ಮೆಂಟ್ ಕಾರ್ಪೊರೇಷನ್ ಮಾಡುತ್ತೇವೆಂದು ಹೇಳಿದರು; ಅದನ್ನು ಮಾಡುವ ಬಗ್ಗೆ ಯಾವ ಕ್ರಮ ಇಲ್ಲ. ಹೀಗೆ ನೂರಾರು ಉದಾಹರಣೆಗಳನ್ನು ಕೊಡಬಹುದು. pension to war veterans ಅಂತ ಹೇಳಿದರು. ಎರಡನೆಯ ಮಹಾಯುದ್ಧದಲ್ಲಿ ಹೋರಾಡಿದವರಿಗೆ 300 ರೂಪಾಯಿಗಳನ್ನು ಕೊಡುತ್ತೇವೆಂದು ಹೇಳಿದರು, ಇದರ ಬಗ್ಗೆ ಏನಾಗಿದೆ? ಯಾರು ಸ್ವಾತಂತ್ರ್ಯದ ಸಲುವಾಗಿ ಹೋರಾಟ ಮಾಡಿದರು, ಎರಡನೆಯ ಮಹಾ ಯುದ್ಧದಲ್ಲಿ ಯಾರು ಹೋರಾಟ ಮಾಡಿದರು, ಅವರಿಗೊಂದು ಕಮಿಟ್‌ಮೆಂಟ್ ಮಾಡಿ ಜಿ.ಓ. ಇಷ್ಯೂ ಮಾಡಲಿಲ್ಲ; ಅದೇ ಪ್ರಕಾರ ಆಶಾಕಿರಣ ಸ್ಕೀಮ್. ಹೀಗೆ ಹಲವಾರು ಯೋಜನೆಗಳು ಕೇವಲ ಇವತ್ತು ಪೊಳ್ಳು ಘೋಷಣೆಯಾಗುತ್ತಿದೆಯೇ ವಿನಃ ಇದರ ಬಗ್ಗೆ ಯಾವುದೇ ಕ್ರಮ ತೆಗೆದುಕೊಂಡಿಲ್ಲ. Land reformsನಲ್ಲಿ ಇವತ್ತು 18 ಸಾವಿರ

ಕೇಸಸ್‌ಗಳು ಹೈಕೋರ್ಟಿನಲ್ಲಿ ಪೆಂಡಿಂಗ್ ಇವೆ. ನಾವು ಅದಕ್ಕೆ ಸ್ಪೆಷಲ್ ಕೋರ್ಟ್ ಮಾಡಿ ಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳಿದರು, ಆದರ ಬಗ್ಗೆಯೂ ಕ್ರಮ ತೆಗೆದುಕೊಂಡಿಲ್ಲ. ಮಾನ್ಯ ವೀರೇಂದ್ರ ಪಾಟೀಲರು ಮುಖ್ಯಮಂತ್ರಿಯಾಗಿದ್ದಾಗ ಏನು ನಾಡಿನ ಜನರಿಗೆ ಭರವಸೆಯನ್ನು ಕೊಟ್ಟರೋ, ಯಾವ ಯೋಜನೆಗಳನ್ನು ಘೋಷಣೆ ಮಾಡಿದ್ದರೋ ಅವೆಲ್ಲ ಮಾನ್ಯ ಬಂಗಾರಪ್ಪನವರ ಕಾಲದಲ್ಲಿ ಹಾರಿಹೋದವು. ಯಾವ ಯೋಜನೆಯೂ ಜಾರಿಗೆ ಬಂದಿಲ್ಲ. ಮಾನ್ಯ ಬಂಗಾರಪ್ಪನವರ ಕಾಲದ್ದು ವಿಶ್ವ, ಆಶ್ರಯ, ಅಕ್ಷಯ, ಶುಶ್ರೂಷ,ಆರಾಧನಾ ಹೀಗೆ ನೂರಾರು ಸ್ಕೀಮ್‌ಗಳು ಇವೆ; ಅದೊಂದು ಪಟ್ಟಿಯೇ ಇದೆ. ಮಾನ್ಯ ವೀರಪ್ಪಮೊಯಿಲಿಯವರು ಬಂದಮೇಲೆ ಅವು ಹೋದವು. ಅಂದರೆ ಕೇವಲ ಮುಖ್ಯಮಂತ್ರಿಯ ಬದಲಾವಣೆಯಿಂದಾಗಿ ಹೊಸಹೊಸ ಶಬ್ದಗಳನ್ನು ಉಪಯೋಗ ಮಾಡಿಕೊಂಡು ನೀವು ಹೊಸ ಯೋಜನೆಯನ್ನು ಮಾತ್ರ ಘೋಷಣೆ ಮಾಡುತ್ತಿದ್ದೀರೇ ವಿನಃ ಅದಕ್ಕೆ ಸರಿಯಾದಂತಹ ಬಜೆಟ್ ಕೊಟ್ಟಿಲ್ಲ. ಆದನ್ನು ಕಾರ್ಯಗತ ಮಾಡಬೇಕೆಂದು ನಿಮ್ಮ ಇಚ್ಛೆ ಇಲ್ಲ. ಹಾಗಾಗಿ ಈ ಸರ್ಕಾರ ಕೇವಲ ಪೊಳ್ಳು ಸರ್ಕಾರ, ಪೊಳ್ಳು ಘೋಷಣೆಯ ಸರ್ಕಾರವಾಗಿದೆ. ಇವರ ಕಡೆಯಿಂದ ಯಾವ ಸಾಧನೆಯನ್ನು ಸಹ ನಾವು ಅಪೇಕ್ಷೆ ಮಾಡಲಿಕ್ಕೆ ಸಾಧ್ಯವಿಲ್ಲ. ಇವತ್ತು ರಾಜ್ಯದ ಹಣಕಾಸಿನ ಬಗ್ಗೆ ಕಳೆದ ಆರು ತಿಂಗಳಿಂದಲೂ ಚರ್ಚೆ ನಡೆಯುತ್ತಿದೆ. ನಾನು ಬಜೆಟ್ ಮೇಲೆ ಮಾತನಾಡುವಾಗಲೂ ಕೂಡ ಈ ಸರ್ಕಾರ ದಿವಾಳಿತನದಲ್ಲಿದೆ, ಸರ್ಕಾರದ ಆರ್ಥಿಕ ಪರಿಸ್ಥಿತಿ ಸರಿ ಇಲ್ಲ ಎಂದು ಹೇಳಿದ್ದೇನೆ; You are entering into footsteps of Kerala ಎಂದಿದ್ದಕ್ಕೆ ಮುಖ್ಯಮಂತ್ರಿಗಳು ಇಲ್ಲ ಇಲ್ಲ, sound financial position ಇದೆ ಅಂತ ಹೇಳುತ್ತಾರೆ. ಏನು ಕಷ್ಟ ಇಲ್ಲ, ಏನು ತೊಂದರೆ ಇಲ್ಲ ಎಂದು ಹೇಳುತ್ತಾ ಬಂದರು. ಹಾಗಾದರೆ ಇವತ್ತು ಪೇಮೆಂಟ್ಸ್ ಏತಕ್ಕೆ ಆಗುತ್ತಿಲ್ಲ? ಮಾನ್ಯ ಉಪಮುಖ್ಯಮಂತ್ರಿಗಳವರೇ ಮೊನ್ನೆ ಅದನ್ನು ಅಡ್ಮಿಟ್ ಮಾಡಿದರು. ಕಾವೇರಿ ಮತ್ತು ಕೃಷ್ಣ ಬೇಸಿನ್‌ನಲ್ಲಿ ಏನು ಕೆಲಸ ನಡೆಯುತ್ತಿದೆ, ಅಲ್ಲಿ ಪೆಂಡಿಂಗ್ ಬಿಲ್ಸ್ 80 ಕೋಟಿ ಇದೆ ಎಂದು ಉಪಮುಖ್ಯಮಂತ್ರಿಗಳು ಹೇಳುತ್ತಾರೆ. ಫೈನಾನ್ಸ್ ಪೊಜಿಷನ್ ಸರಿ ಇದ್ದರೆ ಈ ಪೆಂಡಿಂಗ್ ಬಿಲ್ಸ್‌ಗಳು ಏತಕ್ಕೆ ಉಳಿಯಿತು? ಕಂದಾಯ ಸಚಿವರು ಕೂಡ ಫೈನಾನ್ಸ್ ಪೊಜಿಶನ್ ಸರಿ ಇಲ್ಲ ಕಷ್ಟ ಇದೆ ಎಂದು ಹೇಳಿದ್ದಾರೆ.

ಶ್ರೀ ಎಂ.ರಾಜಶೇಖರಮೂರ್ತಿ(ಕಂದಾಯ ಸಚಿವರು):- ನಮಗೆ ಸುಳ್ಳು ಹೇಳುವುದಕ್ಕೆ ಬರುವುದಿಲ್ಲ.

ಶ್ರೀ ಆರ್.ವಿ.ದೇಶಪಾಂಡೆ :- ನಿಮ್ಮ ಇಲಾಖೆಯಲ್ಲಿ ಎಷ್ಟೋ ಕಡೆ ಗುಡಿಗಳನ್ನು ಕಟ್ಟುವುದಕ್ಕೆ ಹಣ ಕೊಟ್ಟರೆ ಕೈಗೆ ಇನ್ನೂ ಹಣ ಮುಟ್ಟಿಲ್ಲ. ದೇವಸ್ಥಾನಗಳನ್ನು ಕಟ್ಟಲಿಕ್ಕೆ ಮಾರ್ಚಿಯಲ್ಲಿ ಮಂಜೂರಾದಂಥ ಹಣವನ್ನು ಇನ್ನೂ ಏತಕ್ಕೆ ಕೊಟ್ಟಿಲ್ಲ? ವಕ್ಫ್ ಗ್ರಾಂಟ್ಸ್ ಮಾರ್ಚಿಯಲ್ಲಿ ಕೊಟ್ಟಿದ್ದು? ಏತಕ್ಕೆ ಇದುವರೆಗೂ ಮುಟ್ಟುತ್ತಿಲ್ಲ? ನೀವು ಅಲ್ಪಸಂಖ್ಯಾತರ ಕಲ್ಯಾಣ ಮಾಡುವ, ಹಿಂದುಳಿದ ಜನಾಂಗದ ಕಲ್ಯಾಣವನ್ನು ಮಾಡುವ ಸರ್ಕಾರಕ್ಕೆ ಬೇಸಿಕ್ ಮಿನಿಮಮ್ ವಕ್ಫ್ ಗ್ರಾಂಟ್ ಎಂಡೋಮೆಂಟ್ ಗ್ರಾಂಟ್‌ಗಳನ್ನು ಕೊಡುವ ಒಂದು ಶಕ್ತಿ ಏತಕ್ಕೆ ನಿಮಗಿಲ್ಲ? ಹೀಗಾಗಿ ಇವತ್ತು ಎಲ್ಲಾ ಹಂತದಲ್ಲೂ ಫೈನಾನ್ಸ್ ಪೊಜಿಷನ್ ಸರಿ ಇಲ್ಲ. ಆದರೂ ಫೈನಾನ್ಸ್ ಪೊಜಿಷನ್ ಸರಿ ಇದೆ, ಬಹಳ ಚೆನ್ನಾಗಿದೆ ಎಂದು ಹೇಳುತ್ತಾರೆ, ಅವರು ಬಜೆಟ್ ಗ್ರಾಂಟ್ಸ್ ಎಷ್ಟು ಕೊಟ್ಟಿದ್ದಾರೆ, ಮತ್ತು ಜೂನ್

ತನಕ ಮೂರು ತಿಂಗಳಲ್ಲಿ ಖರ್ಚು ಮಾಡುವ ಹಣ ಎಷ್ಟು?

Agriculture and connected schemes, your budget is 213 crores. ಇವರು ಏಪ್ರಿಲ್, ಮೇ, ಜೂನ್‌ನಲ್ಲಿ ಜುಲೈ ಫಿಗರ್ಸ್ ಕೊಡುವ ಅವಶ್ಯಕತೆ ಇಲ್ಲ. ಕೇವಲ 12 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೀರಿ. ರೂರಲ್ ಡೆವಲಪ್‌ಮೆಂಟ್ ಸ್ಕೀಮ್ 113 ಕೋಟಿ budget grants you have spent hardly 13 crores... ಇದನ್ನು ಸ್ಪೆಂಡ್ ಎಂದುಹೇಳುವುದಕ್ಕೆ ಬರುವುದಿಲ್ಲ. ರಿಲೀಸ್ ಆಗಿದೆ. ಎಷ್ಟು ಹಣ ಸ್ಪೆಂಡ್ ಆಗಿದೆ, ಎಷ್ಟು ಎಲ್.ಓ.ಸಿ. ಕೊಟ್ಟಿದ್ದಾರೆ ಎಂದು ನಮಗೆ ಗೊತ್ತಿಲ್ಲ. ಸ್ಪೆಷಲ್ ಏರಿಯಾ ಪ್ರೋಗ್ರಾಮ್ ನಿಮ್ಮ ಬಜೆಟ್ ಪ್ರಾವಿಷನ್ 116 ಕೋಟಿ. ನೀವು ಖರ್ಚು ಮಾಡಿದ್ದು 10 ಕೋಟಿ. ಇರಿಗೇಷನ್ ಅಂಡ್ ಫ್ಲಡ್ ಕಂಟ್ರೋಲ್, ಇದರ ಬಗ್ಗೆ ಬಹಳ ಮಾತನಾಡುತ್ತೀರಿ; ನಿಮ್ಮ ಬಜೆಟ್‌ನಲ್ಲಿ ನಾನ್‌ಪ್ಲಾನ್ ಬಿಟ್ಟು ಪ್ಲಾನ್‌ನಲ್ಲಿ 600 ಕೋಟಿ ಇರಿಗೇಷನ್‌ಗೆ ಪ್ರಾವಿಷನ್ ಮಾಡಿದ್ದೀರಿ. ಆದರೆ ನೀವು ಖರ್ಚು ಮಾಡಿದ್ದು 105 ಕೋಟಿ ರೂಪಾಯಿ. ಪವರ್‌ಗೆ ಇಟ್ಟಿದ್ದ 699.18 ಕೋಟಿಯಲ್ಲಿ ನೀವು ಖರ್ಚು ಮಾಡಿದ್ದು ಕೇವಲ 75 ಕೋಟಿ. ನಿಮ್ಮ ಪರ್‌ಫಾರ್ಮೆನ್ಸ್ ಇನ್ 3 ಮಂಥ್ಸ್ ಸರ್ಕಾರದ ಪರಿಸ್ಥಿತಿ ಬಹಳ ಚೆನ್ನಾಗಿದೆಯೆಲ್ಲ, ಏತಕ್ಕೆ ಹಣ ಖರ್ಚು ಮಾಡುತ್ತಿಲ್ಲ? ಏನು ಕಷ್ಟ ಇದೆ, ಏನು ತೊಂದರೆ ಇದೆ ನಿಮಗೆ? ಅದರ ನಂತರ ಟ್ರಾನ್ಸ್‌ಪೋರ್ಟ್ ಅಂಡ್ ಕಮ್ಯೂನಿಕೇಷನ್ 112 ಕೋಟಿ ರೂಪಾಯಿಯಲ್ಲಿ ಖರ್ಚು ಮಾಡಿದ್ದು 22 ಕೋಟಿ ರೂಪಾಯಿ. ಸೈನ್ಸ್ ಅಂಡ್ ಟೆಕ್ನಾಲಜಿಯಲ್ಲಿ 5 ಕೋಟಿ ರೂಪಾಯಿಯಲ್ಲಿ ನೀವು ಖರ್ಚು ಮಾಡಿದ್ದು ಕೇವಲ 30 ಲಕ್ಷ. ಅದರ ನಂತರ ಜನರಲ್ ಸೋಷಿಯಲ್ ಸರ್ವೀಸಸ್ 8 ಕೋಟಿ ರೂಪಾಯಿ ಬಜೆಟ್ ಪ್ರಾವಿಷನ್ ಇದ್ದರೆ ನೀವು ಖರ್ಚು ಮಾಡಿದ್ದು 20 ಲಕ್ಷ. ಸೋಷಿಯಲ್ ಸರ್ವೀಸಸ್ ಬಹಳ ಇಂಪಾರ್‌ಟೆಂಟ್; ಅದರಲ್ಲಿ ಬಜೆಟ್ ಪ್ರಾವಿಷನ್ 890 ಕೋಟಿ ರೂಪಾಯಿ, you have spent hardly 72 ಕೋಟಿ. 72 ಕೋಟಿ ಮಾತ್ರ ಖರ್ಚುಮಾಡಿದ್ದೀರಿ. ಅದರ ನಂತರ ಜನರಲ್ ಸರ್ವೀಸಸ್; your provision is 51 crores - you have spent hardly 7 crores... ನಾನು ಕೇಳುತ್ತಿದ್ದೇನೆ, ನಿಮ್ಮ ಆರ್ಥಿಕ ಪರಿಸ್ಥಿತಿ ಬಹಳ ಚೆನ್ನಾಗಿದ್ದರೆ ಏತಕ್ಕೆ ಹಣ ಖರ್ಚು ಮಾಡುತ್ತಿಲ್ಲ? So, I said you have become non-performance Government---- ನಿಮ್ಮ ಕ್ರೆಡಿಬಿಲಿಟಿ ಇವತ್ತು ಎಲ್ಲಿಯೂ ಉಳಿದಿಲ್ಲ. ಮಾರುಕಟ್ಟೆಯಲ್ಲಿಯೂ ನಿಮ್ಮ ಮಾತನ್ನು ಕೇಳುವುದಿಲ್ಲ. ಯಾರೂ ನಿಮ್ಮ ಮಾತನ್ನುಕೇಳುವುದಿಲ್ಲ. ಹಾಗಾಗಿ ನಾನು ಹೇಳಿದೆ, ಪ್ರಾಮಾಣಿಕವಾಗಿ ನೀವು ಹೇಳಿ. ಇವತ್ತು ನಮ್ಮ ಸರ್ಕಾರ ಇದ್ದಾಗ there was financial crisis - I do admit -----------ನಾವು ಯಾವ ಅಭಿವೃದ್ಧಿ ಕೆಲಸವನ್ನೂ ನಿಲ್ಲಿಸಿರಲಿಲ್ಲ. ಸತತವಾಗಿ ಬರಗಾಲ ಇತ್ತು. we tackled it properly--- ನೀವು ಫೈನಾನ್ಸ್ ಪೊಜಿಷನ್ ಸರಿ ಇದೆ ಎಂದು ಹೇಳಿ ಇವತ್ತು ಈ ಪ್ರಕಾರ ನೀವು ಎಕ್ಸ್‌ಪೆಂಡಿಚರ್ ಮಾಡಿದರೆ This is the official document I have got from the Government. ನಾನು ಕೇಳುತ್ತಿದ್ದೇನೆ, ಮುಖ್ಯಮಂತ್ರಿಗಳಾಗಿ ತಾವು ಇದರ ಬಗ್ಗೆ ಏನು ಹೇಳುತ್ತೀರಿ? ನೀವು ಫೈನಾನ್ಸ್ ಪೊಜಿಷನ್ ಬಹಳ ಚೆನ್ನಾಗಿದೆ ಎಂದು ತಾವು ಹೇಳಲು ಆಧಾರಗಳು ಏನು? ನಿಮ್ಮ ಫೈನಾನ್ಸ್ ಡಿಸಿಪ್ಲಿನ್ ಹೋಗಿಬಿಟ್ಟಿದೆ. ಮುಖ್ಯಮಂತ್ರಿಗಳು ಮೊನ್ನೆ ಜಯನಗರಕ್ಕೆ ಹೋದರು. ಯಾವುದೋ ಸ್ಲಮ್‌ಗೆ. ಹಣ ಕೊಡಿ; ನಾನು ಹಣ ಕೊಡುವುದು ಬೇಡ ಎಂದು

ಹೇಳುವುದಿಲ್ಲ. ಫೈನಾನ್ಸ್ ಡಿಸಿಪ್ಲಿನ್ ಇರಬೇಕು, 1 ಕೋಟಿ ರೂ. ಮಂಜೂರು ಮಾಡಿ ಬಂದರು. You have presented the budget here. ಆ ಬಜೆಟ್‌ನಲ್ಲಿ ತಾವು ಎಷ್ಟು ರಿಸೋರ್ಸಸ್ ಎಂದು ಹೇಳಿದಿರಿ. ಆ ರಿಸೋರ್ಸ್ ಅನ್ನು ಯಾವ ಪ್ರಕಾರ ಖರ್ಚು ಮಾಡುತ್ತೇವೆ ಎಂದು ತಾವು ಹೇಳಿದಿರಿ. ಈಗ ಈ ಒಂದು ಕೋಟಿ ರೂಪಾಯಿ ಎಲ್ಲಿಂದ ತರುತ್ತೀರಿ? ತಾವು ಮತ್ತೊಂದು ಮಾತು ಹೇಳಿದಿರಿ. I am not against it. ಇನ್ನೂ ಹೆಚ್ಚುಕೊಡಿ ನಮ್ಮ ರಂಗನಾಥ್ ಅವರ ಇಲಾಖೆಗೆ. ಪ್ರತಿ ಒಂದು ಎಂಎಲ್‌ಎ ಕಾನ್ಸ್‌ಸ್ಟಿಟುಯೆನ್ಸಿಗೆ 20 ಲಕ್ಷ ಎಂದು ಹೇಳಿದಿರಿ, ಸಂತೋಷ. 50 ಲಕ್ಷ ಕೊಡಿ. 20 ಲಕ್ಷ ಎಂದರೆ ಎಷ್ಟು ಆಯಿತು 40 ಕೋಟಿ ಆಯಿತು. Where is the provision? Where are you going to get this money from?

ಶ್ರೀ ಎಸ್ ಹೆಚ್. ಕೌಜಲಗಿ:- 20 ಲಕ್ಷ ರೂಪಾಯಿ ಇಲ್ಲಿಯತನಕ ಬಿಡುಗಡೆ ಆಗಿಲ್ಲ. ಮಾನ್ಯ ಮುಖ್ಯಮಂತ್ರಿಗಳು ಪ್ರತಿ ಒಂದು ಕಾನ್ಸ್‌ಸ್ಟಿಟ್ಯುಯೆನ್ಸಿಗೆ ಕೆಲಸ ಮಾಡಲು ಹಣ ಬಿಡುಗಡೆ ಮಾಡಿದ್ದೇವೆ ಎಂದು ಪೇಪರ್‌ನಲ್ಲಿ ಹೇಳಿದರು. ಆದರೆ ಇವತ್ತಿನವರೆಗೆ ಆ ಅಮೌಂಟ್ ಬಿಡುಗಡೆ ಆಗಿಲ್ಲ.

ಶ್ರೀ ಆರ್.ವಿ. ದೇಶಪಾಂಡೆ:- ನಾನು ಏನು ಹೇಳುತ್ತಿದ್ದೇನೆ ಎಂದರೆ ಫೈನಾನ್ಸಿಯಲ್ ಡಿಸಿಪ್ಲಿನ್ ಇರಬೇಕು; ಬಜೆಟ್ ಇದೆ. ಬಜೆಟ್ ಪ್ರೆಸೆಂಟೇಷನ್ ಮಾಡಿದ್ದೀರಿ. ನಿಮ್ಮ ಸಂಪನ್ಮೂಲಗಳು ಏನು? ನೀವು ಪ್ರತಿ ಒಂದು ಹೆಡ್‌ಗೆ ಹಣ ಕೊಡುತ್ತೀರಿ. ಎಲ್ಲಿಂದ ತಂದುಕೊಡುತ್ತೀರಿ? ಮಾನ್ಯ ರಂಗನಾಥ್ ಅವರ ಇಲಾಖೆಗೆ 100 ಕೋಟಿ ರೂಪಾಯಿ ಅವಶ್ಯಕತೆ ಇದೆ ನಾನು ಒಪ್ಪಿಕೊಳ್ಳುತ್ತೇನೆ. ಆದರೆ where is the money? During the year 1993-94 total revenue anticipated is 6983 crores of Rupees.

ಎಲ್ಲಾ ಕೂಡಿ. ಸ್ಟೇಟ್ ಟ್ಯಾಕ್ಸ್‌ನಿಂದ 4668 ಕೋಟಿ ರೂಪಾಯಿಗಳು. ಇವತ್ತು ನೀವು ಎಕ್ಸೈಜ್‌ನಿಂದ 700 ಕೋಟಿ ರೂಪಾಯಿಗಳನ್ನು ತರಲಿಕ್ಕೆ ಹೊರಟಿರಿ. ನಾನು ಕೇಳುತ್ತೇನೆ ಈ ಹಣ ಎಲ್ಲಿ ಬರುತ್ತದೆ? ಈ 700 ಕೋಟಿ ರೂಪಾಯಿ ಎಲ್ಲಿದೆ? You will not be able to make more than 600 crores.

There will be deficiency of 100 crores. ಸೇಲ್ಸ್ ಟ್ಯಾಕ್ಸ್‌ನಲ್ಲಿ ನಾನು ಹೇಳುತ್ತೇನೆ. 2866 crores is your target. It is impossible to reach it. Some how I have not got the figures. I would like to know what are your collections during the last 5 months. I want to know your progress. ಸೆಂಟ್ರಲ್ ಎಕ್ಸೈಜ್‌ನಲ್ಲಿ ಗವರ್ನಮೆಂಟ್ ಆಫ್ ಇಂಡಿಯಾದವರು ಎಷ್ಟೋ ಕನ್ಸೆಷನ್ಸ್ ಕೊಟ್ಟರು. ನೀವು ಆಂಟಿಸಿಪೇಟ್ ಮಾಡಿದ್ದು ಸೆಂಟ್ರಲ್ ಎಕ್ಸೈಜ್‌ನಿಂದ 135 ಕೋಟಿ ರೂಪಾಯಿಗಳು. Central share, Central assistances including all taxes 45 crores. ಇವತ್ತು ಸೆಂಟ್ರಲ್ ಎಕ್ಸೈಜ್ ಟ್ಯಾಕ್ಸ್‌ನಿಂದ 45 ಕೋಟಿ ರೂಪಾಯಿ ಕಡಿಮೆ ಆಗುತ್ತದೆ. Have you taken all these factors into consideration. None of the factors taken into consideration. ಮಾನ್ಯ ಮುಖ್ಯಮಂತ್ರಿಗಳು ಒಂದು ಕೋಟಿ ರೂಪಾಯಿ, ಎರಡು ಕೋಟಿ ರೂಪಾಯಿ ಕೊಡುತ್ತೇನೆ ಎಂದು.

ಮನಸ್ಸಿಗೆ ಬಂದ ಹಾಗೆ ಹೇಳುತ್ತಾರೆ. ಏನು ಹುಡುಗಾಟ ನಡೆಯುತ್ತಿದೆ. ಇದರಿಂದ ಪ್ರಚಾರ ಸಾಧನೆ ಮಾಡುವ ಪ್ರಶ್ನೆಯೇ ವಿನಹಃ ಇವತ್ತು ಫೈನಾನ್ಸಿಯಲ್ ಡಿಸಿಪ್ಲಿನ್ ಹಾಳು ಮಾಡಿಬಿಟ್ಟಿರಿ. There is no financial discipline, absolutely no financial discipline. ಇವತ್ತು ನನ್ನ ಜಿಲ್ಲೆಯಲ್ಲಿ ಕಾಳಿ ಸೆಕೆಂಡ್ ಸ್ಟೇಜಿನಲ್ಲಿ, ಕೋಸ್ಟಲ್ ರೀಹ್ಯಾಬಿಲಿಟೇಷನ್ ಆಗಬೇಕು. ಕಂದಾಯ ಸಚಿವರಿಗೆ ವಿನಮ್ರವಾಗಿ ಕೇಳುತ್ತಿದ್ದೇನೆ. ಎಂಟು ಕೋಟಿ ಗ್ರಾಂಟ್ ಪಾಸ್ ಆಯಿತು, ಅಪ್ರೂವ್ ಮಾಡಿದ್ದೀರಿ. You have released 50 lakhs. ಎಂಟು ಕೋಟಿ ರೂಪಾಯಿ ಪೇಮೆಂಟ್ ಬಾಕಿ ಇದೆ; 9 ತಿಂಗಳು ಆಯಿತು 50 ಲಕ್ಷ ಬಿಡುಗಡೆ ಮಾಡಿದ್ದೀರಿ. If financial position is good why are you not giving money? ಇವತ್ತು ರೀಹ್ಯಾಬಿಲಿಟೇಷನ್‌ನಲ್ಲಿ ಆಸ್ತಿ ಮನೆ ಮಠ ಕಳೆದುಕೊಂಡಿದ್ದಾರೆ, ಅಂತಹ ಜನಗಳಿಗೆ ಕೊಡುವುದಕ್ಕೆ ಹಣ ಇಲ್ಲ. ಸೀ-ಬರ್ಡ್‌ನಲ್ಲಿ ನನ್ನ ಮೇಲೆ ಆಪಾದನೆ ಮಾಡುತ್ತಿದ್ದರು. ನಮ್ಮ ಸರ್ಕಾರ ಇದ್ದಾಗ ಕೇಂದ್ರಾಸರ್ಕಾರದಿಂದ ಬಂದ 23 ಕೋಟಿ ರೂಪಾಯಿಯನ್ನು ದುರುಪಯೋಗ ಮಾಡಿದರು ಎಂದು. ನಾನು ನಮ್ಮ ಉತ್ತರ ಕನ್ನಡ ಜಿಲ್ಲೆಯ ಸ್ನೇಹಿತರಿಗೆ ಕೇಳುತ್ತೇನೆ. ನೀವು ಅಧಿಕಾರದಲ್ಲಿ ಬಂದು ಮೂರು ವರ್ಷ ಹತ್ತು ತಿಂಗಳು ಆಯಿತು. ಈ ಸೀ-ಬರ್ಡ್‌ನಲ್ಲಿ 23 ಕೋಟಿ ರೂಪಾಯಿಯಲ್ಲಿ ಒಂದು ಕೋಟಿ ರಿಲೀಸ್ ಮಾಡಬೇಕಿತ್ತು, ಏಕೆ ಮಾಡಲಿಲ್ಲ? ಅಂದರೆ ಇವತ್ತು ಎಲ್ಲಾ ಹಂತದಲ್ಲಿ ಸರ್ಕಾರ ದಿವಾಳಿ ಆಗಿದೆ. ಇವತ್ತು ಫೈನಾನ್ಸಿಯಲ್ ಪೊಸಿಷನ್ ಎಷ್ಟು ಹಾಳಾಗಿದೆ ಎಂದರೆ ಇದನ್ನು ಈ ಸರ್ಕಾರದಿಂದ ಸುಧಾರಿಸುವುದಕ್ಕೆ ಸಾಧ್ಯವಿಲ್ಲ. ಇವತ್ತು ನಾನು ಆಗಲೇ ಹೇಳುತ್ತಿದ್ದೆ, ಸರ್ಕಾರದಲ್ಲಿ ಹಣ ಇಲ್ಲ ಎಂದು. ಸರಿಯಾಗಿ ಎಲ್.ಓ.ಸಿ ಸಿಗುತ್ತಾ ಇಲ್ಲ. ಸರಿಯಾಗಿ ಕೆಲಸ ಆಗುತ್ತಿಲ್ಲ. ಇವತ್ತು ಎಲ್ಲಾ ರೋಡ್ ಕಂಡೀಷನ್ಸ್ ಬಹಳ ಹದಗೆಟ್ಟಿದೆ. ಯಾವ ಅಭಿವೃದ್ಧಿ ಕೆಲಸವೂ ಇಲ್ಲ. ಈ ವರ್ಷ ಬಜೆಟ್‌ನಲ್ಲಿ ನಮ್ಮ ಮತ ಕ್ಷೇತ್ರದಲ್ಲಿ ನಿಮ್ಮ ಇಲಾಖೆಯಿಂದ ಯಾವ ಕೆಲಸವೂ ಬಂದಿಲ್ಲ. ಅವರು ಪ್ರಾಮಾಣಿಕವಾಗಿ ಹೇಳಿದರು. I would like do something but he was not able to do because there is no money. Though your intentions are good you have no money. ಈ ಪ್ರಕಾರ ಆಗಿದೆ. ಮಲೆನಾಡು ಅಭಿವೃದ್ಧಿ ಬಗ್ಗೆ ಪ್ರತಿ ನಾಲ್ಕು ತಿಂಗಳಿಗೆ ಒಂದು ಬಿಲ್, ಮತ್ತೊಂದು ಬಿಲ್, ಮತ್ತೊಂದು ಬಿಲ್. ಏನು ಬರೇ ಲೆಕ್ಕಕ್ಕೆ. 1992-93ಕ್ಕೆ ಮಲೆನಾಡು ಅಭಿವೃದ್ಧಿ ಮಂಡಲಿಗೆ 35 ಕೋಟಿ ರೂಪಾಯಿ ಲ್ಯಾಪ್ಸ್ ಮಾಡಿದ್ದೀರಿ. ನಿಮ್ಮ ಸರ್ಕಾರದ ಹಣಕಾಸು ಪರಿಸ್ಥಿತಿ ಸರಿ ಇದ್ದರೆ ಏಕೆ ಮಲೆನಾಡು ಅಭಿವೃದ್ಧಿಗಾಗಿ 35 ಕೋಟಿ ರೂಪಾಯಿಗಳನ್ನು ಕೊಡುವುದಿಲ್ಲ? ಮಲೆನಾಡು ಪ್ರದೇಶದ ಜನರಿಗೆ ಏಕೆ ಅನ್ಯಾಯ ಮಾಡುತ್ತಿದ್ದೀರಿ? ಮಲೆನಾಡು ಭಾಗದವರಾದ ಹಿರಿಯ ಸಚಿವರಾಗಿರತಕ್ಕಂಥ ಸನ್ಮಾನ್ಯ ಶ್ರೀ ಹಾರ್ನಹಳ್ಳಿ ರಾಮಸ್ವಾಮಿಯವರು ಇದಕ್ಕೆ ಉತ್ತರ ಕೊಡಬೇಕು. ನಿಮಗೂ ಇದರಿಂದ ಸ್ವಲ್ಪ ತೊಂದರೆಯಾಗುತ್ತದೆ. 1992-93ನೇ ಸಾಲಿನಲ್ಲಿ 35 ಕೋಟಿ ರೂಪಾಯಿಗಳನ್ನು ಲ್ಯಾಪ್ಸ್ ಮಾಡಿದ್ದಾರೆ. ಈ ಪ್ರಕಾರ ನೀವು ನಿಮ್ಮ ಹಣಕಾಸು ಪರಿಸ್ಥಿತಿಯಿಟ್ಟುಕೊಂಡು, ಇಡೀ ಜಗತ್ತಿನಲ್ಲಿಯೇ ನಮ್ಮ ಹಣಕಾಸಿನ ಪರಿಸ್ಥಿತಿ ಬಹಳ ಚೆನ್ನಾಗಿದೆಯೆಂದು ತಾವು ಹೇಳುತ್ತಾ ಹೋದರೆ, ಯಾರಾದರೂ ನಂಬುವುದಕ್ಕೆ ಸಾಧ್ಯವೇ? ಹಾಗಾಗಿ, ಇವೊತ್ತು ರಾಜ್ಯದಲ್ಲಿ ಯಾವುದೇ ಅಭಿವೃದ್ಧಿ ಕೆಲಸ-ಕಾರ್ಯಗಳು ನಡೆಯುತ್ತಿಲ್ಲ. ನಾನು ಮೊನ್ನೆ ಬದ್ನಾಳ್ ಕ್ಷೇತ್ರಕ್ಕೆ ಹೋಗಿದ್ದಂಥ ಸಂದರ್ಭದಲ್ಲಿ ಅಲ್ಲಿನ

ವಿಧವೆಯರು, ಅಂಗವಿಕಲರು ನನ್ನ ಮುಂದೆ ಕಣ್ಣೀರು ಹರಿಸಿ, ತಮಗೆ 4-5 ತಿಂಗಳುಗಳಿಂದ ಪಿಂಚಣಿ ಸಿಕ್ಕಿಲ್ಲವೆಂದು ಹೇಳಿದರು. 50-75 ರೂಪಾಯಿಗಳ ಪಿಂಚಣಿ ಕೊಡುವ ಶಕ್ತಿ ನಿಮಗಿಲ್ಲ. ಮೊನ್ನೆ ಸನ್ಮಾನ್ಯ ಸದಸ್ಯರಾದ ಜಾಲಪ್ಪನವರು ಹೇಳುತ್ತಿದ್ದರು. ಇವೊತ್ತು ಅವರು ಸದನದಲ್ಲಿಲ್ಲ. 1989ರಲ್ಲಿ ದೊಡ್ಡಬಳ್ಳಾಪುರದಲ್ಲಿ ಭಾರಿ ಮಳೆ ಬಂದು ಮನೆಗಳು ಕುಸಿದರೆ, ನಿರ್ವಸಿತರಾದವರಿಗೆ ಚೆಕ್ ಮೂಲಕ ಪರಿಹಾರ ಕೊಟ್ಟಿದ್ದಾರೆ. ಆದರೆ, ಆ ಚೆಕ್‌ಗಳೆಲ್ಲವೂ ಬೌನ್ಸ್ ಆದವು. ಆಗ ಜಾಲಪ್ಪನವರು ಒಂದು ಪ್ರಶ್ನೆ ಹಾಕಿದರು. ಈ ಹಿನ್ನೆಲೆಯಲ್ಲಿ ಸರ್ಕಾರದವರು, ಏನಾಯಿತು ನೋಡಿರಿ ಎಂದು ತಹಶೀಲ್ದಾರರಿಗೆ ಸೂಚನೆ ಕೊಟ್ಟಿದ್ದಾರೆ. ಅವರು ಏನು ಮಾಡಿದ್ದಾರೆಂದರೆ, ಯಾವ ಫಲಾನುಭವಿಗಳಿಗೆ ಪರಿಹಾರದ ಚೆಕ್ ಕೊಟ್ಟಿದ್ದರೋ, ಅವರಿಂದ ವಾಪಸ್ ತೆಗೆದುಕೊಂಡು ಅದಕ್ಕೆ ಬದಲಾಗಿ ರಸೀತಿ ಕೊಟ್ಟಿದ್ದಾರೆ ಪರಿಹಾರವಾಗಿ 500 ರೂ., 800 ರೂ., 1,000 ರೂಪಾಯಿಗಳ ಚೆಕ್ ಏನು ಕೊಟ್ಟಿದ್ದೀರಿ, ಅವು ಇವೊತ್ತು ಪಾಸ್ ಆಗುತ್ತಿಲ್ಲ. ಈ ತರಹದ ಹಣಕಾಸಿನ ಪರಿಸ್ಥಿತಿ ನಮ್ಮ ರಾಜ್ಯದಲ್ಲಿ ಇವೊತ್ತು ಉದ್ಭವವಾಗಿದೆ. ಇನ್ನು ಶಿಕ್ಷಣ ನೀತಿ ಬಗ್ಗೆ ಈ ಬೆಳಿಗ್ಗೆ ಸಾಕಷ್ಟು ಚರ್ಚೆಯಾಗಿದೆ. ನಿಮ್ಮ ಸರ್ಕಾರದ ಶಿಕ್ಷಣ ನೀತಿ ಏನು? ಅಡ್ಮಿನಿಸ್ಟ್ರೇಟರ್‌ಗಳನ್ನು ಹಾಕುತ್ತೇವೆಂದು ಉನ್ನತ ಶಿಕ್ಷಣ ಸಚಿವರಾದ ಮಾನ್ಯ ಯಾಹ್ಯಾ ಅವರು ಹೇಳುತ್ತಾರೆ. ಏಕೆಂದರೆ, ಇವೊತ್ತು ನಿಮ್ಮದೇ ಸರ್ಕಾರವಿರುವುದರಿಂದ ನೀವು ಏನು ಬೇಕಾದರೂ ಹೇಳಬಹುದು. We are for abolition of capitation fee. I am proud to say that we have moved that Bill and got it passed.

ಆದರೆ, ಈ ಕುರಿತು ನಿಮ್ಮ ಸರ್ಕಾರದಲ್ಲಿ ದ್ವಂದ್ವ ನೀತಿಯುಂಟಾಗಿದೆ. ಕ್ಲಾರಿಟಿ ಇಲ್ಲ, ಶಿಕ್ಷಣ ಸಚಿವರು ಹೇಳುತ್ತಾರೆ I want to put administrators ಅಂತ ಹೇಳಿದರೆ ಮುಖ್ಯಮಂತ್ರಿಗಳು ಇಲ್ಲ, ಇಲ್ಲ I want to negotiate ಅಂತ ಹೇಳುತ್ತಾರೆ. ಇವೊತ್ತು 18,000 ಇಂಜಿನಿಯರಿಂಗ್ ಸೀಟುಗಳು 4,000 ಮೆಡಿಕಲ್ ಸೀಟುಗಳಿದ್ದು ಜೊತೆಗೆ ಡೆಂಟಲ್, ಮುಂತಾದುವುಗಳಿಗೆ ಸಂಬಂಧಪಟ್ಟ ಸೀಟುಗಳಿದ್ದು, ಈ ಕೋರ್ಸ್‌ಗಳಿಗಾಗಿ ಕಲಿಯುವ ವಿದ್ಯಾರ್ಥಿಗಳ ಭವಿಷ್ಯವೇನಾಗಬೇಕು? ಈ ವಿದ್ಯಾರ್ಥಿಗಳ ಬಗ್ಗೆ ನಿಮಗೆ ಯಾವುದೇ ಚಿಂತೆ ಇದ್ದಂತಿಲ್ಲ. ಈ ವರ್ಷದ ಜುಲೈ ತಿಂಗಳೊಳಗೆ ಕಾಲೇಜುಗಳಿಗೆ ವಿದ್ಯಾರ್ಥಿಗಳ ಅಡ್ಮಿಶನ್ ಮುಗಿಯಬೇಕಾಗಿತ್ತು. ಆದರೆ ತಮ್ಮ ಕ್ಯಾಲೆಂಡರ್ ಆಫ್ ಇವೆಂಟ್ಸ್ ಪ್ರಕಾರ ಸೆಪ್ಟೆಂಬರ್ ತಿಂಗಳ ತನಕವಾದರೂ ಅಡ್ಮಿಶನ್ ಮುಗಿಯುವುದಕ್ಕೆ ಸಾಧ್ಯವಾಗುವುದಿಲ್ಲ. ಇದು ಇವೊತ್ತು ಕಲಿಯುವ ವಿದ್ಯಾರ್ಥಿಗಳ ಮೇಲೆ ಪರಿಣಾಮ ಬೀರಿದರೆ ಅದಕ್ಕೆ ಜವಾಬ್ದಾರರು ಯಾರು? ಇವೊತ್ತು ಸರ್ವೋಚ್ಛ ನ್ಯಾಯಾಲಯ ಆದೇಶ ಕೊಟ್ಟಿದೆ. We are bound *by it. We cann*ot overrule it. I don't say, you overrule it. Practically we have to see what are all the things taken place in other States . ಆದರೆ, ವಾಸ್ತವವಾಗಿ ಇತರೆ ರಾಜ್ಯಗಳಲ್ಲಿ ಏನಾಗಿದೆ? ಈ ಕುರಿತು ಚರ್ಚಿಸಲು ವಿರೋಧಪಕ್ಷದವರನ್ನು ಕರೆಯಿರಿ ಎಂದು ನಮ್ಮ ಸ್ನೇಹಿತರಾದ ಮಾನ್ಯ ಡಾ: ಜೀವರಾಜ್ ಆಳ್ವರವರು ಹೇಳಿದರು. I don't recommend for that. You have to solve it. It is your decision and opinion. ನಿಮಗೆ ಸದಿಚ್ಛೆ ಇದ್ದಿದ್ದರೆ ವಿರೋಧಪಕ್ಷದವರನ್ನು ಕರೆದು ಸಲಹೆ ಕೇಳಬೇಕಾಗಿತ್ತು. ಕೆಲವು ಮ್ಯಾನೇಜ್‌ಮೆಂಟ್‌ನವರು ದುರುಪಯೋಗ ಮಾಡಿರುವುದು ನಮಗೆ ಗೊತ್ತು. ಅದನ್ನು ಒಪ್ಪಿಕೊಳ್ಳುತ್ತೇವೆ. ಆದರೆ, ಕೆಲವು ಒಳ್ಳೆಯ ಮ್ಯಾನೇಜ್‌ಮೆಂಟ್‌ಗಳು ಸಹ ಇವೆ; ಕೆಲವು ಒಳ್ಳೆಯ ಕಾಲೇಜುಗಳೂ ಇವೆ. ಸರ್ಕಾರಕ್ಕೆ ಸೇರಿದ

ಮೆಡಿಕಲ್ ಕಾಲೇಜುಗಳು ಇವೊತ್ತು ಯಾವ ಪರಿಸ್ಥಿತಿಯಲ್ಲಿವೆ? ಆ ಕಾಲೇಜುಗಳಲ್ಲಿ ಲೆಕ್ಚರರ್‌ಗಳು, ಪ್ರೊಫೆಸರ್‌ಗಳು ಇದ್ದಾರೆಯೇ? ಇವ್ಯಾವುದರ ಬಗ್ಗೆಯೂ ಚಿಂತನೆ ಮಾಡದೆ, ವಿದ್ಯಾರ್ಥಿಗಳ ಭವಿಷ್ಯದ ಬಗ್ಗೆಯೂ ಚಿಂತನೆ ಮಾಡದೆ, ಯಾವುದೋ ಒಂದು ಪಾಲಿಸಿ ಮಾಡುತ್ತಾ ತಾವು ಕನ್‌ಫ್ರಾಂಟೇಷನ್‌ನಲ್ಲಿದ್ದೀರಿ. ಪತ್ರಿಕೆಗಳಿಗೆ ದಿನನಿತ್ಯ ನಿಮ್ಮ ಕನ್‌ಫ್ರಾಂಟೇಷನ್ ಇದೆ ಈ ಸಮಸ್ಯೆಗೆ ಒಂದು ಪರಿಹಾರ ಕಂಡುಹಿಡಿಯುವುದಕ್ಕೆ ನಿಮ್ಮ ಸರ್ಕಾರದಿಂದ ಯಾವುದೇ ಪ್ರಯತ್ನ ಆಗುತ್ತಿಲ್ಲ. I am not worried about anybody. I am more worried about the career of the students. I am not interested in anything. ಆ ಅರ್ಹತೆ ಇಲ್ಲವೆಂದರೆ ಇವೊತ್ತು ವಿದ್ಯಾರ್ಥಿಗಳ ಶಾಪ ನಿಮಗೆ ತಟ್ಟಿದೆ, ಹಾಗಾಗಿ, ಈ ಪರಿಸ್ಥಿತಿ ನಿರ್ಮಾಣವಾಗಿದೆ. ಇವೊತ್ತು ನಿಮ್ಮ ಸರ್ಕಾರದಲ್ಲಿ ಏನು ಜಗಳ ನಡೆಯುತ್ತಿದೆ, ಅದಕ್ಕೆ ಕಾರಣವೂ ಇದೆ. ಅದೇನೆಂದರೆ, ಎಲ್ಲಾ ವರ್ಗದವರ ಶಾಪ ನಿಮ್ಮ ಸರ್ಕಾರಕ್ಕೆ ತಟ್ಟಿದೆ. ಅಂದರೆ, ರೈತರ ಶಾಪ, ವಿದ್ಯಾರ್ಥಿಗಳ ಶಾಪ, ಜನ ಸಾಮಾನ್ಯರ ಶಾಪ ಜೊತೆಗೆ ನಮ್ಮ ವಿರೋಧಪಕ್ಷದವರ ಶಾಪವಂತೂ ಖಾಯಂ ಆಗಿದೆ. ನಾನು ಒಂದು ಮಾತನ್ನು ಹೇಳುತ್ತೇನೆ; ನಾವು ಪ್ರಜಾಪ್ರಭುತ್ವದಲ್ಲಿ ವಿಶ್ವಾಸವಿಟ್ಟಿದ್ದೇವೆ. ಯಾವುದೇ ಪಕ್ಷದ ಸರ್ಕಾರ ಅಧಿಕಾರಕ್ಕೆ ಬಂದರೆ ಅದು ಐದು ವರ್ಷಗಳ ಕಾಲ ಅಧಿಕಾರದಲ್ಲಿರಬೇಕೆಂಬುದೇ ನಮ್ಮ ಇಚ್ಛೆ. ಆದರೆ ನೀವು ಕಚ್ಚಾಡುತ್ತಿದ್ದೀರಿ. ನೀವು ಅಭಿವೃದ್ಧಿ ಕೆಲಸ ಮಾಡಲಿಲ್ಲ. You have defaulted your voters. You are going on your own follies. I cannot help it. ನೀವು ಏನು ಮಾಡಿದ್ದೀರೆಂಬುದನ್ನು ಹೇಳಿ?

ಶ್ರೀ ಗೋಪಾಲ ಮುಕುಂದ ಕಾನಡೆಃ ನಮ್ಮ ಬಗ್ಗೆ ನಿಮಗೇಕೆ ಚಿಂತೆ?

ಶ್ರೀ ಆರ್.ವಿ ದೇಶ್‌ಪಾಂಡೆ:- ಇವತ್ತು ತಾತ್ಕಾಲಿಕ ಶಿಕ್ಷಕರ ಹಾಗೂ ಗೌರವ ಧನವನ್ನು ಪಡೆಯುತ್ತಿರುವ ಶಿಕ್ಷಕರ ಸ್ಟ್ರೈಕ್ ನಡೆಯುತ್ತಿದೆ. ಇದರ ಬಗ್ಗೆ ನಿಮಗೆ ಯಾವ ಚಿಂತೆಯೂ ಸಹ ಇಲ್ಲ. ಏನೋ 10 ಸಾವಿರ ಜನ ಶಿಕ್ಷಕರನ್ನು ಇಟ್ಟುಕೊಂಡು ಕೆಲಸ ಮಾಡುತ್ತೇವೆಂದು ಹೇಳುತ್ತೀರಿ, ಆದರೆ ಏನು ಮಾಡುತ್ತೀರಿ? ಹೇಗೆ ಮಾಡುತ್ತೀರಿ? Where is the Budget provision? What have you done? ಯಾವುದೇ ಒಂದು ಸಮಸ್ಯೆಯ ಬಗ್ಗೆ ತೀರ್ಮಾನ ಮಾಡುವಾಗ ನಾಲ್ಕೂ ದಿಕ್ಕಿನಿಂದ ವಿಚಾರ ಮಾಡಿ pros and cons ನೋಡಿ ಅದಕ್ಕೆ ಪರಿಹಾರವನ್ನು ಕೊಡಲು ಪ್ರಯತ್ನ ಮಾಡುತ್ತಿಲ್ಲ. ಇವತ್ತು ಎಷ್ಟೋಜನ ತಾತ್ಕಾಲಿಕ ಶಿಕ್ಷಕರು, ಗೌರವ ಧನವನ್ನು ಪಡೆಯುತ್ತಿರುವ ಶಿಕ್ಷಕರು ಬೀದಿಪಾಲಾಗಿದ್ದಾರೆ. ನಾನು ಹೈಕೋರ್ಟ್‌ನ ಹಿಂದಿನ ಒಂದು ಕೇಸ್‌ನಲ್ಲಿ ನೋಡಿದಂತೆ, ಎರಡು ವರ್ಷಗಳ ಹಿಂದೆ ಕೆಲವು ಪ್ರೌಢಶಾಲೆಯ ಶಿಕ್ಷಕರನ್ನು retrench ಮಾಡಿದ್ದಾರೆ. ಅವರನ್ನೇ ಪುನಃ ತೆಗೆದುಕೊಳ್ಳಬೇಕೆಂದು ಹೈಕೋರ್ಟ್ ಆಜ್ಞೆ ಮಾಡಿದೆ. ಆದರೆ ಸರ್ಕಾರದಿಂದ ಅದರ ಬಗ್ಗೆ ಯಾವುದೇ ಕ್ರಮವಿಲ್ಲ. ಇವತ್ತು ಶಿಕ್ಷಣದ ವ್ಯವಸ್ಥೆಯು ಸಂಪೂರ್ಣವಾಗಿ it is in a mess ಆಗಿದೆ. ಇವತ್ತು ಕೇವಲ confrontationist attitude ಆಗಿ ಕಾಣುತ್ತಿದೆಯೇ ಹೊರತು ಈ ಸಮಸ್ಯೆಯನ್ನು ಬಗೆಹರಿಸುವ ಮನಸ್ಸು ಸರ್ಕಾರಕ್ಕೆ ಇದೆ ಎನ್ನುವುದು ನನಗೆ ಕಾಣುತ್ತಿಲ್ಲ. ಆದ್ದರಿಂದ ಈ ಸಮಸ್ಯೆಯನ್ನು ಬಗೆಹರಿಸಬೇಕಾಗಿದೆ. ಆದರೆ ತಾವು ಇದನ್ನು ಬಗೆಹರಿಸುವಲ್ಲಿ ವಿಫಲರಾಗಿದ್ದೀರಿ.

ಇನ್ನು ಹೌಸಿಂಗ್ ಸೊಸೈಟಿಯ ಸಮಸ್ಯೆಯು ಕೂಡ ಇಂದು ನಿನ್ನೆಯ ಸಮಸ್ಯೆಯಲ್ಲ, ಅದು ಸುಮಾರು 20 ವರ್ಷಗಳಿಂದಲೂ ಸಹ ಇದೆ ಎಂಬುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಸುಮಾರು 2 ಲಕ್ಷದ 75 ಸಾವಿರ ಜನರು ನಿವೇಶನಕ್ಕಾಗಿ ಇಂಥ ಹೌಸಿಂಗ್ ಸೊಸೈಟಿಗಳಿಗೆ ಅರ್ಜಿಯನ್ನು ಹಾಕಿದ್ದಾರೆ. ಅಂಥ ಅರ್ಜಿಗಳಲ್ಲಿ ಕೆಲವು ಬೋಗಸ್ ಅರ್ಜಿಗಳು ಇವೆ ಎಂಬುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಹೌಸಿಂಗ್ ಸೊಸೈಟಿಗಳು ಏಕೆ ಫಾರಂ ಆದವು? To supplement the efforts of the Government to solve the Housing problem. ಹೌಸಿಂಗ್ ಸಮಸ್ಯೆಯನ್ನು ತೊಡೆದುಹಾಕುವುದಕ್ಕಾಗಿ ಇಂಥ ಸೊಸೈಟಿಗಳು ಸ್ಥಾಪನೆಯಾಗಿವೆ. ಆದರೆ ನೀವು ಏನು ಮಾಡುತ್ತಿದ್ದೀರಿ? ತಾವು ಅಧಿಕಾರಕ್ಕೆ ಬಂದು ಹೌಸಿಂಗ್ ಸಮಸ್ಯೆಯನ್ನು ಬಗೆಹರಿಸಲು ಏನು ಮಾಡಿದ್ದೀರಿ? ಇದಕ್ಕೆ ಸಂಬಂಧಪಟ್ಟಂತೆ ಈಗಾಗಲೆ ಜಿ.ವಿ.ಕೆ. ರಾವ್ ಸಮಿತಿಯ ವರದಿ ಏನು ಬಂದಿದೆ, ಅದನ್ನು ಜಾರಿಗೆ ತನ್ನಿ, ಅದರ ಬಗ್ಗೆ ಕ್ರಮ ತೆಗೆದುಕೊಳ್ಳಿ. ಯಾರ್‍ಯಾರು ಅಪ್ರಮಾಣಿಕ, ಅದಕ್ಷ, ಭ್ರಷ್ಟ ಅಧಿಕಾರಿಗಳು ಇದ್ದಾರೆ, ಅವರ ಮೇಲೆ ಕ್ರಮವನ್ನು ತೆಗೆದುಕೊಳ್ಳಿ; ಎಲ್ಲಾ ಹೌಸಿಂಗ್ ಸೊಸೈಟಿಗಳೂ ಸಹ ಕೆಟ್ಟದ್ದವೆಂದು ನಾನು ಹೇಳುವುದಿಲ್ಲ. ಕೆಲವು ಸೊಸೈಟಿಗಳು ಒಳ್ಳೆಯ ಕೆಲಸ ಮಾಡುತ್ತಿವೆ. ಎಲ್ಲಾ ಸೊಸೈಟಿಗಳಲ್ಲೂ ಸಹ ಬೋಗಸ್ ಮೆಂಬರ್‌ಶಿಪ್ ಇಲ್ಲ. ಜನರು ತಮ್ಮ 20 ವರ್ಷದ life time savingsನ್ನು ನಿವೇಶನಕ್ಕಾಗಿ ತೊಡಗಿಸಿದ್ದಾರೆ. ನೀವೇನಾದರೂ ಅವರಿಗೆ 15 ವರ್ಷಗಳ ಹಿಂದೆಯೇ ನಿವೇಶನವನ್ನು ಕೊಟ್ಟಿದ್ದರೆ ಅವರುಗಳು ಮನೆಗಳನ್ನು ಕಟ್ಟಿಕೊಂಡು ಸುಖವಾಗಿರುತ್ತಿದ್ದರು. ಹೌಸಿಂಗ್‌ನ ಸಮಸ್ಯೆಯು ಬಗೆಹರಿಯುತ್ತಿತ್ತು, ನಿಮ್ಮ ಕಷ್ಟ ಸಹ ಕಡಿಮೆಯಾಗುತ್ತಿತ್ತು. ಇವತ್ತು 2 ಲಕ್ಷದ 75 ಸಾವಿರ ಜನರು ಸೈಟಿಗಾಗಿ ಅರ್ಜಿಯನ್ನು ಹಾಕಿರುವಾಗ ನೀವು ಬಿ.ಡಿ.ಎ. ಮೂಲಕ ಅವರಿಗೆ ಸೈಟುಗಳನ್ನು ಕೊಡುತ್ತೇವೆಂದು ಹೇಳುತ್ತೀರಿ. ಆದರೆ ಇದುವರೆಗೆ ಬಿ.ಡಿ.ಎ. ಏನು ಮಾಡಿದೆ? ಬಿ.ಡಿ.ಎ. ಮೂಲಕ ಸೈಟುಗಳನ್ನು ಕೊಡುತ್ತೇವೆಂದು Ordinance ಅನ್ನು ಹೊರಡಿಸುತ್ತೀರಿ. ಆದರೆ ಇವತ್ತು ಬಿ.ಡಿ.ಎ. ಸಂಪೂರ್ಣವಾಗಿ ದಿವಾಳಿಯಾಗಿದೆ. ಆದ್ದರಿಂದ ಅದನ್ನು ಆದಷ್ಟು ಬೇಗ ಮುಚ್ಚಬೇಕು. ಬಿ.ಡಿ.ಎ ಒಂದು ರೀತಿಯಲ್ಲಿ ಬಿಳಿ ಆನೆ ಇದ್ದಂತೆ. ಅದು ಏನು ಮಾಡುತ್ತಿದೆ? ನಾನು ಇಲಾಖೆಯ ಮಂತ್ರಿಯಾಗಿದ್ದಂಥ ಕಾಲವಾದ 1988ರಲ್ಲಿ ನಿವೇಶನಗಳನ್ನು ಕೊಡುವ ಬಗ್ಗೆ ಒಂದು ಜಾಹೀರಾತನ್ನು ಹೊರಡಿಸಿದ್ದೆ. 1988ರಿಂದ 1993ರವರೆಗೆ ಸುಮಾರು 5 1/2 ವರ್ಷಗಳಾದರೂ ಸಹ ಇದುವರೆಗೂ ಬಿ.ಡಿ.ಎ. ಒಂದು ಸೈಟನ್ನೂ ಸಹ ಕೊಟ್ಟಿಲ್ಲ. ಎಷ್ಟೋ ಜನರಿಗೆ ಸೈಟಿನ ಅಧಿಕಾರ ಪತ್ರವನ್ನು ಕೊಟ್ಟಿದೆ, ಆದರೆ ಸೈಟೇ ಇಲ್ಲ. ಇವತ್ತು ಸೈಟು ಬೇಕು ಎಂದು ಯಾರು ಅರ್ಜಿಯನ್ನು ಹಾಕಿದ್ದಾರೋ ಅವರಿಗೆ...

(INTERRUPTIONS)

ಶ್ರೀ ಕೆ. ಲಕ್ಕಣ್ಣ :- ಇವರ ಕಾಲದಲ್ಲಿಯೇ ಜಾಗ ಇಲ್ಲದಿದ್ದರೂ ಸಹ 10 ಸಾವಿರ ಸೈಟುಗಳನ್ನು ಕೊಟ್ಟಿದ್ದು. ಈಗ ನಾವು ಕೊಟ್ಟಿದ್ದೇವೆ.

ಶ್ರೀ ಆರ್.ವಿ.ದೇಶಪಾಂಡೆ :- ಆಯಿತು, ನಾವು ತಪ್ಪುಮಾಡಿ ಇಲ್ಲಿಗೆ ಬಂದಿದ್ದೇವೆ, ನೀವೂ ಏಕೆ ತಪ್ಪು ಮಾಡುತ್ತೀರಿ?

ಶ್ರೀ ಎ. ಕೃಷ್ಣಪ್ಪ(ತೋಟಗಾರಿಕಾ ರಾಜ್ಯ ಸಚಿವರು):- ಮಾನ್ಯ ಅಧ್ಯಕ್ಷರೇ, ಅಲಾಟ್‌ಮೆಂಟ್‌ನ ಪತ್ರವನ್ನು ಕೊಟ್ಟಿದ್ದು ಅವರ ಕಾಲದಲ್ಲಿಯೇ; ನಮ್ಮ ಕಾಲದಲ್ಲಿ ಆ ರೀತಿ ಕೊಡಲು ಸಾಧ್ಯವಾಗುವುದಿಲ್ಲವೆಂದೇ ಕೊಡಲಿಲ್ಲ.

ಶ್ರೀ ಆರ್.ವಿ.ದೇಶಪಾಂಡೆ:- ಸೈಟಿಗಾಗಿ ಹಣವನ್ನು ಡಿಪಾಜಿಟ್ ಮಾಡಿರುವುದರ ಮೇಲೆ, ಮತ್ತು ಕಾರ್ನರ್ ಸೈಟುಗಳನ್ನು ಮಾರಾಟ ಮಾಡುವ ಮೂಲಕ ಇವತ್ತು ಬಿ.ಡಿ.ಎ. ನಡೆಯುತ್ತಿದೆ. ಅದರ ಮೇಲೆಯೇ ಇವತ್ತು ಬಿ.ಡಿ.ಎ. ವ್ಯವಹಾರ ನಡೆಯುತ್ತಿದೆ. ಮುದ್ದಪ್ಪ, ನಾಯಕ್‌ರಂಥ ಒಳ್ಳೊಳ್ಳೆಯ ಅಧಿಕಾರಿಗಳು ಬಿ.ಡಿ.ಎ.ನಲ್ಲಿ ಇರಬಹುದು. What they can do? Under the Land Acquisition Act lands have been granted. They have taken the possession under the Land Acquisition Act? ಕೊಟ್ಟಿರತಕ್ಕ ಭೂಮಿಯನ್ನು ವಾಪಸ್ ಪಡೆಯಲು ಬಿ.ಡಿ.ಎ.ಗೆ ಇವತ್ತು ಸಾಧ್ಯವಿದೆಯೇ? Can the BDA take those lands? It is foolish. What is your Law Department doing?

ಇದರ ಬಗ್ಗೆ ನಿಮ್ಮ ಕಾನೂನು ಸಚಿವರು ಏನು ಮಾಡುತ್ತಾರೆ? ನಿಮ್ಮ ಕಾನೂನು ಇಲಾಖೆ ಏನು ಮಾಡುತ್ತಿದೆ? ನಾನು ಕಳ್ಳರಿಗೆ, ಕಳ್ಳ ಸೊಸೈಟಿಗಳಿಗೆ ಸಹಾಯ ಮಾಡಿ ಎಂದು ಹೇಳುತ್ತಿಲ್ಲ, ಆದರೆ ಕೆಲವರಲ್ಲಿ genuine membership ಇದೆ. ನಮ್ಮ ಕಾಲದಲ್ಲಿ ಪ್ರತಿಯೊಂದು ಸೊಸೈಟಿಗೂ ದಕ್ಷರಾದಂಥ, ಪ್ರಾಮಾಣಿಕವಾದಂಥ ಅಧಿಕಾರಿಗಳನ್ನು ಹಾಕಬೇಕು ಎನ್ನುವ ನಿರ್ಣಯವನ್ನು ಮಾಡಿದ್ದೆವು. You have to put upright and honest officers there. ಎಲ್ಲಾ ಅರ್ಜಿಗಳನ್ನು ಎಕ್ಸಾಮಿನ್ ಮಾಡಿ. ಪ್ರತಿಯೊಂದು ಅಪ್ಲಿಕೆಂಟ್‌ನ ಫೋಟೋಗ್ರಾಫ್ ಬೇಕೆಂದು ಹೇಳಿ ನಂತರ ವೆರಿಫೈ ಮಾಡಿ ಯಾರಿಗೆ ಮನೆ ಇಲ್ಲ ಯಾರು ನಿವೇಶನಕ್ಕೆ ಅರ್ಹತೆ ಪಡೆದಿದ್ದಾರೆ ಅವರಿಗೆ ಅನುಕೂಲ ಮಾಡಿಕೊಡಿ. ಅವರ ತೊಂದರೆ ಸಾಲ್ವ್ ಮಾಡಿ. ಅದನ್ನು ಬಿಟ್ಟು ಬಂಗಾರಪ್ಪನವರು ಏನು ಮಾಡಿದ್ದಾರೆ, ನಾವು ಏನೂ ಮಾಡುವುದಿಲ್ಲ ಮತ್ತೊಬ್ಬರು ಸಹ ಮಾಡುವುದಿಲ್ಲವೆಂದು ಹೇಳುವುದು ಬೇಡ. ನಿಮ್ಮ ನಿಮ್ಮ ಕಚ್ಚಾಟದಲ್ಲಿ ನಿಮ್ಮ ಕಾಂಪಿಟಿಷನ್‌ನಲ್ಲಿ ಜನ ಸಾಯುತ್ತಿದ್ದಾರೆ. 2,75,000 ಜನರ ಶಾಪ ನಿಮಗಿದೆ. ಇದು ಹೌಸಿಂಗ್ ಆಗಬಹುದು, ಎಜುಕೇಷನ್ ಆಗಬಹುದು, ಹೀಗೆ ಪ್ರತಿ ಹಂತದಲ್ಲೂ ಸರ್ಕಾರ ಇವತ್ತು ವಿಫಲವಾಗಿದೆ. Honest, dedicated and sincere Officers ಪ್ರತಿಯೊಂದು ಸೊಸೈಟಿಗೆ ಹೋಗಿ ಮೆಂಬರ್‌ಷಿಪ್ಪನ್ನು ಪರಿಶೀಲಿಸಿ ಸಮಸ್ಯೆಯನ್ನು ಸಾಲ್ವ್ ಮಾಡುವುದಕ್ಕಾಗುವುದಿಲ್ಲವೇ? ಆ ಮನಸ್ಸು ನಿಮ್ಮ ಸರಕಾರದಲ್ಲಿಲ್ಲ. ಇಷ್ಟು ಕಚ್ಚಾಟ ನಿಮ್ಮಲ್ಲಿ ಬೆಳೆದಿದೆ, ನಿಮಗೆ ಸಮಯ ಎಲ್ಲಿದೆ? ಮುಖ್ಯಮಂತ್ರಿಗಳಿಗೆ ಸಮಯ ಇಲ್ಲ, ಮಂತ್ರಿಗಳಿಗೆ ಸಮಯ ಇಲ್ಲ. ರಾಜಶೇಖರಮೂರ್ತಿಯವರೇ, ನೀವೂ ಕೂಡ ಬಿಜಿಯಾಗಿಬಿಟ್ಟಿರಿ; ನೀವೂ ನಮ್ಮ ಕೈಗೆ ಸಿಗುವುದಿಲ್ಲ. ನಿಮ್ಮ ಬಗ್ಗೆ ಬಹಳ ಅಭಿಮಾನವಿದೆ. He is with the dissidents. He is talking with the dissidents.

ಅದಕ್ಕೆ ನಾವೇನು ಮಾಡಬೇಕು. ಪ್ರತಿ ದಿನದಲ್ಲಿ ಸ್ವಲ್ಪ ಸಮಯವಾದರೂ ಅಪೋಸಿಷನ್ ಶಾಸಕರಿಗೆ ಸಮಯ ಕೊಡಿ.

ಶ್ರೀ ಡಿ.ಬಿ.ಚಂದ್ರೇಗೌಡ:- ಇವರನ್ನೂ ಡಿಸಿಡೆಂಟ್ ಅಂತೀರಾ?

ಶ್ರೀ ಆರ್.ವಿ.ದೇಶಪಾಂಡೆ :- ಮಾನ್ಯ ಕಂದಾಯ ಸಚಿವರೇ, ತಾವು ಹಿರಿಯ ಮಂತ್ರಿಗಳು; ಘೋರ್ಪಡೆಯವರು ಇದ್ದಾರೆ ಹಾರನಹಳ್ಳಿ ರಾಮಸ್ವಾಮಿಯವರಿದ್ದಾರೆ, ಇವರ ಬಗ್ಗೆ ಸ್ವಲ್ಪಗೌರವಇದೆ Personally we have regard . ನಿಮ್ಮಂತಹವರಿಗೆ ಸರಕಾರ ನಡೆಸಲಿಕ್ಕೆ ಬರಲಿಲ್ಲವೆಂದರೆ ಇನ್ನು ನಮ್ಮಂತಹವರು ಹೇಗೆ ಸರಕಾರ ನಡೆಸಲಿಕ್ಕಾಗುತ್ತದೆ? ನೀವು ಇದರ ಬಗ್ಗೆ ಚಿಂತನೆ ಮಾಡ ಬೇಕಾಗುತ್ತದೆ. ಪಂಚಾಯತ್ ರಾಜ್ ವ್ಯವಸ್ಥೆ ಬಗ್ಗೆ ಹೇಳುವುದಾದರೆ ನೀವು ಏನು ಮಾಡಿದ್ದೀರೆಂದರೆ You have put the clock back ಅಂದರೆ ಮಾನ್ಯ ರಾಮಕೃಷ್ಣ ಹೆಗಡೆಯವರು ನಜೀರ್ ಸಾಬರು ರೆವಲ್ಯೂಷನರಿ ಆಕ್ಟ್ ತಂದು ಏನು ಜನರ ಕೈಯ್ಯಲ್ಲಿ, ಅಧಿಕಾರ ಕೊಟ್ಟರು. ಅದನ್ನೆಲ್ಲಾ ತಾವು ಕ್ಲಾಕ್ ಹಿಂದೆ ಹಾಕಿ ಎಲ್ಲಾ ಅಧಿಕಾರವನ್ನು ಸೆಟ್‌ರೈಟ್ ಮಾಡಿ ಎಲ್ಲಾ ಸೆಂಟ್ರಲೈಸ್ ಮಾಡಿ ಇವತ್ತು ಅಧಿಕಾರಿಗಳಿಗೆ ಹೆಚ್ಚಿನ ಅಧಿಕಾರವನ್ನು ಕೊಟ್ಟು ಎಲೆಕ್ಟೆಡ್ ಜನರನ್ನು ಸಬ್ ಸರ್ವಿಯೆಂಟ್ ಮಾಡಿ ಬಿಟ್ಟಿರಿ. ಇದರಿಂದ ನೀವು ಏನು ಸಾಧನೆ ಮಾಡಿದಿರಿ? ನಿಮ್ಮ ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ನಿಮಗೆ ವಿಶ್ವಾಸ ಇದ್ದರೆ ಈ ರೀತಿ ಬಿಲ್ ಮಾಡಲಿಕ್ಕೆ ಸಾಧ್ಯವಿಲ್ಲ. This document will be a manifesto for us. This Bill will be a manifesto for us in the elections. ಅಂತ ನಾನು ಹೇಳಿದ 72ನೇ ಅಮೆಂಡ್‌ಮೆಂಟ್ ಪ್ರಕಾರ ಮಾಡುತ್ತೇವೆಂದು ಹೇಳಿ ಇವತ್ತು ತಾವು ಮಾಡಿದ್ದು ಏನು? ಡೀ-ಸೆಂಟ್ರಲೈಸೇಷನ್ ಮಾಡುತ್ತೇವೆಂದು ಹೇಳಿದಿರಿ. ಆದರೆ ಇವತ್ತು ಎಲ್ಲಾ ಪಂಚಾಯತ್ ರಾಜ್ ವ್ಯವಸ್ಥೆಯ ಸತ್ಯನಾಶ ಮಾಡಿದಿರಿ. ಇದರಿಂದ ಈ ವ್ಯವಸ್ಥೆಯಲ್ಲಿ ನಿಮಗೆ ವಿಶ್ವಾಸವಿಲ್ಲವೆಂದು ಕಾಣುತ್ತದೆ. ಈ ವ್ಯವಸ್ಥೆಯಲ್ಲಿ ನಿಮಗೆ ವಿಶ್ವಾಸವಿದ್ದರೆ ಈ ರೀತಿ ಮಾಡುತ್ತಿರಲಿಲ್ಲ. ಡಿಸೆಂಬರಿನಲ್ಲಿ ಚುನಾವಣೆ ಮಾಡುತ್ತೇವೆ ಎಂದು ಹೇಳುತ್ತಿದ್ದೀರಿ. ನೀವು ಡಿಸೆಂಬರಿನಲ್ಲಿ ಚುನಾವಣೆ ಮಾಡಿದರೆ ನಾನೇ ಬಂದು ಹಾರ ಹಾಕಬೇಕಾಗುತ್ತದೆ. ಆದರೆ ನೀವು ಆಗ ಇರುವುದಿಲ್ಲ. ನೀವು ಇಲ್ಲಿ ಅಧಿಕಾರದಲ್ಲಿರುತ್ತೀರೆಂದು ನಮಗೆ ವಿಶ್ವಾಸ ಇಲ್ಲ. ಚುನಾವಣೆ ಮಾಡುವ ಸ್ಥಿತಿಯಲ್ಲಿದ್ದರೆ ಈ ರೀತಿ ಮಾಡುತ್ತಿದ್ದಿರಾ?

ಅಧಿಕಾರಿಗಳು ಮನಸ್ಸಿಗೆ ಬಂದ ಹಾಗೆ ಡೀ-ಲಿಮಿಟೇಷನ್ ಮಾಡಿದ್ದಾರೆ. ಎಷ್ಟು ಜನರನ್ನು ವಿಶ್ವಾಸಕ್ಕೆ ತೆಗೆದುಕೊಂಡಿದ್ದಾರೆ, ಯಾರನ್ನು ವಿಶ್ವಾಸಕ್ಕೆ ತೆಗೆದುಕೊಂಡಿದ್ದಾರೆ, ಜನತಾ ಪ್ರತಿನಿಧಿಯನ್ನು ವಿಶ್ವಾಸಕ್ಕೆ ತೆಗೆದಕೊಂಡಿದ್ದಾರೆಯೇ ಅಂದರೆ ಇಲ್ಲ. ಮನಸ್ಸಿಗೆ ಬಂದ ಹಾಗೆ ಡೀ-ಲಿಮಿಟೇಷನ್ ಮಾಡಿದ್ದಾರೆ. ಪ್ರತಿಯೊಂದು ಹಂತದಲ್ಲೂ ಕೋರ್ಟಿಗೆ ಹೋಗಿ ಸ್ಟೇ ತರಬೇಕು ಚುನಾವಣೆಯಾಗಬೇಕು. ಆದರೆ ಚುನಾವಣೆಯನ್ನು ಫೇಸ್ ಮಾಡುವ ಧೈರ್ಯ ನಿಮ್ಮ ಪಕ್ಷದಲ್ಲಿಲ್ಲ. You have forfeited all your rights. ನಿಮಗೆ ಕೊಟ್ಟ ಆಶೀರ್ವಾದವನ್ನು ಜನರು ವಾಪಸ್ ಪಡೆದಿದ್ದಾರೆ. ಪಂಚಾಯತ್ ರಾಜ್ ವ್ಯವಸ್ಥೆಯನ್ನು ಮಾಡಿ ನಾವು ಜನರ ಕೈಯಲ್ಲಿ ಅಧಿಕಾರ ಕೊಟ್ಟೆವು; ಆದರೆ ಆ ಅಧಿಕಾರವನ್ನು ಇವರು ವಾಪಸ್ ಪಡೆದುಕೊಂಡಿದ್ದಾರೆ. ಹಾಗಾಗಿ ಜನ ಇವರ ಕೈಗೆ ಅಧಿಕಾರವೇನು ಕೊಟ್ಟಿದ್ದರು ಆ ಅಧಿಕಾರವನ್ನು ಪುನಃ ನಿಮ್ಮಿಂದ ಜನವಾಪಸ್ ಕೇಳುತ್ತಿದ್ದಾರೆ. ಅದನ್ನು ವಾಪಸ್ ಕೊಡಬೇಕಾಗುತ್ತದೆ. ನಿಮಗೆ ಅಧಿಕಾರದಲ್ಲಿ ಉಳಿಯುವ ಹಕ್ಕು ಇಲ್ಲ. ನಿಮ್ಮನ್ನು ನಂಬಿ ಜನ ನಿಮ್ಮ ಕೈಯ್ಯಲ್ಲಿ ಅಧಿಕಾರ ಕೊಟ್ಟರು. ಆದರೆ ನೀವು ಜನಗಳಿಗೆ ಮೋಸ ಮಾಡಿದ ನಂತರ ಆ ಜನ ಇವತ್ತು ನಿಮ್ಮ ಮೇಲಿದ್ದ ವಿಶ್ವಾಸ ಕಳೆದುಕೊಂಡಿದ್ದಾರೆ. ಹಾಗಾಗಿ ಅಧಿಕಾರದಲ್ಲಿ ಉಳಿಯಲಿಕ್ಕೆ

ನಿಮಗೆ ಯಾವುದೇ ರೀತಿಯ ಅರ್ಹತೆಯಿಲ್ಲ. ಯಾರಿಗೇ ಆಗಲಿ ಲೋಕಲ್ ಸೆಲ್ಫ್ ಗೌರ್ನಮೆಂಟ್‌ನಲ್ಲಿ ವಿಶ್ವಾಸವಿದ್ದರೆ, ಪಂಚಾಯತ್‌ರಾಜ್ ವ್ಯವಸ್ಥೆಯಲ್ಲಿ ವಿಶ್ವಾಸವಿದ್ದರೆ ಈ ರೀತಿಯ ಕಾನೂನನ್ನು ತರುವುದಕ್ಕೆ ಯಾವಾಗಲೂ ಸಾಧ್ಯವಿಲ್ಲ.

ಇನ್ನು ರಾಜ್ಯದ ಬರಗಾಲ ಪರಿಸ್ಥಿತಿ ಬಗ್ಗೆ ಹೇಳುವುದಾದರೆ, ನಮ್ಮ ಸರ್ಕಾರ ಅಧಿಕಾರದಲ್ಲಿ ಇದ್ದಾಗಲೂ ಸತತವಾಗಿ 5 ವರ್ಷಗಳ ಕಾಲ ಬರಗಾಲವಿತ್ತು. ಆಗ ನಾವು ಆ ಬರಗಾಲನ್ನು ವಾರ್ ಫುಟಿಂಗ್‌ಮೇಲೆ ಟ್ಯಾಕಲ್ ಮಾಡಿದ್ದೇವೆ. ರಿಸೋರ್ಸಸ್ ಕ್ರೈಸ್ ಇತ್ತು. ಅಗ್ರಿಕಲ್ಚರ್, ಇಂಡಸ್ಟ್ರಿಯಲ್ ಪ್ರೊಡಕ್ಷನ್ಸ್‌ಗೆ ಎಫೆಕ್ಟ್ ಆಗಿ ನಮ್ಮ ರಿಸೋರ್ಸಸ್ ಮೇಲೆ ಕೆಟ್ಟ ಪರಿಣಾಮವಾಯಿತು. ಆದರೆ ನಾವು ಅವತ್ತು ಯಾವುದೇ ಅಭಿವೃದ್ಧಿ ಕಾರ್ಯಕ್ರಮಗಳನ್ನಾಗಲಿ, ವೆಲ್‌ಫೇರ್ ಕಾರ್ಯಕ್ರಮಗಳನ್ನಾಗಲಿ ನಿಲ್ಲಿಸಲಿಲ್ಲ. ನಾವು ಬಡ ಜನರಿಗೆ 2 ರೂ.ಗೆ 1ಕಿ.ಲೋನಂತೆ ಅಕ್ಕಿಯನ್ನು ಕೊಟ್ಟೆವು. ಆದರೆ ನೀವು ಆ ಸ್ಕೀಮನ್ನು ವಿತ್‌ಡ್ರಾ ಮಾಡಿದಿರಿ. ಸೀರೆ ಪಂಚೆ ಕೊಡತಕ್ಕ ಕಾರ್ಯಕ್ರಮವನ್ನು ನಾವು ಜಾರಿಗೆ ತಂದಿದ್ದೆವು ಅದನ್ನೂ ನೀವು ಬಂದ್ ಮಾಡಿದಿರಿ. ರೈತರಿಗೆ ಶೇಕಡ ಏಳರ ಪ್ರಕಾರ ಸಾಲ ಕೊಡುವುದಕ್ಕೆ ವ್ಯವಸ್ಥೆ ಮಾಡಿದೆವು. ಅದನ್ನೂ ನೀವು ವಾಪಸು ತೆಗೆದುಕೊಂಡಿರಿ. ಬಡ್ಡಿ, ಚಕ್ರಬಡ್ಡಿಯನ್ನು ನಾವು ಮನ್ನಾ ಮಾಡಿದೆವು. ಅಂಥ ಕಾರ್ಯಕ್ರಮ ನಿಮ್ಮದು ಯಾವುದೂ ಇಲ್ಲ. ಕಳೆದ 3 ವರ್ಷದಿಂದ ರಾಜ್ಯದ ರೈತ ತುಂಬಾ ಕಂಗಾಲಾಗಿದ್ದಾನೆ. ಭೀಕರ ಬರಗಾಲ ಬಂದಿದೆ. ನೀವು ಅವರಿಗೆ ಕೊಟ್ಟಂಥ ರಿಯಾಯಿತಿಯಾದರೂ ಏನೆಂದರೆ ಪುನಃ ಆಶ್ವಾಸನೆಗಳನ್ನು ಕೊಟ್ಟಿದ್ದು. ಕಳೆದ ವರ್ಷದಲ್ಲಿ ಭೀಕರ ಬರಗಾಲ ಆಗಿ ರೈತರು ಕಂಗಾಲಾದರು. ಆದರೆ ಸರ್ಕಾರದಿಂದ ಯಾವುದೇ ರಿಯಾಯಿತಿ ಅವರಿಗಿಲ್ಲ. ಕೇಂದ್ರಸರ್ಕಾರ ಅವರನ್ನು ನೋಡುವುದಕ್ಕೆ ತಯಾರಿಲ್ಲ. ಆಂಧ್ರದಲ್ಲಿ ನೆರೆಹಾವಳಿಯಾದರೆ ಅದನ್ನು ನೋಡುವುದಕ್ಕೆ ಕೇಂದ್ರಸರ್ಕಾರದ ಮಂತ್ರಿಗಳು ಹೋಗುತ್ತಾರೆ. ಕಾವೇರಿ ಸಮಸ್ಯೆ ಬಂದಾಗ ಆ ಮಂತ್ರಿಗಳು ತಮಿಳ್ನಾಡಿಗೆ ಹೋಗುತ್ತಾರೆ. ಆದರೆ ನಮ್ಮ ಕರ್ನಾಟಕ ರಾಜ್ಯಕ್ಕೆ ಯಾರೂ ಬರುವುದಿಲ್ಲ. ಕೇಂದ್ರಸರ್ಕಾರ ನಮ್ಮ ಕರ್ನಾಟಕ ಸರ್ಕಾರವನ್ನು ಯಾವರೀತಿಯಲ್ಲಿ ಮಲತಾಯಿ ಧೋರಣೆಯಿಂದ ನೋಡುತ್ತಿದೆ ಎಂಬುದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ರೈತರ ಬೆಳೆಯೆಲ್ಲಾ ಹಾಳಾಗಿ ಹೋಯಿತು. ಆದರೂ ನಿಮ್ಮ ಕಡೆಯಿಂದ ಅವರಿಗೆ ಯಾವುದೇ ಸಹಾಯವಿಲ್ಲ. ಅಲ್ಪಸ್ವಲ್ಪ ಬೆಳೆ ಬಂತು; ಆದರೆ ಅದಕ್ಕೆ ಸೂಕ್ತ ಬೆಲೆ ಇಲ್ಲ. ನರಗುಂದಕ್ಕೆ ಮಾನ್ಯ ಮುಖ್ಯಮಂತ್ರಿಗಳು ನಮ್ಮ ಮಾನ್ಯ ಯಾವಗಲ್‌ರವರ ಫ್ಯಾಕ್ಟರಿಯನ್ನು ಉದ್ಘಾಟನೆ ಮಾಡುವುದಕ್ಕೆ ಬಂದಿದ್ದಾಗ ಸಾವಿರಾರು ರೈತರು ಹೋಗಿ ಮುಖ್ಯಮಂತ್ರಿಗಳ ಹತ್ತಿರ ಹೇಳಿಕೊಂಡರು. ಹತ್ತಿ ಬೆಳೆ, ಜೋಳದ ಬೆಲೆ ಕುಸಿದು ಬಿದ್ದಿದೆ ಎಂದು. ಕೇವಲ 15 ದಿನಗೊಳಗೆ ನಿಮಗೆ ಸಪೋರ್ಟ್ ಪ್ರೈಸನ್ನು ಕೊಡಿಸುತ್ತೇನೆಂದು ಹೇಳಿದರು. ಹಾಗೆ ಹೇಳಿ 8-9 ತಿಂಗಳಾದರೂ ಇನ್ನೂ ಇವರು ಸಪೋರ್ಟ್ ಪ್ರೈಸನ್ನು ಕೊಡಲಿಲ್ಲ. ನೀವು ಏನು ಸಹಾಯ ಮಾಡುತ್ತಿದ್ದೀರಿ? ಬಂದ ಅಲ್ಪಸ್ವಲ್ಪ ಬೆಳೆಗೂ ಕೂಡ ಸರಿಯಾದ ದರ ಇಲ್ಲ. ತಮಗೆ ಗೊತ್ತಿರುವಂತೆ ನೆರೆಹಾವಳಿ ಬಂದು 105 ತಾಲ್ಲೂಕುಗಳು ತೊಂದರೆಗೀಡಾದುವು. 51.92 ಲಕ್ಷ ಜನತೆಗೆ ನೆರೆ ಹಾವಳಿಯಿಂದ ತೊಂದರೆಯಾಯಿತು. ನಿಮ್ಮ ಅಂದಾಜಿನ ಪ್ರಕಾರ ನೆರೆಹಾವಳಿಯಿಂದ ಆದಂಥ ನಷ್ಟ 307 ಕೋಟಿ ರೂ.ಗಳು. ಆದರೆ ನೀವು ಬಿಡುಗಡೆ ಮಾಡಿದ ಹಣ 69 ಕೋಟಿ ರೂ.ಗಳು. ಇದು ಏತಕ್ಕೆಂದರೆ, ಉದ್ಯೋಗ ಕೊಡುವುದಕ್ಕೆ, ಮನೆ ಕಟ್ಟುವುದಕ್ಕೆ, ಪುನರ್ ವಸತಿ ಕಲ್ಪಿಸುವುದಕ್ಕೆ, ಭೂ ಸ್ವಾಧೀನಕ್ಕಾಗಿ, ಬೆಳೆ ಪರಿಹಾರಕ್ಕಾಗಿ. ನಿಮ್ಮ ಲೆಕ್ಕದ ಪ್ರಕಾರ 307 ಕೋಟಿ ರೂ. ಹಾನಿಯಾಗಿದೆ.

ಆದರೆ ನಾವು ಆ ಲೆಕ್ಕವನ್ನು ಒಪ್ಪಿಕೊಳ್ಳುವುದಿಲ್ಲ. ನಮ್ಮ ಅಂದಾಜಿನ ಪ್ರಕಾರ ಸುಮಾರು 700-800 ಕೋಟಿ ರೂ. ಹಾನಿಯಾಗಿದೆ. ನೀವು ಕೊಟ್ಟಿದ್ದು 69 ಕೋಟಿ ರೂ. ಆದರೆ ಈ ಹಣ ಕೂಡ ಫಲಾನುಭವಿಗಳಿಗೆ ಸರಿಯಾಗಿ ಮುಟ್ಟಿಲ್ಲ. ಇನ್ನೂ ಎಷ್ಟೋ ಮನೆಗಳನ್ನು ನೀವು ಕಟ್ಟಿ ಕೊಡುವುದಕ್ಕಾಗಿಲ್ಲ. ಬೆಳೆ ಹಾಳಾದುದಕ್ಕೆ ಪರಿಹಾರವನ್ನು ಕೊಡುತ್ತೇವೆಂದು ರೈತರಿಗೆ ಹೇಳಿದಿರಿ. ಆದರೆ ಏನು ಪರಿಹಾರವನ್ನು ಕೊಟ್ಟಿರಿ? ಏನೇನೂ ಇಲ್ಲ. ಇವತ್ತು ಆ ಜನರು ನಿಮಗೆ ಶಾಪವನ್ನು ಕೊಟ್ಟರೆ ಅದರಲ್ಲಿ ಏನು ತಪ್ಪಿದೆ? ಎಷ್ಟೋ ಸಾವಿರ ಕೋಟಿ ರೂ.ಗಳ ವಿಶ್ವಬ್ಯಾಂಕ್‌ನ ಸಹಾಯವನ್ನು ತರುತ್ತೇವೆಂದು ನೀವು ಹೇಳಿದಿರಿ. ಆ ವಿಶ್ವಬ್ಯಾಂಕ್ ಎಲ್ಲಿದೆ? ಮನಮೋಹನ್ ಸಿಂಗ್ ಎಲ್ಲಿದ್ದಾರೆ? ಅವರು ಯಾರಿಗೂ ಗೊತ್ತಿಲ್ಲ. ವಿಶ್ವಬ್ಯಾಂಕ್ ಎಲ್ಲಿದೆ? ಅದರ ಸಹಾಯ ಎಲ್ಲಿದೆ? ನಿಮ್ಮ ಮೆಮೋರ್‍ಯಾಂಡಂ ಏನಾಯಿತು? ನಿಮ್ಮ ಸರ್ಕಾರ ಈ ದಿಸೆಯಲ್ಲಿ ಏನು ಮಾಡಿತು? ನೀವು ಇಷ್ಟೊಂದು ಹಿರಿಯರಾಗಿದ್ದು, ಅನುಭವ ಇದ್ದು ವಿಶ್ವಬ್ಯಾಂಕ್‌ನಿಂದ, ಕೇಂದ್ರದಿಂದ ಏನು ಸಹಾಯವನ್ನು ತಂದಿರಿ? ಕಳೆದ ನವೆಂಬರ್ ತಿಂಗಳಲ್ಲಿ ಇದು ಆಗಿದ್ದರೂ, 8 ತಿಂಗಳು ಕಳೆದಿದ್ದರೂ ಇದುವರೆಗೂ ಸಂಬಂಧಪಟ್ಟವರಿಗೆ ಪರಿಹಾರವನ್ನು ಕೊಡುವುದಕ್ಕೆ ನಿಮಗೆ ಸಾಧ್ಯವಾಗಿಲ್ಲ. ಈ ವರ್ಷ ಪುನಃ ಬರಗಾಲ ಬಂದಿದೆ ಕಳೆದ 2-3 ತಿಂಗಳಲ್ಲಿ ನಾನು ರಾಜ್ಯದ ಸುಮಾರು 17-18 ಜಿಲ್ಲೆಗಳಲ್ಲಿ ಪ್ರವಾಸ ಮಾಡಿದ್ದೇನೆ. ಚಿತ್ರದುರ್ಗ, ಬಿಜಾಪುರ, ತುಮಕೂರು, ನಾರ್ತ್ ಕೆನರ, ಸೌತ್ ಕೆನರ, ಶಿವಮೊಗ್ಗಾ ಜಿಲ್ಲೆ, ಚಿಕ್ಕಮಗಳೂರು ಜಿಲ್ಲೆಯ ಕಡೂರಿನಲ್ಲಿ ಬರಗಾಲ. ಹೀಗೆ ಕೇವಲ 5 ಜಿಲ್ಲೆಗಳನ್ನು ಬಿಟ್ಟರೆ ಇಡೀ ರಾಜ್ಯದಲ್ಲಿ ರೈತರ ಬೆಳೆ ಹಾಳಾಗಿದೆ. ರೈತರು ಕಂಗಾಲಾಗಿದ್ದಾರೆ. ಅವರಿಗೆ ನಿಮ್ಮ ಪರಿಹಾರ ಯೋಜನೆ ಏನು? ರೈತರ ಜೊತೆ ಸ್ಪಂದನೆ ಮಾಡಿ ಅವರ ಸಮಸ್ಯೆಗಳನ್ನು ತಿಳಿದುಕೊಂಡು ಅವರ ಸಮಸ್ಯೆಗಳಿಗೆ ಪರಿಹಾರವನ್ನು ಕೊಡುವುದಕ್ಕೆ ನಿಮ್ಮ ಕಡೆಯಿಂದ ಏನೂ ಪ್ರಯತ್ನವಾಗಿಲ್ಲ. ಇವತ್ತು ರೈತರು ಕಂಗಾಲಾಗಿದ್ದಾರೆ. ಒಂದು ಕಡೆ ಬರಗಾಲ, ಮತ್ತೊಂದು ಕಡೆ ನೆರೆ ಹಾವಳಿ; ಪುನಃ ಬರಗಾಲ ; ನಿಮ್ಮ ಕಡೆಯಿಂದ ಯಾವುದೇ ರಿಯಾಯಿತಿ ಇಲ್ಲ; ಸಾಲ ಮನ್ನಾ ಮಾಡಿ ಎಂದು ಹೇಳುವುದಿಲ್ಲ, ಒಂದು ಬಾರಿ ಬಡ್ಡಿ ರಿಯಾಯಿತಿಯನ್ನು ಕೊಡಿ ಎಂದು, ಎಲ್ಲಾ ವಿರೋಧಪಕ್ಷದವರು ಹೇಳಿದ್ದೇವೆ ಶ್ರೀ ರಾಮಕೃಷ್ಣ ಹೆಗಡೆಯವರ ಸರ್ಕಾರದಲ್ಲಿ ರಿಯಾಯಿತಿಯನ್ನುಕೊಟ್ಟಿದ್ದರು. ಇಷ್ಟೊಂದು ಘೋಷಣೆ ಮಾಡುತ್ತೀರಿ, ಹೊರಗಡೆ ಹೇಳುತ್ತೀರಿ,70,80,100ಕೋಟಿ ರೂಪಾಯಿಗಳ ಸಹಾಯ ಬರುತ್ತದೆ ಎಂದು. ಎಲ್ಲ ಸರ್ಕಾರಗಳು, ಎಲ್ಲ ಪಕ್ಷಗಳು, ರೈತ ನಮ್ಮ ದೇಶದ ಬೆನ್ನೆಲುಬು ಎಂದು ಹೇಳಿದರೂ ಸಹ ರೈತನ ಬೆನ್ನಿಗೆ ಚೂರಿ ಹಾಕುತ್ತಿದ್ದೀರಿ. ಈ ಏಪ್ರಿಲ್‌ನಿಂದ ಈ ವರ್ಷ ಬರಗಾಲಕ್ಕೆ ಮಾನ್ಯ ಕಂದಾಯ ಸಚಿವರೇ, 7ಕೋಟಿ 80 ಲಕ್ಷ ರೂಪಾಯಿಗಳಲ್ಲಿ ಕಂದಾಯ ಸಚಿವರು 7 ಕೋಟಿ 10 ಲಕ್ಷ ರೂಪಾಯಿಗಳು ಕುಡಿಯುವ ನೀರಿಗೆ ಕೊಟ್ಟಿದ್ದೀರಿ. ಆದರೆ ಎಷ್ಟು ರಿಲೀಜು ಆಗಿದೆ ಎಂದು ನನಗೆ ಗೊತ್ತಿಲ್ಲ.

ಎಷ್ಟು ಹಣವನ್ನು ಬಿಡುಗಡೆ ಮಾಡಿದ್ದೀರಿ? ಎಂಪ್ಲಾಯ್‌ಮೆಂಟ್‌ಗೆ ಎಷ್ಟು ಕೊಟ್ಟಿದ್ದೀರೆಂದರೆ 70 ಲಕ್ಷ ರೂಪಾಯಿಗಳು,ಇಡೀ ರಾಜ್ಯದಲ್ಲಿ 16 ಜಿಲ್ಲೆಗಳು ಭೀಕರ ಬರಗಾಲದಲ್ಲಿವೆ. ರಾಜ್ಯದಲ್ಲಿ ಬಡ ಜನರಿಗೆ, ಕೂಲಿಗಳಿಗೆ, ರೈತರಿಗೆ ಕೆಲಸವಿಲ್ಲ. ಇವತ್ತು ಸರ್ಕಾರ ಕೊಟ್ಟಿದ್ದು 70 ಲಕ್ಷ ರೂಪಾಯಿಗಳು; ನಾಚಿಕೆಯಾಗಬೇಕು. ರೈತರಿಗೆ ಏನು ಕೊಟ್ಟಿದ್ದೀರಿ ಎಂದು ಕೃಷಿ ಸಚಿವರಿಗೆ ಕೇಳಿದರೆ ಗೊತ್ತಿಲ್ಲ; ಅವರು ಮಲಗಿಬಿಟ್ಟಿದ್ದಾರೆ, ಇವರಿಗೆ ಏನು ಚಿಂತನೆ ಇಲ್ಲ. ಕೃಷಿ ಸಚಿವರು ಹಿರಿಯರು

ಮತ್ತು ರೈತ ಕುಟುಂಬದಿಂದ ಬಂದಿರುವವರು. ದುಡ್ಡು ಕೊಡುವುದಕ್ಕೆ ಆಗಿಲ್ಲ; ಬೀಜ ಕೊಡಲಿಲ್ಲ. ಈ ಬರಗಾಲದಲ್ಲಿ ಕಂದಾಯ ಸಚಿವರಿಗೆ 7 ಕೋಟಿ 10ಲಕ್ಷ ರೂಪಾಯಿಗಳನ್ನು ನೀರಿಗೆ ಕೊಟ್ಟರೂ, ನಿಮಗೆ ಬೀಜಕ್ಕೆ ಗೊಬ್ಬರಕ್ಕೆ ದುಡ್ಡು ಕೊಡುವುದಕ್ಕೆ ಆಗಲಿಲ್ಲ. ನಿಮ್ಮ ಮುಖ್ಯಮಂತ್ರಿಗಳಿಗೂ ಚಿಂತನೆ ಇಲ್ಲ, ನಿಮ್ಮ ಶಾಸಕರಿಗೂ ಬರಗಾಲದ ಬಗ್ಗೆ ಗೊತ್ತಿಲ್ಲ ಆದರೆ ಇದರ ಬಗ್ಗೆ ಏನು ಚಿಂತನೆ ಮಾಡಿದ್ದೀರಿ? ಇವರ ಫಿಲ್ಡ್ ಕರ್ನಾಟಕವಾಗಿದೆ.

ಶ್ರೀ ಕೆ.ಹೆಚ್. ರಂಗನಾಥ್(ಲೋಕೋಪಯೋಗಿ ಸಚಿವರು) :– ಬರಗಾಲದಲ್ಲಿ ಅವರು ಬೀಜ ಗೊಬ್ಬರ ತೆಗೆದುಕೊಂಡು ಏನು ಮಾಡುತ್ತಾರೆ?

ಶ್ರೀ ಆರ್.ವಿ.ದೇಶಪಾಂಡೆ :– ಪರ್ಯಾಯ ಬೆಳೆಯನ್ನು ಪಡೆಯಬಹುದಲ್ಲಾ, ಸನ್‌ಫ್ಲವರ್ ಅಂಥದ್ದನ್ನು ಬೆಳೆಯಬಹುದು. ತಮಗೆ ಕೃಷಿ ಬಗ್ಗೆ ಗೊತ್ತಿಲ್ಲವೆಂದು ಕಾಣುತ್ತದೆ. ನಾವು ಕೃಷಿ ಕಡೆಗೆ ಇದ್ದೇವೆ; ಆದ್ದರಿಂದ ಸ್ವಲ್ಪ ಅನುಭವವಿದೆ.

ಶ್ರೀ ಕೆ.ಹೆಚ್.ರಂಗನಾಥ್ :– ಸನ್‌ಫ್ಲವರ್ ಕೂಡ ನಿಮ್ಮ ಕಡೆಗಿಂತ ನಮ್ಮ ಜಿಲ್ಲೆಯಲ್ಲಿ ಜಾಸ್ತಿ ಬರುತ್ತದೆ. ಅದನ್ನು ಸಹ ಮಳೆ ಬಂದರೆ ಬಿತ್ತುತ್ತಾರೆ.

ಶ್ರೀ ಆರ್.ವಿ.ದೇಶಪಾಂಡೆ :– ಖಾರಿಫ್ ಬೆಳೆ ಫೈಲ್ ಆದನಂತರ ಪರ್ಯಾಯ ಬೆಳೆ ಬೆಳೆಯುವ ಕಾರ್ಯಕ್ರಮವನ್ನು ಮಾಡಲಾಗುತ್ತದೆ. ತಾವು ಇರುವಾಗ ಅದು ಆಗಿತ್ತೋ ಇಲ್ಲವೋ ಗೊತ್ತಿಲ್ಲ. ಇದುಪ್ರತಿ ಸಾರಿಯೂ ಆಗಬೇಕಾಗುತ್ತದೆ. ಕಂಟಿನ್‌ಜೆನ್ಸಿ ಪ್ರೋಗ್ರಾಂನಲ್ಲಿ ರೈತರಿಗೆ ಬೀಜ, ಗೊಬ್ಬರ ಕೊಡಬೇಕಾಗುತ್ತದೆ. ಅದು ಸನ್‌ಫ್ಲವರ್ ಇರಬಹುದು, ಮತ್ತೊಂದು ಇರಬಹುದು, ಇಂತಹ ಪರಿಸ್ಥಿತಿಯಲ್ಲಿ ದುಡ್ಡು ಕೊಡಬೇಕಾಗುತ್ತದೆ. ಆದರೆ ನೀವು ದುಡ್ಡನ್ನು ಕೊಟ್ಟಿಲ್ಲ. ಇದರಿಂದ 16 ಜಿಲ್ಲೆಗಳು ಕಂಗಾಲಾಗಿವೆ.

ಶ್ರೀ ಕೆ.ಹೆಚ್. ರಂಗನಾಥ್ :– ಬರಗಾಲದಲ್ಲಿ ಯಾವ ಬೀಜ ಕೊಡಬೇಕೆಂದು ಯೋಚನೆಯಾಗಿದೆ. ಯಾವ ಬೀಜ ಕೊಡಬೇಕು, ಯಾವ ಗೊಬ್ಬರ ಕೊಡಬೇಕು. ಬೈರೇಗೌಡರೇ ನಿಮ್ಮ ಜಿಲ್ಲೆಯೂ ಬರಗಾಲಕ್ಕೆ ಹೆಸರುವಾಸಿಯಾದ ಜಿಲ್ಲೆ, ನನ್ನದು ಕೂಡ ಸ್ವಲ್ಪ ಹೆಸರುವಾಸಿಯಾದ ಜಿಲ್ಲೆ; ಆದ್ದರಿಂದ ನಾವು ಬರಗಾಲದಲ್ಲಿ ಏನು ಬಿತ್ತಬೇಕು?

ಶ್ರೀ ಜೆ.ಸಿ. ಮಾಧುಸ್ವಾಮಿ :– ಇರಿಗೇಷನ್ ಇರುವ ಕಡೆ ಹತ್ತತ್ತು ಕುಂಟೆ ಮೇವು ಬೆಳೆಯಬಹುದು. ಫಾಡರ್ ಫಾರಂನಲ್ಲಿ ಮೇವು ಬೆಳೆಯುವಂತೆ ತಾವಾದರೂ ಮಾಡಬೇಕಾಗಿತ್ತು. ಈಗ ದನಕರುಗಳು ಸತ್ತುಹೋಗುತ್ತಿವೆ.

ಶ್ರೀ ಸಿ.ಬೈರೇಗೌಡ :– ಬರಗಾಲದಲ್ಲಿ ಕೂಡ ಕೆಲವು ಬೆಳೆಗಳನ್ನು ಬೆಳೆಯುವುದಕ್ಕೆ ಸಾಧ್ಯವಿದೆ. ಮುಂಗಾರು ವಿಫಲವಾದರೆ ಮತ್ತೆ ಆಗಸ್ಟ್-ಸೆಪ್ಟೆಂಬರ್‌ನಲ್ಲಿ ಕೆಲವು ಸಂದರ್ಭಗಳಲ್ಲಿ ಮಳೆ ಬರುವಂತಹ ಸಂದರ್ಭದಲ್ಲಿ ಅದಕ್ಕೆ ಆಗುವಂತಹ ಬೀಜಗಳನ್ನು ಹಾಕಬಹುದು.

ಶ್ರೀ ಕೆ.ಹೆಚ್ ರಂಗನಾಥ್ :– ಮುಂಗಾರು ಪ್ರಾರಂಭವಾದರೆ ವ್ಯವಸ್ಥೆ ಮಾಡಬಹುದಾಗಿತ್ತು. ಆದರೆ ಈಗ ಬರಗಾಲದಲ್ಲಿ ಏನು ಮಾಡಬೇಕು.

ಶ್ರೀ ಸಿ.ಬೈರೇಗೌಡ :– ಬರಗಾಲದಲ್ಲಿ ಜನರಿಗೆ ಕುಡಿಯುವುದಕ್ಕೆ ನೀರು, ಕೈಗೆ ಕೆಲಸ, ಮತ್ತು ದನಕರುಗಳಿಗೆ ಕುಡಿಯುವುದಕ್ಕೆ ನೀರು ಮತ್ತು ಮೇವು ಕೊಡಬೇಕು.

ಶ್ರೀ ಕೆ.ಹೆಚ್. ರಂಗನಾಥ್ :- ಅವರು ಬೀಜ ಬೀಜ ಎನ್ನುತ್ತಿದ್ದರು; ಅದಕ್ಕೋಸ್ಕರ ಕೇಳಿದ್ದು.

ಶ್ರೀ ಜೆ.ಸಿ.ಮಾಧುಸ್ವಾಮಿ : - ಸನ್ಮಾನ್ಯ ಮಂತ್ರಿಗಳೇ, ನಮ್ಮ ಕಡೆ ಹತ್ತತ್ತು ಕುಂಟೆ, ಇಪ್ಪತ್ತು ಕುಂಟೆ ಫಾಡರ್ ಬೆಳೆ ಬೆಳೆಯುವುದಕ್ಕೆ ಅಂತ ನೀರು ಕೊಡುತ್ತಿದ್ದೇವೆ. ಇರಿಗೇಷನ್ ಇರುವವರು ಕೊನೆ ಪಕ್ಷ ಫಾಡರ್ ಬೆಳೆ ಬೆಳೆದರೆ ದನಕರುಗಳಿಗಾದರೂ ಅನುಕೂಲವಾಗುತ್ತಿತ್ತು; ಆ ಪಾಪದ ಕೆಲಸವನ್ನು ಸಹ ತಾವು ಮಾಡಲಿಲ್ಲ.

ಶ್ರೀ ಕೆ.ಹೆಚ್. ರಂಗನಾಥ್ : - ಅದಕ್ಕೆ ನೀರು ಬೇಕಲ್ಲ.

ಶ್ರೀ ಜೆ.ಸಿ ಮಾಧುಸ್ವಾಮಿ : - ಕೋಲಾರದಲ್ಲಿ 50 ಸಾವಿರ ಪಂಪ್ ಸೆಟ್‌ಗಳು ತುಮಕೂರಿನಲ್ಲಿ 20 ಸಾವಿರ ಪಂಪ್‌ಸೆಟ್‌ಗಳಿವೆ. ಇಂಥಲ್ಲಿ ಆದರೂ ಮಾಡಬಹುದಲ್ಲ.

4.05 ಪಿ.ಎಂ

ಶ್ರೀ ಆರ್.ವಿ.ದೇಶಪಾಂಡೆ : - ಮಾನ್ಯ ಸಚಿವರು ಕೇಳಿದರು, ಬರಗಾಲದಲ್ಲಿ ಯಾವ ಬೀಜ ಕೊಡಬೇಕು ಎಂದು. ಮಾನ್ಯ ಸಚಿವರೇ, ನಾನು ಒಪ್ಪಿಕೊಳ್ಳುತ್ತೇನೆ, ಸನ್‌ಫ್ಲವರ್ ಅಂತಹ ಬೆಳೆ ಇದೆ. ಕಂಟಿಂಜೆನ್ಸಿ ಪ್ರೋಗ್ರಾಂನಿಂದ ತೆಗೆದುಕೊಳ್ಳುವುದಕ್ಕೆ ಬರುತ್ತದೆ. ಸ್ವಲ್ಪ ಮಳೆ ಬಂದರೆ ಸಾಕು. ಈಗ ಬಿಜಾಪುರದಲ್ಲಿ ಸ್ವಲ್ಪ ಮಳೆಯಾಗಿದೆ, ಚಿತ್ರದುರ್ಗದಲ್ಲಿ ಸ್ವಲ್ಪ ಮಳೆಯಾಗಿದೆ. ಆದ್ದರಿಂದ ಅದರ ವ್ಯವಸ್ಥೆ ಮಾಡಬೇಕಾಗುತ್ತದೆ. ಅದಕ್ಕೆ ಹಣವನ್ನು ಮುಂಚಿತವಾಗಿ ಬಿಡುಗಡೆ ಮಾಡಬೇಕಾಗುತ್ತದೆ. ಆದರ ಸಂಗ್ರಹಣೆ ಆಗಬೇಕಾಗುತ್ತದೆ. ಮಳೆ ಬಂದಮೇಲೆ ಮಾಡುವ ಕೆಲಸ ಅಲ್ಲ ಅದು. ಮಳೆ ಬರುವುದಕ್ಕೆ ಮುಂಚೆ ಕಂಟಿಂಜೆನ್ಸಿ ಪ್ರೋಗ್ರಾಂ ಮಾಡಬೇಕಾಗುತ್ತದೆ. ನೀವು ಹಿರಿಯ ಸಚಿವರಾಗಿರುವುದರಿಂದ ನಿಮಗೇನು ನಾವು ಹೇಳಬೇಕಾದಂಥ ಅವಶ್ಯಕತೆ ಇಲ್ಲ ಎಂದು ನನ್ನ ಭಾವನೆ. ಇವತ್ತು ಇಷ್ಟೊಂದು ಭೀಕರವಾದ ಬರಗಾಲ ಇದ್ದರೂ ಸಹ ಸರ್ಕಾರ ಯಾವ ತರಹದ ರಿಯಾಯಿತಿಯನ್ನು ರಾಜ್ಯದ ರೈತರಿಗೆ ಕೊಡುವುದರಲ್ಲಿ ವಿಫಲವಾಗಿದೆ. ಆದ್ದರಿಂದ ಇವತ್ತು ರಾಜ್ಯದ ರೈತರು ಇವರಿಗೆ ಶಾಪ ಕೊಟ್ಟರೂ ಸಹ ಏನೂ ಆಶ್ಚರ್ಯಪಡಬೇಕಾಗಿಲ್ಲ. ಇವತ್ತು ನಾನು ಹೇಳುತ್ತೇನೆ, ಎಲ್ಲಾ ಹಂತದಲ್ಲಿ ಎಲ್ಲಾ ವರ್ಗದಲ್ಲೂ ಸರ್ಕಾರದ ನಿಷ್ಕ್ರಿಯತೆಯಿಂದ ಇವರು ಈ ಹಂತಕ್ಕೆ ಬಂದುಬಿಟ್ಟಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ಕಳೆದ ಅಧಿವೇಶನದ ಕೊನೇ ದಿನ ಏನು ಹೇಳಿದರೆಂದರೆ, ಗುಲ್ಬರ್ಗ, ಬೀದರ್, ರಾಯಚೂರಿನಲ್ಲಿ ತೊಗರಿ ಬೆಳೆ ಹಾಳಾಗಿದೆ; ಅದಕ್ಕೆ 10 ಕೋಟಿ ರೂಪಾಯಿ ಕೊಡುತ್ತೇವೆ ಎಂದು. ರಾಯಚೂರು, ಧಾರವಾಡ, ಬಳ್ಳಾರಿ ಜಿಲ್ಲೆಯಲ್ಲಿ ನೆರೆ
ಹಾವಳಿಯಿಂದ ಯಾರಿಗೆ ನಷ್ಟವಾಗಿದೆ ಆ ರೈತರಿಗೆ ಸಬ್ಸಿಡೈಸ್ಡ್ ರೇಟ್ ಆಫ್ ಇಂಟರೆಸ್ಟ್‌ನಲ್ಲಿ ಸಾಲ ಕೊಡುತ್ತೇನೆ ಎಂದು ತಾವು ಹೇಳಿದಿರೋ

ಅಥವಾ ಇಲ್ಲವೋ ಹೇಳಿ? ಇದು ರೆವಿನ್ಯೂ ಮಂತ್ರಿಗಳಿಗೆ ಗೊತ್ತಿರಬಹುದು. ಮುಖ್ಯ ಮಂತ್ರಿಗಳು ಇದರ ಸ್ಟೇಟ್‌ಮೆಂಟ್ ಕೊಟ್ಟಿದ್ದರು. ಆದರೆ ಏನು ಮಾಡಿದಿರಿ?
ಮೊನ್ನೆ ಒಂದು ತಿಂಗಳ ಹಿಂದೆ ನಾನು ಗುಲ್ಬರ್ಗಕ್ಕೆ ಹೋಗಿದ್ದಾಗ ಇನ್ನೂ ಹಣ ಬಂದಿಲ್ಲ ಆದರೆ ಆಜ್ಞೆ ಮಾಡಿರುವುದು ಗೊತ್ತಾಗಿದೆ ಎಂದು ಹೇಳಿದರು. ಅದು 10 ಕೋಟಿ ರೂಪಾಯಿ ಅಲ್ಲದಿದ್ದರೆ, ಅದು ಎರಡೂವರೆ, ಮೂರು, 5 ಕೋಟಿ ರೂಪಾಯಿ ಇರಬಹುದು. 10 ಕೋಟಿ ರೂಪಾಯಿಗಳನ್ನು ಏಪ್ರಿಲ್‌ನಲ್ಲಿ ತೊಗರಿ ಬೆಳೆ ಹಾಳಾಗಿರುವುದಕ್ಕೆ ಕೊಡುತ್ತೇವೆ ಎಂದು ಹೇಳಿ, ನೀವು ಜುಲೈ ಕೊನೆಗೆ

ಅಥವಾ ಆಗಸ್ಟ್ ಮೊದಲನೆ ವಾರದಲ್ಲಿ ಆರ್ಡರ್ ಕಳುಹಿಸಿದಿರಿ; ಆದರೆ ಹಣ ಕಳುಹಿಸಿರುವುದು ನಮಗೆ ಗೊತ್ತಿಲ್ಲ. ಎಲ್ಲಿದೆ ನಿಮ್ಮ ಸಬ್ಸಿಡೈಸ್ಡ್ ರೇಟ್ ಆಫ್ ಇಂಟರೆಸ್ಟ್. ಆಯಿತು ನಾವು ಹೇಳಿದ್ದೇವೆ, ಎಲ್ಲಾ ವರ್ಗದ ರೈತರಿಗೆ ಕೊಟ್ಟಿದ್ದಾರೆ ಎಂದು. ಇಲ್ಲ ಸಣ್ಣ ಅತಿಸಣ್ಣ ರೈತರಿಗಾದರೂ ತಾವು ಏನು ಕೊಟ್ಟಿದ್ದೀರಿ? ಅದೂ ಇಲ್ಲವೆಂದರೆ ಯಾವ ರೀತಿಯಿಂದ ತಾವು ಸರ್ಕಾರ ನಡೆಸುತ್ತಿದ್ದೀರಿ? ಏಕೆ ನೀವು ಸ್ಟೇಟ್‌ಮೆಂಟ್ ಮಾಡುತ್ತೀರಿ? ಅದರ ಅವಶ್ಯಕತೆ ಏನಿದೆ? ನಿಮಗೆ ನಿಜವಾಗಿ ರೈತರ ಬಗ್ಗೆ , ಬಡವರ ಬಗ್ಗೆ ಕಳಕಳಿ ಇದ್ದರೆ, ನೀವು ಏನು ಮಾತನಾಡಿದ್ದೀರಿ, ಅದರಂತೆ ನಡೆದುಕೊಳ್ಳಿ. ಎಲ್ಲಾ ಸುಮ್ಮನೆ ಟೊಳ್ಳು ಘೋಷಣೆಗಳು, ಟೊಳ್ಳು ಮಾತುಗಳು. ಎಷ್ಟು ದಿನ ಇದೇ ಪ್ರಕಾರ ಮಾಡಿ ಸರ್ಕಾರ ನಡೆಸುತ್ತೀರಿ? ಇದರಿಂದ ಯಾವ ಸಾಧನೆಯನ್ನೂ ಸರ್ಕಾರ ಮಾಡುವುದಕ್ಕೆ ಆಗುವುದಿಲ್ಲ. ಇದು ಕ್ಷಣಿಕವಾದ ಸುಖಾನೇ ಬರಬಹುದು. ಕ್ಷಣಿಕ ಸುಖ ಬಂದು ಕ್ಷಣಿಕವಾಗಿ ಶಾಸಕರಿಗೆ ಖುಷಿ ಆಗಬಹುದು ಅಥವಾ ಮತ್ತೊಂದು ಆಗಬಹುದೇ ವಿನಃ ಇದರಿಂದ ಓವರ್‌ಆಲ್ ರಿಸಲ್ಟ್ ನಿಮಗೆ ಸಿಗುವುದಕ್ಕೆ ಸಾಧ್ಯವಿಲ್ಲ. ನಿಮ್ಮ ಕಡೆ ಹಣ ಕಡಿಮೆ ಇದ್ದರೆ ಹೇಳಿ, ನಮಗೆ ಕಷ್ಟ ಇದೆ, ತೊಂದರೆ ಇದೆ, ಡಿಫಿಕಲ್ಟೀಸ್ ಇದೆ ಎಂದು ಹೇಳಿ. We have to work in this frame work, Please co-operate ಅಂತ ಹೇಳಿ I can understand. ಹಾಗಾಗಿ ರಿಸೋರ್ಸ್ಸ್ ಮೊಬಿಲೈಸೇಷನ್ ಬಗ್ಗೆ ಯಾವ ಪ್ರಯತ್ನಾನೂ ಈ ಸರ್ಕಾರದಿಂದ ಆಗುತ್ತಿಲ್ಲ. ನಿಮ್ಮಲ್ಲಿ ಯಾರಿಗೂ ಸ್ಟೇಬಿಲಿಟಿ ಇಲ್ಲ, ಅಧಿಕಾರಿಗಳಿಗೂ ಸ್ಟೆಬಿಲಿಟಿ ಇಲ್ಲ. ಯಾವ ಕ್ರಮಾನೂ ಸರ್ಕಾರದಿಂದ ಇಲ್ಲ. ಎಕ್ಸೈಜ್‌ಗೆ ಬಂದಾಗ ಡೀಟೈಲ್ಸ್‌ಗೆ ಬರುತ್ತೇನೆ. ಇವತ್ತು ಇರಿಗೇಷನ್‌ನಲ್ಲಿ ನಮ್ಮ ಮುಖ್ಯಮಂತ್ರಿಯವರು ಮತ್ತು ಉಪಮುಖ್ಯಮಂತ್ರಿಯವರು ಹೆಜ್ಜೆಹೆಜ್ಜೆಗೂ 650 ಕೋಟಿ 750 ಕೋಟಿ ರೂಪಾಯಿ ಕೊಟ್ಟಿದ್ದೇವೆ, ಪ್ಲಾನ್‌ನಲ್ಲಿ ಇಷ್ಟು ಕೊಟ್ಟಿದ್ದೇವೆ, ಎಂದು ಹೇಳಿದರೆ ಹೊರತು ನಿಜವಾಗಿ ಏನು ಕೊಟ್ಟಿದ್ದೀರಿ ಸ್ವಾಮಿ? ನಿಮ್ಮ ಬಜೆಟ್‌ನಲ್ಲಿ 750 ಕೋಟಿ ಬಂದರೆ ಅದನ್ನು ಕೊಟ್ಟಹಾಗೆ ಆಯಿತೇ? ಇನ್ನು ಅಕ್ಷಯದ ಬಗ್ಗೆ ಹೇಳಿದಿರಿ. ಅಕ್ಷಯನೂ ಹೋಯಿತು, 80 ಕೋಟಿ ರೂಪಾಯೀನೂ ಹೋಯಿತು. ಬಂಗಾರಪ್ಪನವರ ಜೊತೆಗೆ ಅಕ್ಷಯ ಹೋಯಿತು. ಇವತ್ತು ತಾವು ಇರಿಗೇಷನ್‌ಗೆ ಏನು ಮಾಡಿದಿರಿ? ಇವತ್ತು ವಿಶ್ವ ಬ್ಯಾಂಕ್‌ನವರು ನಿಮ್ಮ ಪ್ರೋಗ್ರೆಸ್ ಸರಿಯಿಲ್ಲ, ನೀವುಗಳು ಅವರು ಕೊಟ್ಟ ಹಣವನ್ನು ಸರಿಯಾಗಿ ಉಪಯೋಗ ಮಾಡುವುದಿಲ್ಲ ಎಂದು ನಿಮ್ಮ ಎಲ್ಲಾ ಕೆಲಸಗಳನ್ನು ಸ್ಟೇ ಮಾಡಿದರು. ಇದು ನಿಜವೋ ಅಥವಾ ಸುಳ್ಳೋ? ನಿಮ್ಮ ಫೈನಾನ್ಸಿಯಲ್ ಕಂಡೀಷನ್ಸ್ ಸರಿಯಿದ್ದರೆ ಇವತ್ತು ಕೃಷ್ಣ ಬೇಸಿನ್‌ನಲ್ಲಿ, ಕಾವೇರಿ ಬೇಸಿನ್‌ನಲ್ಲಿ ಕೆಲಸ ಏಕೆ ನಡೆಯುತ್ತಾ ಇಲ್ಲ ಸ್ವಾಮಿ? ಕೃಷ್ಣಾಬೇಸಿನ್‌ನಲ್ಲಿ ಜವಾಬ್ದಾರಿಯಿಂದ ಕೆಲಸ ಮಾಡುವಂಥ ಅಧಿಕಾರಿಗಳು ಇಲ್ಲ. ಅದರ ಬಗ್ಗೆ ನಿಮಗೆ ಯಾವ ಚಿಂತನೆಯೂ ಇಲ್ಲ. ಇವತ್ತು ಇರಿಗೇಷನ್ ಪೊಟೆನ್‌ಷಿಯಲ್ 1992-93ರಲ್ಲಿ ಮೇಜರ್ ಅಂಡ್ ಮೀಡಿಯಮ್ ಇರಿಗೇಷನ್ ಇನ್ ಲ್ಯಾಕ್ಸ್ ಹೆಕ್ಟೇರ್ಸ್ ಎಷ್ಟು? 1990-91ರಲ್ಲಿ 13.36 ಲಕ್ಷ ಎಕರೆ ಇದ್ದುದು 1991-92ಕ್ಕೆ It has become 13.79 ಏಕರ್ಸ್. ಅಂದರೆ ನೀವು ಇನ್‌ಕ್ರೀಸ್ ಮಾಡಿದ ಏರಿಯಾ ಹಾರ್ಡ್ಲಿ 43 ಸಾವಿರ ಹೆಕ್ಟೇರ್ಸ್, ಕೇವಲ 43ಸಾವಿರ ಹೆಕ್ಟೇರ್ಸ್ ತದನಂತರ 1992-93ಕ್ಕೆ ಏರಿಯಾ ಈಗ 14.36 ಅಂದರೆ ನೀವು ಮಾಡಿದ್ದು ಏರಿಯಾ 5 ಸಾವಿರ ಎಕರೆ ಅಷ್ಟೇ. ನೀವು ಅಧಿಕಾರಕ್ಕೆ ಬಂದನಂತರ ಇವತ್ತಿನವರೆಗೆ 80ಸಾವಿರ ಹೆಕ್ಟೇರ್ಸ್ ನೀರಾವರಿಯಾಗಿದೆ. ಮೀಡಿಯಮ್ ಮತ್ತು ಮೇಜರ್‌ಗೆ ನಿಮ್ಮ ಹಣ ಎಲ್ಲಿ ಹೋಯಿತು? ಎಷ್ಟು ಹಣವನ್ನು ನೀವು ಬಜೆಟ್‌ನಲ್ಲಿ ಪ್ರೊವೈಡ್ ಮಾಡಿದ್ದೀರಿ, ಅಷ್ಟು

ಇರಿಗೇಷನ್ ಪೊಟೆನ್‌ಷಿಯಲ್ ಏತಕ್ಕೆ ಆಗಲಿಲ್ಲ? ಏನು ಕಾರಣ ಇದಕ್ಕೆ? ಸಣ್ಣ ನೀರಾವರಿಯ ಬಗ್ಗೆ ನಿಮಗೆ ಚಿಂತನೆಯೇ ಇಲ್ಲ; ಅದರ ಬಗ್ಗೆ ಯಾರೂ ಸಹ ಮಾತನಾಡಲಿಕ್ಕೂ ಹೋಗುವುದಿಲ್ಲ ಈ ಸಣ್ಣ ನೀರಾವರಿಯಲ್ಲಿ ಇರಿಗೇಷನ್ ಪೊಟೆನ್‌ಷಿಯಲ್ 1989-90ಕ್ಕೆ ತಾವು ಅಧಿಕಾರಕ್ಕೆ ಬಂದಾಗ 9.3 ಲಕ್ಷ ಹೆಕ್ಟೇರ್ಸ್ ಇತ್ತು. 1990-91ರಲ್ಲಿ It becomes 9.6 ಏಕರ್ಸ್ ಓನ್ಲಿ; Three thousand hectares more. In 91-92 it has become 9.11 lakh hectares, hardly five thousand hectares more. In 1992-93 it has become 9.21 lakh hectares. So totaly from 1989-90 till date, ಸಣ್ಣ ನೀರಾವರಿಯಲ್ಲಿ ಅಚೀವ್‌ಮೆಂಟ್ ನಿಮ್ಮದು 18 ಸಾವಿರ ಎಕರೆ in the last four years. If you are satisfied with this progress I have nothing to say. ಆದರೆ ಇವತ್ತು ನೀರಾವರಿಗೆ ಹೆಚ್ಚು ಹಣವನ್ನು ಕೊಡುತ್ತೇವೆ, ನೀರಾವರಿಗೆ ನಾವು ಏರಿಯಾ ಅಷ್ಟು ಬಿಲ್ಡ್ಅಪ್ ಮಾಡುತ್ತೇವೆಂದು ಹೇಳಿ ಆ ಪ್ರಕಾರವಾಗಿ ನೀವು ಮಾಡದೆಹೋದರೆ ಎರಡುಸಾವಿರ ಏ.ಡಿ ಒಳಗೆ ನೀವು ಬಚಾವತ್ ಅವಾರ್ಡ್ ಪ್ರಕಾರ ಇಂಪ್ಲಿಮೆಂಟ್ ಮಾಡುವುದಕ್ಕಾಗುವುದಿಲ್ಲ. ಕಾವೇರಿ ಬೇಸಿನ್‌ನಲ್ಲಿಯೂ ಕೂಡ ಇಂಪ್ಲಿಮೆಂಟ್ ಮಾಡುವುದಕ್ಕಾಗುವುದಿಲ್ಲ. ಎರಡು ಕಡೆ ನೀವು ರಾಜ್ಯದ ರೈತರ ಬಗ್ಗೆ ದ್ರೋಹ ಮಾಡುತ್ತಿರುವ ಬಗ್ಗೆ ಯಾವ ಸಂದೇಹವೂ, ಯಾವ ಸಂಶಯವೂ ಇಲ್ಲ. ಮಾನ್ಯ ಅಧ್ಯಕ್ಷರೇ, ಹಾಗಾಗಿ ಇವತ್ತು ಮಾನ್ಯ ಉಪಮುಖ್ಯಮಂತ್ರಿಗಳು ಹೇಳುತ್ತಾರೆ. ಹಣ ಎಲ್ಲಿದೆ, ಮಾನ್ಯ ಉಪಮುಖ್ಯಮಂತ್ರಿಗಳಿಗೆ ಸಮಯವೇ ಇಲ್ಲ, ಅವರು ಡೆಲ್ಲಿಟ್ರಿಪ್, ಡಿಸಿಡೆಂಟ್ ಆಕ್ಟಿವಿಟೀಸ್‌ನಲ್ಲಿಯೇ ನಿರತರಾಗಿರುತ್ತಾರೆ. ಇಂಥ ಒಂದು ಮುಖ್ಯವಾದ ಪೋರ್ಟ್‌ಫೋಲಿಯೋ ಇಟ್ಟುಕೊಂಡು ಪವರ್ ಮತ್ತು ಇರಿಗೇಷನ್ ಅಂಥ ಪೋರ್ಟ್‌ಫೋಲಿಯೋ ಇಟ್ಟುಕೊಂಡು ಒಂದು ಸಭೆಯಲ್ಲಿಯೂ ಮಾತನಾಡುವುದಿಲ್ಲ. ಕಾವೇರಿಯ ಬಗ್ಗೆ ಏನೋ ಮಾತನಾಡಿದರು, ಅದು ನಮ್ಮ ಸುದೈವ.. I have got the highest regards for him He is a seasoned politician. ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದು ಆಯಿತಲ್ಲ, ಅಂದರೆ ನೀವು ಏತಕ್ಕೆ ಮಂತ್ರಿಗಳಾಗಿ ಇರಬೇಕು? ನಿಮ್ಮ ಇಲಾಖೆಯ ಎಲ್ಲ ಜವಾಬ್ದಾರಿ ನಿಮ್ಮ ಮೇಲೆ ಇದೆ. ನಿಮ್ಮ ಧೋರಣೆ ಏನು ಇದೆ ಅದನ್ನು ತಾವು ಹೇಳಬೇಕಾಗುತ್ತದೆ. ಅದೇ ಪ್ರಕಾರವಾಗಿ ಇವತ್ತು ಲಾ ಅಂಡ್ ಆರ್ಡರ್ ಬಗ್ಗೆ ಹೇಳುವುದಾದರೆ ಮಾನ್ಯ ಅಧ್ಯಕ್ಷರೇ, ನನಗೆ ಫಿಗರ್ಸ್ ಒದಗಿಸಿಕೊಡಿ ಎಂದು ಕೇಳಿದ್ದೆ ಸರಿಯಾದ ಫಿಗರ್ಸ್ ನನಗೆ ಸಿಗಲಿಲ್ಲ. ಆದರೆ ರಾಬರೀಸ್ ಬಗ್ಗೆ ನಮ್ಮ ಮಾನ್ಯ ಘೋರ್ಪಡೆಯವರು ಹೇಳಬೇಕು. ನಮ್ಮ ಗುಲ್ಬರ್ಗಾದ ಮಂತ್ರಿಗಳು ಹೇಳಬೇಕು. ರೋಡ್ ರಾಬರೀಸ್, ಡಕಾಯಿಟ್ಸ್ ಬಗ್ಗೆ ಲೆಕ್ಕವೇ ಇಲ್ಲ. ಕಮ್ಯುನಲ್ ಟೆನ್‌ಷನ್ಸ್, ಕೋಮುವಾರು ಜಗಳಗಳು ಭಟ್ಕಳದಲ್ಲಿ ಏಪ್ರಿಲ್‌ನಿಂದಲೂ ನಡೆಯುತ್ತಿದೆ. ಇವತ್ತು ಅದನ್ನು ತಮಗೆ ಹತೋಟಿಗೆ ತರಲಿಕ್ಕೆ ಸಾಧ್ಯವಾಗಲಿಲ್ಲ. 16 ಜನರು ಅಲ್ಲಿ ಸತ್ತಿದ್ದಾರೆ. ಅವರಿಗೆ ಏನು ಪರಿಹಾರವನ್ನು ಕೊಟ್ಟಿರಿ?

ಪ್ರಾಪರ್ಟೀಸ್ ಡ್ಯಾಮೇಜ್ ಆಗಿದ್ದಾವೆ. ಅದರ ಬಗ್ಗೆ ತಾವು ಏನೂ ಹೇಳಲಿಲ್ಲ. ಅದೇ ಪ್ರಕಾರವಾಗಿ ನಂಜನಗೂಡ್ ತಾಲ್ಲೂಕ್ ಬದನವಾಳದಲ್ಲಿ, ಉಮ್ಮತ್ತೂರಿನಲ್ಲಿ, ರೇಪ್ಸ್ ಎಷ್ಟಾಯಿತು? ಮೊನ್ನೆ ಮೂರುದಿವಸಗಳ ಹಿಂದೆ ಅರುಣಾಚಲಮ್ ಎಂಬ ಒಬ್ಬ ಯಂಗ್ ಆಫೀಸರ್ ಡಿಸ್ಪೆನ್ಸರಿಯಲ್ಲಿ ಕೆಲಸ ಮಾಡುವಂಥ ಒಬ್ಬ ಸ್ಕೂಟರ್‌ನಲ್ಲಿ ಹೋಗುವಾಗ ಅವನಿಗೆ ಮಲ್ಲೇಶ್ವರಂನಲ್ಲಿ ಆಕ್ಸಿಡೆಂಟ್ ಆಯಿತು. ಆ ಮುದುಕ ಇಂಜ್ಯೂರ್ ಆದ. ಹಾಸ್ಪಿಟಲ್‌ಗೆ ಹೋಗಿ ಅಡ್ಮಿಟ್ ಮಾಡಿ ಏನು

ಹೇಳಿದ? ಸ್ವಲ್ಪ ಆಕ್ಸಿಡೆಂಟ್ ಆಗಿದೆ, ಪೋಲೀಸ್ ಕಂಪ್ಲೇಂಟ್ ಕೊಡುತ್ತೇನೆ, ನನ್ನ ಹೆಸರು ಹೇಳಬೇಡ, ನಾನು ಮಾಡಿದ್ದು ಅಂತ ಎಂದು ಹೇಳಿದ. ನಿನ್ನ ಟ್ರೀಟ್‌ಮೆಂಟ್ ಫ್ರೀ ಕೊಡುತ್ತೇನೆಂದು ಹೇಳಿ, ಸುಳ್ಳು ಮಾತು ಹೇಳಬೇಕು ಎಂದು ಹೇಳಿ ಮಲ್ಲೇಶ್ವರಂ ಪೋಲೀಸ್ ಸ್ಟೇಷನ್‌ಗೆ ಹೋಗಿ ರಿಪೋರ್ಟ್ ಮಾಡಿದ. ಮುದುಕ ರಸ್ತೆಯಲ್ಲಿ ಬಿದ್ದಿದ್ದ ಎಂದು ಹೇಳಿದ. ತಾವು ಆಕ್ಸಿಡೆಂಟ್ ಮಾಡಿದ್ದು ಎಂದು ಹೇಳಲಿಲ್ಲ. He took the Police to the hospital. But that person ಇಂಜ್ಯೂರಿ ಮಾಡಿದ್ದು ಆತನೇ ಎಂದು ಹೇಳಿದ. ಈತನಿಂದಲೇ ನನಗೆ ಆಕ್ಸಿಡೆಂಟ್ ಆಗಿದ್ದು ಎಂದು ಆತ ಹೇಳಿದ .ಆದರೆ ಇಲ್ಲ ಈ ಮುದುಕನೇ ಸುಳ್ಳು ಹೇಳಿದ ಎಂದು ಹೇಳಿ ಮಲ್ಲೇಶ್ವರಂ ಪೋಲೀಸ್ ಸ್ಟೇಷನ್‌ಗೆ ತಂದು ಹೊಡೆದರು. ಆತ digital company executive ; ಆತನ ಪ್ರಾಣ ಹೋಯಿತು. ಯಾರು ಇದಕ್ಕೆ ಜವಾಬ್ದಾರರು? ಲಾಕ್ ಅಪ್ ಡೆತ್ಸ್ ಎಷ್ಟು ಆಗಿದೆ? ಲಾಕ್ ಅಪ್ ಡೆತ್ಸ್ ಎಂದರೆ ಸಸ್ಪೆನ್‌ಷನ್ ಎಂದು ಹೇಳುತ್ತೀರಿ. ಇದರಿಂದ ಏನಾದರು ಸಾಧನೆ ಮಾಡುವುದಕ್ಕೆ ಸಾಧ್ಯವಾಗುತ್ತದೆಯೇ? ಇವತ್ತು ರೇಪ್ಸ್, ಡಕಾಯಿಟ್ಸ್, ಥೆಫ್ಟ್ಸ್ ಎಷ್ಟು? ಬೆಂಗಳೂರು ಹೊರವಲಯದಲ್ಲಿ ಲೆಕ್ಕವಿಲ್ಲದಷ್ಟು; ಗುಲ್ಬರ್ಗ, ಬಳ್ಳಾರಿಯಲ್ಲಿ ರಸ್ತೆರಸ್ತೆಯಲ್ಲಿ ಲೂಟಿ. ಯಾವ ಜನರಿಗೂ ಈ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಸಾಧ್ಯವಾಗುತ್ತಾ ಇಲ್ಲ. ಇದಕ್ಕೆ ಮುಖ್ಯ ಕಾರಣ ಎಂದರೆ, ಪೋಲೀಸ್ ಡಿಪಾರ್ಟ್‌ಮೆಂಟ್ ಡೀಮಾರಲೈಸ್ ಆಗಿದೆ. ಇವತ್ತು 4-5 ಬಾರಿ ಬದಲಾವಣೆಗಳು. ಎಲ್ಲಿ ಯಾರು ನಿಜವಾಗಿ ಅಪರಾಧ ಮಾಡುತ್ತಾರೋ ಅವರಿಗೆ ನೀವು ಏನೂ ಮಾಡುವುದಿಲ್ಲ. ಭಟ್ಕಳ್ ಇನ್‌ಸಿಡೆನ್ಸ್ ಬಗ್ಗೆ ಮುಖ್ಯಮಂತ್ರಿಗಳಿಗೆ ಹೇಳಿದೆ. ಡಿಜಿಪಿ ಅವರಿಗೆ ಹೇಳಿದೆ. ಒಬ್ಬ ಆಫೀಸರ್ ನೂರಾರು ಜನರ ಮೇಲೆ ಕ್ರಮ ತೆಗೆದುಕೊಳ್ಳುತ್ತಾನೆಂದು ಹೇಳಿದೆ. ಅವನ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ಹೇಳಿದೆ. ಏನೂ ಕ್ರಮ ಇಲ್ಲ. ಅವನಿಗೆ ಪ್ರಮೋಷನ್ ಈ ಪ್ರಕಾರ ತಾವು ಸರ್ಕಾರ ನಡೆಸುವ ಇಚ್ಛೆ ಇದ್ದರೆ ಅಧಿಕಾರದಲ್ಲಿ ಇರುವುದಕ್ಕೆ ನಿಮಗೆ ಏನು ಅರ್ಹತೆ ಇದೆ? ನಾವು ಹಲವಾರು ಉದಾಹರಣೆಗಳನ್ನು ಕೊಡಬಹುದು. ಅನ್‌ಫಾರ್ಚುನೇಟ್ ಎಂದರೆ ನಾನು ಫಿಗರ್ಸ್‌ಗೆ ಟ್ರೈ ಮಾಡಿದೆ, ಸಿಗಲಿಲ್ಲ. ಸರ್ಕಾರದಿಂದ ಬಂದಿಲ್ಲ. ಹೀಗಾಗಿ ಒಟ್ಟಾರೆ ರಾಬರಿ ಬಗ್ಗೆ ಆಗಲೀ, ಡಕಾಯಿತಿ ಬಗ್ಗೆ ಆಗಲೀ, ರೇಪ್ ಬಗ್ಗೆ ಆಗಲೀ ಫಿಗರ್ಸ್ ಕೊಡುವುದಕ್ಕೆ ನನಗೆ ಸಾಧ್ಯವಾಗುತ್ತಿಲ್ಲ. but they are on increase. ಇವತ್ತು ಲಾಕಪ್ ಡೆತ್ಸ್ ಜೊತೆಗೆ ಬೇರೆ ಎಲ್ಲಾ ರೀತಿಯಿಂದ ಸರ್ಕಾರದಿಂದ ಅತ್ಯಾಚಾರ ನಡೆಯುತ್ತಿದೆ. ಹಾಗಿದ್ದರೆ ನಾನು ಕೇಳುತ್ತೇನೆ; ಇವತ್ತು ಏನು ಸಾಧನೆ ತಾವು ಮಾಡುವುದಕ್ಕೆ ಹೊರಟಿದ್ದೀರಿ? ಈಗಾಗಲೇ ತಮ್ಮ ಜಗಳದ ಬಗ್ಗೆ ಫ್ಯಾಮಿಲಿ ಅಫೇರ್ಸ್ ಎಂದು ಹೇಳಿದ್ದೀರಿ; ಫ್ಯಾಮಿಲಿ ಅಫೇರ್ಸ್ ಏನು? ಮುಖ್ಯಮಂತ್ರಿಗಳಿಗೆ ನೇರವಾಗಿ ಹೊಡೆಯುವುದಕ್ಕೆ ಬಂದರೂ ಫ್ಯಾಮಿಲಿ ಅಫೇರ್ಸ್. ಹೊಡೆದರು ಎಂದು ನಾನು ಹೇಳಲ್ಲ. ಪತ್ರಿಕೆಯಲ್ಲಿ ಫೋಟೋ ಹಾಕಿ ಹೇಳಿದ್ದಾರೆ. ಅದರಲ್ಲಿ ನೋಡಿದರೆ ಮುಖ್ಯಮಂತ್ರಿಗಳು ಹೆದರಿಬಿಟ್ಟಿದ್ದಾರೆ. ಪತ್ರಿಕೆಯಲ್ಲಿ ನೋಡಿ ನಾನು ಹೇಳುತ್ತಿದ್ದೇನೆ.

ಶ್ರೀ ಎಂ. ಮಹದೇವ್:- ದೇಶಪಾಂಡೆಯವರೇ, ಪತ್ರಿಕೆಯಲ್ಲಿ ಹೊಡೆದರು ಎಂದು ಹೇಳುವುದನ್ನು ತಾವು ನಂಬುತ್ತೀರಾ?

ಶ್ರೀ ಆರ್.ವಿ.ದೇಶಪಾಂಡೆ:- ಪತ್ರಿಕೆಯಲ್ಲಿ ಬಂದಿದ್ದು ನಂಬುತ್ತೀರಾ ಎಂದರೆ ಹೇಗೆ? ಹಾಗಿದ್ದರೆ ನಾಳೆ ಪತ್ರಿಕೆಗಳಲ್ಲಿ ಮಹದೇವ್ ಅವರಿಗೆ ಹೊಡೆದರು ಎಂದು ಬಂದರೆ ಅದನ್ನು ನಾನು

ನಂಬುವುದಿಲ್ಲ ಬಿಡಿ. ಪತ್ರಿಕೆಗಳೂ ಒಂದು ಮಾಧ್ಯಮ. ತಾವು ಹೇಳುವಹಾಗಿದ್ದರೆ ಅವುಗಳ ಅವಶ್ಯಕತೆಯೇ ಇಲ್ಲ ಎಂದು ಬಿಡಬಹುದು.

ಶ್ರೀ ಎಂ.ಮಹದೇವ್:- ಪತ್ರಿಕೆಗಳಲ್ಲಿ ಹೊಡೆದರು ಎಂದು ಹೇಳಿಲ್ಲ. ಅಲ್ಲಿ ಚಿತ್ರ ಕೊಟ್ಟಿದ್ದಾರೆ. ಆದರ ಮೇಲೆ ತಾವು ಊಹೆ ಮಾಡುತ್ತೀದ್ದೀರಿ.

ಶ್ರೀ ಆರ್. ವಿ.ದೇಶಪಾಂಡೆ:- ಅದು ಒಳ್ಳೆಯ ಚಿತ್ರ ಇದೆ. ಬಹಳ ಅಭಿಮಾನದಿಂದ ನೋಡಬಹುದು.

ಶ್ರೀ ಬಿ.ಎಸ್.ಯಡಿಯೂರಪ್ಪ:- ಮಹದೇವ್ ಅವರೇ, ಆ ಕಾರ್ಯಕ್ರಮವನ್ನು ಯಾವತ್ತು ಇಟ್ಟುಕೊಂಡಿದ್ದೀರಿ?

ಶ್ರೀ ಆರ್.ವಿ.ದೇಶಪಾಂಡೆ:- ಇವತ್ತು ಲಾ ಅಂಡ್ ಆರ್ಡರ್ ಕೊಲ್ಯಾಪ್ಸ್ ಆಗಿದೆ. ಇವತ್ತು ಕಾಂಗ್ರೆಸ್ ಪಕ್ಷದ ಶಾಸಕರಲ್ಲಿ ಈ ಪ್ರಕಾರ ಜಗಳ ಆಗಿದೆ; ನಾವೂ ಅಧಿಕಾರದಲ್ಲಿ ಇದ್ದೆವು. ನಾವು ಅಧಿಕಾರ ಕಳೆದುಕೊಂಡು ಇಲ್ಲಿ ಬಂದು ಕುಳಿತಿದ್ದೇವೆ. ನಾವು ತಪ್ಪು ಮಾಡಿದ್ದೇವೆ. ನಮಗೆ ಪ್ರಾಯಶ್ಚಿತ್ತ ಆಗಿದೆ. ಹಾಗಾಗಿ ಇಲ್ಲಿ ಕೂತಿದ್ದೇವೆ. ಒಳ್ಳೆಯ ಅಭಿವೃದ್ಧಿ ಕೆಲಸ ಮಾಡಿ, ಎಲ್ಲಾ ರೀತಿಯಿಂದ ಕೆಲಸ ಮಾಡಿ, ಜಗಳ ಮಾಡಿ ಜನರ ವಿಶ್ವಾಸ ಕಳೆದುಕೊಂಡು ಇಲ್ಲಿ ಬಂದಿದ್ದೇವೆ. ಪಕ್ಷೇತರರೂ ಸೇರಿದಂತೆ ನಾವೂ 145 ಜನ ಆಗ ಇದ್ದೆವು. ಇವತ್ತು ನೀವು ಜಗಳ ಅಲ್ಲ, ಕೈಯಾಗ, ಕಾಲಾಗ ತೆಗೆದುಕೊಂಡು ಹೊಡೆಯುವುದಕ್ಕೆ ಶುರು ಮಾಡಿದಿರಿ. ನಿಮ್ಮದು ಏನು ಉಳಿದಿದೆ?

ಶ್ರೀ ವಾಟಾಳ್‌ನಾಗರಾಜ್:- ಯಾವುದು ಕೈ, ಯಾವುದು ಕಾಲು? ಭಟ್ಕಳದ ಭಾಷೆ ಚೆನ್ನಾಗಿರುತ್ತದೆ. ಕೈಲಿರೋದು ಏನು, ಕಾಲಲ್ಲಿ ಇರೋದು ಏನು? ಯಾವ್ಯಾವುದು ಏನೇನು ಎಂದು ಹೇಳಿ.

ಶ್ರೀ ಆರ್.ವಿ.ದೇಶಪಾಂಡೆ:- ಅದನ್ನು ಹೇಳಿದರೆ ಅನ್‌ಪಾರ್ಲಿಮೆಂಟರಿ ಆಗುತ್ತದೆ. ಅದನ್ನು ಹೇಳೋದು ಬೇಡ.

ಶ್ರೀ ವಾಟಾಳ್‌ನಾಗರಾಜ್:- ಸಂಸದೀಯ, ಅಸಂಸದೀಯ ಪದಗಳು ಯಾವುದು ಎಂದು ಆಮೇಲೆ ನಿರ್ಧಾರ ಮಾಡೋಣ. ತಾವು ಹೇಳಿ.

ಶ್ರೀ ಆರ್. ವಿ.ದೇಶಪಾಂಡೆ:- ಹೀಗಾಗಿ ಎಲ್ಲಾ ರೀತಿಯಲ್ಲಿ ಉಪಯೋಗ ಮಾಡಿಕೊಂಡು you are fighting like cats and dogs. It is a shameless thing. With all respect I am saying don't mistake me, you have become expunged as or tired by the chair. ಮನಸ್ಸಿಗೆ ಬಂದ ಹಾಗೆ ಮಾಡುವುದು ಅಲ್ಲ. ಜನರು ನಮ್ಮನ್ನು ಆರಿಸಿಕಳುಹಿಸಿದ್ದಾರೆ. ಶಾಸಕರ ಕೈಯಲ್ಲಿ ಮಂತ್ರಿಗಳ ಕೈಯಲ್ಲಿ, ಮುಖ್ಯಮಂತ್ರಿಗಳ ಕೈಯಲ್ಲಿ ಅಧಿಕಾರ ಕೊಟ್ಟಿದ್ದಾರೆಂದು ಮನಸ್ಸಿಗೆ ಬಂದ ಹಾಗೆ ಸರ್ಕಾರವನ್ನು ನಡೆಸುವುದಕ್ಕಾಗುತ್ತದೆಯೇ? ಮುಖ್ಯಮಂತ್ರಿ ಬೇಕಾದವರನ್ನು ಮಂತ್ರಿಗಳನ್ನಾಗಿ ಮಾಡಿಕೊಳ್ಳಿ, ಇಲ್ಲವೆ ತೆಗೆಯಿರಿ. That is your concern, that is your party's concern. We have no right to talk about that. But there are some norms.

ಶ್ರೀ ಎಂ. ಮಹದೇವ್ : ಇದು ಜವಾಬ್ದಾರಿ ಶಾಸಕರು ಉಪಯೋಗಿಸುವ ಪದವೆ? These words are expunged as ordered by the speaker ಎಂಬ ಪದವನ್ನು ಉಪಯೋಗಿಸಬಹುದೆ? ನಾವು ಬೇಡ ಅನ್ನುವುದಿಲ್ಲ. What is the meaning of it? ಅವಮಾನ ಮಾಡುವ ಹಾಗೆ ದಯವಿಟ್ಟು ಮಾತನಾಡಬೇಡಿ. ತಪ್ಪನ್ನು ಎತ್ತಿಹಿಡಿಯಿರಿ; ಆದರೆ ಇಂಥ ಪದಗಳನ್ನು ಉಪಯೋಗಿಸಿ ಅವಮಾನ ಮಾಡಬೇಡಿ.

ಶ್ರೀ ಆರ್.ವಿ.ದೇಶಪಾಂಡೆ: ಇದು ಕುಟುಂಬದ ಸಮಸ್ಯೆಯೆಂದು ಮುಖ್ಯಮಂತ್ರಿಯವರು ಪದೇಪದೇ ಹೇಳಿದರು, ಮತ್ತು ಮೊನ್ನೆ ಮುಖ್ಯಮಂತ್ರಿಯವರ ಸ್ಟೇಟ್‌ಮೆಂಟ್ ಏನೆಂದರೆ, ನಾನು ರಾಜಶೇಖರಮೂರ್ತಿ ಮತ್ತು ಕೃಷ್ಣ ಅವರ ಜೊತೆ ಮಾತನಾಡುತ್ತೇನೆ ಎಂದು. ಕೃಷ್ಣ ಅವರು ಏನು ಮಾತನಾಡುವದು ಇದೆ ಎಂದು ಡೆಲ್ಲಿಯಿಂದ ಹೇಳುತ್ತಾರೆ. ನನ್ನ ಕಡೆ ಈಗಾಗಲೇ ಹೇಳಿದ್ದಾರೆ, ಕೌನ್ಸಿಲ್ ಆಫ್ ಮಿನಿಸ್ಟರ್ಸ್ ಜೊತೆ ಏನೂ ಮಾತು ಇಲ್ಲವೆಂದು. ರಾಜಶೇಖರಮೂರ್ತಿಯವರು ಹೇಳಿದ್ದಾರೆ, ನನ್ನ ಕ್ಯಾರೆಕ್ಟರ್ ಆಫ್ ಅಸಾಸಿನೇಷನ್ ಮಾಡಿದ್ದಾರೆ ಎಂದು. ಅವರ ಕೈಗಳನ್ನು ಸ್ಟ್ರೆಂಥನ್ ಮಾಡಿ ಎಂದು ಹೇಳಿದ್ದಾರೆ. ನಾವು ಏತಕ್ಕೆ ಸ್ಟ್ರೆಂಥನ್ ಮಾಡಬೇಕು? ನಾನು ಹೇಳಿದೆ, ಇದು ಸಂಸಾರದ ಜಗಳ ಇದ್ದರೆ ನಾಲ್ಕು ಬಡಿಯಿರಿ. ಆದರೆ ಬಹಿರಂಗವಾಗಿ ಮಾಡಿದಾಗ ಇದರ ಉಪಯೋಗ ತೆಗೆದುಕೊಳ್ಳಬೇಕಾಗುತ್ತದೆಂದು ನಾವು ಹೇಳಬೇಕಾಗುತ್ತದೆ. ನೀವು ನನ್ನ ಮನೆ ಮುಂದೆ ಡೆಮಾನ್‌ಸ್ಟ್ರೇಷನ್ ಮಾಡಿದಿರಿ, ನಿಂದೆ ಮಾಡಿದಿರಿ, ಹಿಂಸೆ ಮಾಡಿದಿರಿ, ಪೋಸ್ಟರ್ಸ್ ಹಾಕಿದಿರಿ. ಆಗ how can I strengthen your hands ಎಂದು ತಾವು ಕೇಳಿದಿರಿ. ಆ ಪ್ರಕಾರ ಫ್ಯಾಮಿಲಿ ಜಗಳವಾದರೆ ಎಲ್ಲಿಗೆ ಹೋಗಿ ಮುಟ್ಟುತ್ತೀರಿ? ಇದು ಫ್ಯಾಮಿಲಿ ಜಗಳ ಅಲ್ಲ. ಇದೆಲ್ಲ ನಿಮ್ಮ ಫ್ಯಾಮಿಲಿ ಜಗಳ ಇದ್ದರೆ ನಾನು ಹೇಳುತ್ತೇನೆ, ಇದೆಲ್ಲ ನಿಮ್ಮ ಕೈಮೀರಿ ಹೋಗುತ್ತದೆ. ಹಾಗಾಗಿ ಇವತ್ತು ಸರ್ಕಾರದಲ್ಲಿ ಯಾವ ಸ್ಥಿರತೆ ಇಲ್ಲ, ರೈತರು, ಶಿಕ್ಷಕರು, ವಿದ್ಯಾರ್ಥಿಗಳು, ಕೂಲಿಗಾರರು, ಬಡಜನರು ಎಲ್ಲರೂ ಕಂಗಾಲಾಗಿದ್ದಾರೆ. ಎಲ್ಲರ ಶಾಪಕ್ಕೆ ತಾವು ಗುರಿಯಾಗಿದ್ದೀರಿ. ನಾನು ಈಗಾಗಲೇ ಹೇಳಿದ್ದೇನೆ, ಅಭಿವೃದ್ಧಿ ಕಾರ್ಯ ಇಲ್ಲ, ಡೆವಲಪ್‌ಮೆಂಟ್ಸ್ ಇಲ್ಲ, ಯಾವ ಕೆಲಸವೂ ಆಗಿಲ್ಲ. ಏನೇನೂ ಇಲ್ಲ. ಕೇವಲ ಪೊಳ್ಳು ಘೋಷಣೆ, ಜಗಳ ಅಷ್ಟೇ ಕೇಳುತ್ತಿದೆಯೇ ಹೊರತು ಇವತ್ತು ಸರ್ಕಾರದಿಂದ ಜನರಿಗೆ ಯಾವ ಪರಿಹಾರವೂ ಸಿಗುತ್ತಿಲ್ಲ. ಇವತ್ತು ನಾವು ನಮ್ಮ ಕಾಂಗ್ರೆ ಪಕ್ಷದ ಶಾಸಕರಿಗೆ ಅವಕಾಶ ಮಾಡಿಕೊಟ್ಟಿದ್ದೇವೆ. ತಾವು ನಿಜವಾಗಿ ಇವತ್ತು ಕೆಲವು ಆಪಾದನೆಗಳನ್ನು ಮುಖ್ಯಮಂತ್ರಿಯವರ ಮೇಲೆ ಮಾಡುತ್ತಿದ್ದೀರಿ. ನಾನು ಎಕ್ಸೈಜ್ ಇತ್ಯಾದಿಗೆ ಆಮೇಲೆ ಬರುತ್ತೇನೆ. ನಮ್ಮ ಆಪಾದನೆಯಲ್ಲಿ ನಿಮಗೆ ವಿಶ್ವಾಸ ಇದ್ದರೆ ನಮ್ಮ ನೋ-ಕಾನ್‌ಫಿಡೆನ್ಸ್ ಮೋಷನ್ನಿಗೆ ಸಪೋರ್ಟ್ ಮಾಡಬೇಕಾಗುತ್ತದೆ. ಇದನ್ನು ಮಾಡಲಿಲ್ಲವೆಂದರೆ you have become cowards ಹೇಡಿಗಳು ಎಂದು ಹೇಳಬೇಕಾಗುತ್ತದೆ. ನಿಮಗೆ ಧೈರ್ಯ ಇದ್ದರೆ ನೀವು ನಮ್ಮ ಬೆಂಬಲಕ್ಕೆ ಬರಬೇಕಾಗುತ್ತದೆ.ನಿಮ್ಮ ಮೆಮೋರ್‍ಯಾಂಡಂಗೆ ಬರುತ್ತೇನೆ. ಹಾಗಾಗಿ ನಿಮಗೆ ಈ ಒಂದು ಒಳ್ಳೆಯ ಅವಕಾಶ ಮಾಡಿಕೊಟ್ಟಿದ್ದೇವೆ.

ಶ್ರೀ ಎಂ.ಮಹದೇವ್:- ನೀವು ಹೇಳಿದ ಹಾಗೆಲ್ಲ ಕೇಳುವುದಕ್ಕಲ್ಲ ನಾವು ಇರುವುದು. ನಮಗೂ ನೀತಿ ಸಂಹಿತೆ ಇದೆ, ಶಿಸ್ತು ಇದೆ. ನಮ್ಮನ್ನು ನೀವು ಅಡ್ಡದಾರಿಗೆ ಎಳೆದು ಕವರ್ಡ್ಸ್ ಎಂದು ಹೇಳಬೇಡಿ.

(ಗೊಂದಲ)

ಶ್ರೀ ಆರ್.ವಿ.ದೇಶಪಾಂಡೆ:- ಇವತ್ತು ಏನಾಗುತ್ತದೆಂದರೆ ತಾವು ಹೇಳುತ್ತೀದ್ದೀರಿ ನೂರು ಜನ ಡಿಸಿಡೆಂಟ್ಸ್ ಆಗಿದ್ದಾರೆ ಎಂದು. ನೀವು ನೂರು ಆದರೆ ನಾವು 30 ಜನ ಇದ್ದೇವೆ. ಹಾಗಾಗಿ ಕೇಳಿದೆ, ನೀವು ಏತಕ್ಕೆ ಕಷ್ಟಪಡುತ್ತೀರಿ ಎಂದು. ನೀವು ನಮಗೆ ಬೆಂಬಲ ಕೊಟ್ಟರೆ ಇವತ್ತು ನೋ ಕಾನ್‌ಫಿಡೆನ್ಸ್ ಮೋಷನ್ ಪಾಸ್ ಆಗುತ್ತದೆ. ಹೈ ಕಮಾಂಡ್ ಕಡೆ ನೋಡಬೇಡಿ. ನಾವು ನೀವು ಒಂದಾಗಿ ಹೊಡೆಯೋಣ ಗುರಿ. ಹೈ ಕಮಾಂಡ್ ಏತಕ್ಕೆ ಬರಬೇಕು, ಅಬ್ಸರ್ವರ್ಸ್ ಏತಕ್ಕೆ ಬರಬೇಕು? ಯಾವುದೂ ಬೇಡ, ಅವರು ಬರುವುದೂ ಬೇಡ, ಹೋಗುವುದೂ ಬೇಡ.

ಶ್ರೀ ಎಂ.ಮಹದೇವ್:- ನೀವು ಒಟ್ಟಿಗೆ ಮನೆ ಹೋಗುವ ಹಾಗೆ ಕೇಳುತ್ತಿದ್ದೀರಿ. ಈ ಸಭೆ ಡಿಸಾಲ್ವ್ ಆಗಬೇಕೆಂದು ಕೇಳುತ್ತಿದ್ದೀರಿ.

ಡಾ ಎನ್.ಬಿ.ನಂಜಪ್ಪ:- ಬೆಂದ ಮನೆಯಲ್ಲಿ ಹಿರಿದದ್ದೇ ಲಾಭ ಎಂದು ಗಾದೆ ಇದೆ. ಹಿಂದೆ ಚಡ್ಡಿ , ಜುಬ್ಬ, ಅಂಗಿ ಹರಿದು ಹಾಕಿದ್ದೆಲ್ಲ ಮರೆತು ಈಗ ಬರಗಾಲ ಅದು ಇದು ಎಂದು ಹೇಳಿ ಈಗ ಬೆಂದ ಮನೆಯಲ್ಲಿ ತಾವು ಇರಬೇಕೆಂದು ಮಾಡಿದ್ದೀರಿ. ಆದರೆ ಅದು ಸಾಧ್ಯವಾಗದ ಕೆಲಸ.

ಶ್ರೀ ವಾಟಾಳ್ ನಾಗರಾಜ್:- ಅವರೇ ಒಪ್ಪಿಕೊಂಡ ಪ್ರಕಾರ ಮನೆ ಬೆಂದು ಹೋಗಿದೆ ಎಂದು ಆಯಿತು.

ಶ್ರೀ ಆರ್.ವಿ.ದೇಶಪಾಂಡೆ:- ಮಾನ್ಯ ನಂಜಪ್ಪನವರೇ, ನೀವು ಏನು ಲಾಭ ತೆಗೆದು ಕೊಳ್ಳಬೇಕೋ ತೆಗೆದುಕೊಂಡು ಬಿಡಿ. ನೀವು ನಮಗೆ ಬಹಳ ಸಮೀಪ ಬಂದಿದ್ದೀರಿ. ನಿಮಗೆ ಒಳ್ಳೆಯ ಅವಕಾಶವಿದೆ. ಮತ್ತೊಂದು ಎರಡು ಮೂರು ವಿಷಯಗಳು ಬಹಳ ಮುಖ್ಯವಾದವು ಇವೆ. ನಾನು ಕೊನೆಯದಾಗಿ ಬರುತ್ತೇನೆ. ಸಾಧನೆಯ ಸಮಾವೇಶ, ನರಸಿಂಹರಾಯರ ಸಾಧನೆ. ನರಸಿಂಹರಾಯರು ಅಲ್ಲಿ ಮಾಡಿದ ಸಾಧನೆಯನ್ನು ನೀವು ಇಲ್ಲಿ ಮಾಡಿದ್ದೀರಿ; ಏನು ಸಾಧನೆ? ನಿಮ್ಮ ಸರ್ಕಾರದ ಬಗ್ಗೆ ನಾನು ಸಾಕಷ್ಟು ಹೇಳಿದ್ದೇನೆ. ಇನ್ನು ಕೆಲವು ವಿಚಾರಗಳನ್ನು ಹೇಳಬೇಕಾಗಿದೆ. ಅದಕ್ಕೆ ಆಮೇಲೆ ಬರುತ್ತೇನೆ. ನರಸಿಂಹರಾಯರ ಸಾಧನೆಯೇನು ಎಂಬುದು ನಮಗೆ ಗೊತ್ತಿಲ್ಲ. ಆದರೆ ಸಾಧನೆಯ ಬಗ್ಗೆ ಸಂಪೂರ್ಣ ವಿರೋಧವಿದ್ದರೂ ಸಹ ನಿಮ್ಮ ಸಚಿವಸಂಪುಟದ ಮಂತ್ರಿಗಳಾದ ಭೀಮಣ್ಣ ಖಂಡ್ರೆಯವರು ಬೀದರ್‌ನಲ್ಲಿ ಏನು ಮಾಡುತ್ತಾರೆ? ಸಾಧನೆಯ ಸಮಾವೇಶಕ್ಕೆ ಪಾಂಪ್ಲೆಟ್ಸ್ ಹೊರಡಿಸುತ್ತಾರೆ, ಪೋಸ್ಟರುಗಳನ್ನು ಅಂಟಿಸುತ್ತಾರೆ. ಅಲ್ಲಿ ಏನು ಮಾಡುತ್ತಾರೆಂದರೆ ಪಾಂಪ್ಲೆಟ್ ಮೇಲೆ ಕಾಂಗ್ರೆಸ್(ಐ)ಸಿಂಬಲ್ ಜೊತೆ ನ್ಯಾಷನಲ್ ಫ್ಲಾಗನ್ನು ಉಪಯೋಗ ಮಾಡುತ್ತಾರೆ. ಅದೂ ಇಲ್ಲಿದೆ, ಅದನ್ನು ತೋರಿಸುತ್ತೇನೆ. ಮರಾಠಿ ಮತ್ತು ಕನ್ನಡ ಭಾಷೆಯಲ್ಲಿ ಪಾಂಪ್ಲೆಟ್ಸ್ ಹಾಗೂ ಹ್ಯಾಂಡ್‌ಬಿಲ್ಸ್ ತಯಾರಿಸಿ ಅದರಲ್ಲಿ ನ್ಯಾಷನಲ್ ಫ್ಲಾಗ್ ಯೂಸ್ ಮಾಡಿದ್ದಾರೆ. A criminal case is filed against Mr.Khandre. Police have registered a case. ಈ ಪ್ರಕರಣದಲ್ಲಿ ಏನು ಮಾಡಿದೆ ನಿಮ್ಮ ಸರ್ಕಾರ? ಏನು ಕ್ರಮ ತೆಗೆದುಕೊಂಡಿದ್ದೀರಿ? It is a clear offence. Criminal case has been filed against him in P S Case No.281/93 under Sections 5, 8 and 12 of the National Flag Code India punished under the provisions of Emblems and Names. (prevention of Improper Use) Act, 1950 and Prevention of Insults to National Honour Act , 1971, ಇದಕ್ಕೆ ನೀವು ಏನು ಮಾಡಿದ್ದೀರಿ?

ಏನೂ ಮಾಡಲಿಲ್ಲ. ನ್ಯಾಷನಲ್ ಫ್ಲಾಗ್ ಸಿಂಬಲ್ ಯೂಸ್ ಮಾಡಿದ ಬಗ್ಗೆ ಮಂತ್ರಿಗಳ ಮೇಲೆ ಕ್ರಿಮಿನಲ್ ಕೇಸ್ ಹಾಕಲಾಗಿದೆ. But still he continue in the Ministry; ಅವರು ಇನ್ನೂ ಮಿನಿಸ್ಟರ್ ಆಗಿ ಕಂಟಿನ್ಯೂ ಆಗುತ್ತಿದ್ದಾರೆ. ಅದರ ಬಗ್ಗೆ ನಿಮಗೆ ಏನೂ ಚಿಂತನೆಯಿಲ್ಲ; ನ್ಯಾಷನಲ್ ಫ್ಲಾಗ್ ಮಿಸ್‌ಯೂಸ್ ಮಾಡಿದ್ದಾರೆ. ಆ ಪಾಂಪ್ಲೆಟ್‌ಗಳು ಬೀದಿಯಲ್ಲಿ ಬಿದ್ದು ಜನಗಳು ಅದರ ಮೇಲೆ ಓಡಾಡಿದ್ದಾರೆ. ರಸ್ತೆಯ ಮೇಲೆ ಹ್ಯಾಂಡ್‌ಬಿಲ್ಸ್‌ಗಳು ಬಿದ್ದಿವೆ. ಕಟ್ಟಡಗಳ ಮೇಲೆ ಅಂಟಿಸಿದ್ದಾರೆ. ಕೆಳಗೆ ಬಿದ್ದಿರುವ ಕರಪತ್ರಗಳನ್ನು ಜನ ತುಳಿದಿದ್ದಾರೆ. ನ್ಯಾಷನಲ್ ಫ್ಲಾಗ್‌ಗೆ ನೀವು ಕೊಟ್ಟ ಮರ್ಯಾದೆ ಇದೇನು? ಧ್ವಜಕ್ಕೆ ಅಪಮಾನವಾದರೆ ನಿಮ್ಮದು ಯಾವುದೇ ಕ್ರಮವಿಲ್ಲ. ಈ ತರಹದ ಮಂತ್ರಿಗಳು ನಿಮ್ಮ ಕ್ಯಾಬಿನೆಟ್‌ನಲ್ಲಿದ್ದಾರೆ. ಇಂತಹ ಯಾವ ಆಪಾದನೆಯನ್ನು ನಿಮ್ಮ ಗಮನಕ್ಕೆ ತಂದರೂ ಅವರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ನಿಮ್ಮಲ್ಲಿ ಶಕ್ತಿಯಿಲ್ಲ.

ಇನ್ನು ಕೆಇಬಿ ಬಗ್ಗೆ ಹೇಳುವುದಾದರೆ, ಅಲ್ಲಿ ಟೋಟಲ್ ವೈಟ್ ಎಲಿಫೆಂಟ್, ರ್ಯಾಮ್‌ಫೆಂಟ್ ಕರಪ್ಷನ್ಸ್, ಇನ್ ಎಫಿಶಿಯೆನ್ಸಿ, ಅದರ ಭಾರ ಸಾಮಾನ್ಯ ಜನರ ಮೇಲೆ. ಮೂರು ಬಾರಿ ತಾವು ಅಧಿಕಾರದಲ್ಲಿ ಬಂದಿದ್ದೀರಿ ಹೇಗೆ ಮಾಡಿದ್ದೀರಿ? 1990ರ ಸೆಪ್ಟೆಂಬರ್, 1992ರ ಜುಲೈ ಮತ್ತೆ ಈ ವರ್ಷ ಆಗಸ್ಟ್ 1993, ಏನು ಅಧಿಕಾರವಿದೆ ನಿಮಗೆ? ಯಾಕೆ ಹೆಚ್ಚು ಮಾಡಿದ್ದೀರಿ? ಕೆಇಬಿಯ ಇನ್-ಎಫಿಶಿಯೆನ್ಸಿಗೆ ಸಪೋರ್ಟ್ ಮಾಡಲಿಕ್ಕೆ ಕೆಇಬಿಯ ರ್ಯಾಮ್‌ಪೆಂಟ್ ಕರಪ್ಷನ್ಸ್‌ಗೆ ಪ್ರೊಟೆಕ್ಷನ್ ಮಾಡಲಿಕ್ಕೆ ಕೆಇಬಿಯ ಥೆಫ್ಟ್‌ಗೆ ಪ್ರೊಟೆಕ್ಟ್ ಮಾಡಲಿಕ್ಕೆ ಮಾಡಿದ್ದೀರಾ? ಒಂದು ಕಡೆ ಇಂಡಸ್ಟ್ರೀಸ್ ಪಾಲಿಸಿ ತರುತ್ತೀರಿ. ರಾಜ್ಯದಲ್ಲಿ ಕೈಗಾರಿಕೆ ಬೆಳೆಯಬೇಕೆಂದು ಹೇಳುತ್ತೀರಿ ಮತ್ತೊಂದು ಕಡೆಯಿಂದ ಹೊಡೆಯುತ್ತಿದ್ದೀರಿ.ಸಾಮಾನ್ಯ ಜನರಾದ ಗ್ರಾಹಕರ ಕಣ್ಣೀರು ತೆಗೆಯುತ್ತಿದ್ದೀರಿ. ತಾವು ಪ್ರೈಜ್ ಹೈಕ್ ಮಾಡಲಿಕ್ಕೆ ಕಾರಣಗಳೇನು? ಒಂದು ಪದ್ಧತಿ ಇತ್ತು. ಯಾವುದಾದರೂ ಒಂದು ಬೆಲೆ ಹೆಚ್ಚು ಮಾಡಬೇಕಾದರೆ ಒಂದು ಟ್ಯಾರಿಫ್ ಕಮಿಟಿಯೆಂದು ಮಾಡುತ್ತಿದ್ದರು. ಅದರಲ್ಲಿ ಫಾರ್ಮರ್ಸ್, ಕನ್ಸೂಮರ್ಸ್ ಮತ್ತು ಇಂಡಸ್ಟ್ರೀಸ್ ರೆಪ್ರಸೆಂಟೆಟೀವ್ಸ್ ಇರುತ್ತಿದ್ದರು. ಅವರಿಗೆ ಅವಕಾಶ ಕೊಟ್ಟು ಅವರ ಜೊತೆಯಲ್ಲಿ ಸಮಾಲೋಚನೆ ಮಾಡಿ ಕೆಇಬಿಯವರು ಹೈಕ್ ಮಾಡುತ್ತಿದ್ದರು. ಕ್ಯಾಬಿನೆಟ್ ಸಬ್ ಕಮಿಟಿಯ ಮುಂದೆ ಇಡುತ್ತಿದ್ದರು; ಇದೆಲ್ಲ ಹಿಂದೆ ಇತ್ತು. ಉಪಮುಖ್ಯಮಂತ್ರಿಗಳು ಹೇಳುತ್ತಾರೆ, ಇದು ನನಗೆ ಗೊತ್ತೇ ಇಲ್ಲ ಎಂದು. He holds the power portfolio. ಇಲ್ಲಿ ನೀವು ಹೈಕ್ ಮಾಡುತ್ತೀರಿ. ಹೈಕ್ ಎಂದರೆ ಏನು? ಇವತ್ತು 470 ಕೋಟಿ ರೂಪಾಯಿ ಬಾಕಿ ಇದೆ; ಇದನ್ನು ವಸೂಲು ಮಾಡುವುದಕ್ಕೆ ನಿಮ್ಮ ಸರ್ಕಾರದಿಂದ ಏನು ಪ್ರಯತ್ನ ಆಗಿದೆ? ಈ ಹಣವನ್ನು ಒಂದುವೇಳೆ ವಸೂಲು ಮಾಡಿದ್ದರೆ ಈ ಹೈಕ್‌ನ ಅವಶ್ಯಕತೆ ಇರುತ್ತಿತ್ತೇನು? ನಿಮ್ಮದು ಯಾವ ಪ್ರಯತ್ನವೂ ಇಲ್ಲ. ನಿಮ್ಮ ಕೆ.ಇ.ಬಿ ಇನ್‌ಫರ್ಮೇಶನ್, ಸ್ಟಾಟಿಸ್ಟಿಕ್ಸ್ ಪ್ರಕಾರ 23 ಪರ್ಸೆಂಟ್ ಟ್ರಾನ್ಸ್‌ಮಿಶನ್ ಲಾಸ್ ಇದೆ. ಅದರಲ್ಲಿ *they have pilferage etc.* ಮತ್ತೊಂದು ಬಂತು. ನಮ್ಮ ಲೆಕ್ಕದ ಪ್ರಕಾರ ಇದು 26 ಪರ್ಸೆಂಟ್ ಇದೆ. ಎಂಟನೇ ಪಂಚವಾರ್ಷಿಕ ಪ್ಲಾನಿಂಗ್ ಕಮಿಷನ್ ಡೈರೆಕ್ಷನ್ ಪ್ರಕಾರ you have to bring it down to 16%. 1% transmission loss if you save, you are saving Rs. 30 crores. ಟ್ರಾನ್ಸ್‌ಮಿಶನ್ ಲಾಸ್ ಕಡಿಮೆ ಮಾಡುವ ಬಗ್ಗೆ ಯಾವ ಪ್ರಯತ್ನವೂ ಇಲ್ಲ. 470 ಕೋಟಿ ಹಣ ರಿಕವರಿ ಮಾಡುವುದರಲ್ಲಿ ಯಾವ ಪ್ರಯತ್ನವೂ ಇಲ್ಲ. ಆದರೆ *lethargy,*

rampant corruption, inefficiency ಅವೆಲ್ಲವನ್ನೂ ಸಾಮಾನ್ಯ ಜನರ ಮೇಲೆ ಹೊರಿಸುತ್ತೀರಿ. ಇವತ್ತು ಸುಖವಾಗಿ ರಾಜ್ಯಭಾರ ಮಾಡಲು ನಿಮಗೆ ಏನು ಅಧಿಕಾರ ಇದೆಯೆಂದು ನಾನು ಕೇಳುತ್ತೇನೆ. Want right you have got to rule? ಇಂತಹ ಹೈಕ್ ಯಾವತ್ತೂ ಆಗಿರಲಿಲ್ಲ. ಪ್ಲಾನಿಂಗ್ ಕಮಿಷನ್ I know there is a Circular or direction or guidance. ಒಮ್ಮೆ ಮೂರು ವರ್ಷಕ್ಕೊಮ್ಮೆ ಮಾಡಿ ಅಂತ ಇದೆ. generally these hikes are made at the time of budget ಆದರೆ ಪ್ರತಿವರ್ಷ, ನೀವು ಅಧಿಕಾರಕ್ಕೆ ಬಂದು ಮೂರು ವರ್ಷ ಆಯಿತು. ಅಷ್ಟರೊಳಗೇ ಮೂರು ಬಾರಿ ಹೈಕ್‌ಗಳು. ಈ ನಾಡಿನಲ್ಲಿ ಬಂದಂಥ ಯಾವ ಸರ್ಕಾರಗಳೂ ಇಂತಹ ಹೈಕ್‌ಗಳನ್ನು ಮಾಡಿರಲಿಲ್ಲ. ನೀವು ಜನರಿಗೆ ಇದೇ ಕೊಡುಗೆಯನ್ನು ಕೊಡುತ್ತೀರೇ ಹೊರತಾಗಿ ಬೇರೇನೂ ಇಲ್ಲ. ಇವತ್ತು ನಾನು ಆಗಲೇ ಹೇಳಿದ ಹಾಗೆ ಎಸ್ಟಾಬ್ಲಿಶ್‌ಮೆಂಟ್ ಆಫ್ ಕೆ.ಇ.ಬಿ. - ಇದಕ್ಕೆ ಸುಮಾರು ಮೂರು ಕೋಟಿ ರೂಪಾಯಿ ಖರ್ಚಾಗುತ್ತದೆ. ಇದನ್ನು ಕಡಿಮೆ ಮಾಡುವುದಕ್ಕೆ ಏನು ನೀವು ಮಾಡಿದ್ದೀರಿ? ಅಲ್ಲಿ ಎಫಿಶಿಯನ್ಸಿಯನ್ನು ಇಂಪ್ರೂವ್ ಮಾಡುವುದಕ್ಕೆ ಏನು ಮಾಡಿದ್ದೀರಿ? ಅಲ್ಲಿ ಯಾವ ತರಹ ಪ್ರಯತ್ನವೂ ಇಲ್ಲ. ನಾನು ತಮ್ಮ ಗಮನಕ್ಕೆ ತರುತ್ತಿದ್ದೇನೆ; ತಾವೇನು ಈ ಹೈಕ್ ಮಾಡಿದ್ದೀರಿ, 1990ರ ಸೆಪ್ಟೆಂಬರ್‌ನಲ್ಲಿ ಎಲೆಕ್ಟ್ರಿಕ್ ಕನ್‌ಸ್ಯೂಮರ್ಸ್ 250 ಯೂನಿಟ್ಸನ್ನು ಕನ್‌ಸ್ಯೂಮ್ ಮಾಡಿದ್ದಕ್ಕೆ 188 ರೂಪಾಯಿ ಬಿಲ್ ಕೊಡುತ್ತಿದ್ದ. 1991-92ರ ಜುಲೈನಲ್ಲಿ ಮಾಡಿದ ಎರಡನೇ ಬಾರಿಯ ಹೈಕ್‌ನಿಂದ ಅದು 275 ರೂಪಾಯಿ ಆಯಿತು. ಅದೇ 1992-93ರ ಆಗಸ್ಟ್ ತಿಂಗಳಲ್ಲಿ ಪುನಃ ಮಾಡಿದ ಹೈಕ್‌ನಿಂದ ಮುನ್ನೂರು ರೂಪಾಯಿ ಆಗಿದೆ. ಅಂದರೆ ಮೂರು ವರ್ಷಗಳ ಒಳಗಾಗಿ 100 ಪರ್ಸೆಂಟ್ ಏರಿಕೆ ಆಗಿದೆ. Has it been recommended by the Planning Commission? ಯಾವ ಆಧಾರದ ಮೇಲೆ ನೀವು ಮಾಡಿದ್ದೀರಿ? ಇದರಿಂದ ಇವತ್ತು ಸಾಮಾನ್ಯ ಜನರಿಗೆ ಪೆಟ್ಟಾಗಿದೆ. ಅದೇ ಪ್ರಕಾರ ಕುಡಿಯುವ ನೀರಿನ ಸರಬರಾಜು ಬಗ್ಗೆ ಬಿ.ಡಬ್ಲ್ಯೂ. ಎಸ್.ಎಸ್.ಬಿ ಮತ್ತು ಮುನಿಸಿಪಾಲಿಟಿಗಳ ಬಗ್ಗೆ ಕೂಡ ಹೈಕ್ ಮಾಡಿದ್ದೀರಿ. ಅದರ ಪರಿಣಾಮ ಆಗುವುದು ಸಾಮಾನ್ಯ ಜನರ ಮೇಲೆಯೇ. ಕಮರ್ಷಿಯಲ್ ಎಸ್ಟಾಬ್ಲಿಶ್‌ಮೆಂಟ್ಸ್ ಮೇಲೆ ಏನು ಜಾಸ್ತಿ ಮಾಡಿದ್ದೀರಿ, ಅದರ ಭಾರ ಬೀಳುವುದು ಸಾಮಾನ್ಯ ಜನರ ಮೇಲೆ. ಈ ಪ್ರಕಾರ ಹೆಚ್ಚು ಮಾಡುವುದಕ್ಕೆ ಅವರ ಇನ್‌ಕಮ್ ಏನು ಹೆಚ್ಚಾಗಿದೆಯೋ, ಅಥವಾ ಡಿ.ಎ. ಏನಾದರೂ ಕೊಟ್ಟಿದ್ದೀರೋ? ಪ್ರೈಸ್ ಇಂಡೆಕ್ಸ್ ಆ ಮಟ್ಟಕ್ಕೆ ಹೋಗಿತ್ತೋ ಹೇಗೆ? ಒಂದು ಕಡೆ ಶ್ರೀಮಾನ್ ಮನಮೋಹನ್ ಸಿಂಗ್ ಅವರು ಹೇಳುತ್ತಾರೆ "Inflation from 16.6% it has come down 6%." ಎಂದು. ಅಂದರೆ ಆದಾಯ ಅಷ್ಟು ಪ್ರಮಾಣದಲ್ಲಿ ಹೆಚ್ಚಾಗಿದೆಯೇನು? ನೂರು ಪರ್ಸೆಂಟ್‌ನಷ್ಟು ಹೆಚ್ಚು ಮಾಡಿದರೆ ಅದನ್ನು ಕೊಡುವ ಶಕ್ತಿ ಸಾಮಾನ್ಯ ಜನರಿಗೆ ಬಂದಿಲ್ಲ. ಇದಕ್ಕೆ ಕಾರಣ ಏನು? ಇವತ್ತು ಬಳಕೆದಾರರಿಗೇ ಆಗಲಿ, ಕುಡಿಯುವ ನೀರಿಗೇ ಆಗಲೀ, ಸಾಧಾರಣ 60 ಪರ್ಸೆಂಟ್‌ನಿಂದ 80 ಪರ್ಸೆಂಟ್‌ನಷ್ಟು ಹೈಕ್ ಮಾಡಿದ್ದೀರಿ.

4.35 ಪಿ.ಎಂ

ರಾಜ್ಯದ ವಿಚಾರದಲ್ಲಿ, it is an unprecedented hike. ಯಾವಾಗಲೂ ಯಾವ ರಾಜ್ಯ ಸರ್ಕಾರಗಳು ಇಷ್ಟು ಹೈಕ್ ಮಾಡಿಲ್ಲ. ಮಾನ್ಯ ಉಪಮುಖ್ಯಮಂತ್ರಿಗಳು ಮಂಗಳೂರಿನಲ್ಲಿ ಒಂದು

ಸ್ಟೇಟ್‌ಮೆಂಟ್ ಮಾಡಿ ನಾನು ಇದನ್ನು ಪರಿಶೀಲನೆ ಮಾಡುತ್ತೇನೆಂದು ಹೇಳಿದರು. ನಾವೂ ಕೂಡ ಏನಾದರೂ ಮಾಡುತ್ತಾರೆಂದು ತಿಳಿದುಕೊಂಡಿದ್ದೆವು. ಆದರೆ, ಎಲ್ಲಿ ಪರಿಶೀಲನೆ ಮಾಡಿದರು; ಅವರು ಒಂದು ತಿಂಗಳ ಹಿಂದೆ ಮಂಗಳೂರಿಗೆ ಹೋದಾಗ ಸ್ಟೇಟ್‌ಮೆಂಟ್ ಮಾಡಿದ್ದಾರೆ. ಇದು ನಮ್ಮ ಗಮನಕ್ಕೆ ಬಂದಿದೆ; ಪರಿಶೀಲನೆ ಮಾಡಿ ನಿರ್ಣಯ ತೆಗೆದುಕೊಳ್ಳುತ್ತೇವೆಂದು ಹೇಳಿದರು. ಇದು ಹೇಳಿ ಒಂದು ತಿಂಗಳಾಯಿತು, ಅವರಿಗೆ, ಇದರ ಬಗ್ಗೆ ನಿರ್ಣಯ ಮಾಡುವುದಕ್ಕೆ ಸಮಯ ಎಲ್ಲಿದೆ? ಡೆಲ್ಲಿ, ಬೆಂಗಳೂರು ಹೀಗೆ ಭಿನ್ನಮತದ ಚಟುವಟಿಕೆಯಲ್ಲಿಯೇ ಇಷ್ಟೊಂದು ಮಗ್ನರಾಗಿರುವಾಗ, ಇದಕ್ಕೆಲ್ಲಾ ಅವರಿಗೆ ಟೈಮ್ ಎಲ್ಲಿದೆ? ಸಾಮಾನ್ಯ ಜನರ ಬಗ್ಗೆ ಚಿಂತನೆ ಮಾಡುವ ಶಕ್ತಿ ಅವರಿಗೆ ಎಲ್ಲಿ ಉಳಿದಿದೆ. ಅವರು ಸಾಮಾನ್ಯ ಜನರ ಬಗ್ಗೆ ಚಿಂತನೆ ಮಾಡದಿದ್ದರೆ, ಇನ್ನೇನು ಮಾಡುತ್ತಾರೆ. ಸರಿಯೋ, ತಪ್ಪೋ ಈ ಪ್ರಕಾರ ಪರಿಶೀಲನೆ ಮಾಡಿದ್ದೇನೆಂದು ಹೇಳಬಹುದಿತ್ತು. ಏಕೆಂದರೆ, ಅವರು ಪರಿಶೀಲನೆ ಮಾಡುತ್ತೇನೆಂದು ಹೇಳಿದ್ದರಿಂದ, ಇಷ್ಟು ಕಡಿಮೆ ಮಾಡಿದ್ದೇನೆಂದು ಹೇಳಬಹುದಾಗಿತ್ತು. ಹಾಗಾಗಿ, ಮುಖ್ಯಮಂತ್ರಿಗಳ ಗಮನಕ್ಕೆ ತರುತ್ತಿದ್ದೇನೆ, ಈ ವಿಚಾರದಲ್ಲಿ ಬಹಳ ದೊಡ್ಡ ಅನ್ಯಾಯ ಮಾಡಿದ್ದೀರಿ ಎಂದು; ಇಷ್ಟು ಹೆಚ್ಚುವರಿ ಮಾಡುವ ಅಧಿಕಾರ ನಿಮಗೆ ಇಲ್ಲ. ಇವತ್ತು ನೀವೇನು ಹೆಚ್ಚಳ ಮಾಡಿದ್ದೀರಿ, ಆ ಹೆಚ್ಚಳವನ್ನು ವಿತ್‌ಡ್ರಾ ಮಾಡಬೇಕಾಗುತ್ತದೆ. ಇವತ್ತು ಕೈಗಾರಿಕೆಗಳು, ಅದರಲ್ಲಿಯೂ ಸಣ್ಣ ಕೈಗಾರಕೆಗಳ ಬಗ್ಗೆ ಹೇಳುತ್ತೇನೆ. ಇವತ್ತು ಕರ್ನಾಟಕದಲ್ಲಿ ಎರಡು ರೂಪಾಯಿ ಪರ್ ಯೂನಿಟ್ ಚಾರ್ಜ್ ಮಾಡುತ್ತೀರಿ. ಕೈಗಾರಿಕೆಗಳು ಬೆಳೆಯಬೇಕೆಂಬ ಸದಿಚ್ಛೆ ಇದ್ದರೆ, ನೆರೆ ರಾಜ್ಯಗಳಲ್ಲಿ ಏನಿದೆ ಎನ್ನುವುದನ್ನು ನೋಡಬೇಕು. ನೀವೇನು ಮಾಡುತ್ತಿದ್ದೀರಿ, ಮಹಾರಾಷ್ಟ್ರದವರನ್ನು ಮಾತ್ರ ಅನುಸರಿಸುತ್ತಿದ್ದೀರಿ. ಇವತ್ತು ತಮಿಳುನಾಡಿನಲ್ಲಿ ಒಂದು ಯೂನಿಟ್‌ಗೆ 1.90 ಪೈಸೆ ಇದೆ, ಆಂಧ್ರಪ್ರದೇಶದಲ್ಲಿ 1.44 ಪೈಸೆ ಇದೆ, ಕೇರಳದಲ್ಲಿ 99 ಪೈಸೆ ಇದೆ. ಅಷ್ಟೇ ಅಲ್ಲ, ಈ ಕೆ.ಇ.ಬಿ ವಿಚಾರದಲ್ಲಿ ಮತ್ತೊಂದು ಏನಿದೆ ಎಂದರೆ, ಮೂರು ತಿಂಗಳ ಡಿಪಾಸಿಟ್ ಕಟ್ಟಬೇಕು. ಮಾನ್ಯ ಉಪ ಮುಖ್ಯಮಂತ್ರಿಗಳು ಶಾಸನ ಸಭೆಯಲ್ಲಿ ಒಂದು ಭರವಸೆಯನ್ನು ಕೊಟ್ಟಿದ್ದರು. ಏನೆಂದರೆ 12 ತಿಂಗಳ ಸರಾಸರಿ ತೆಗೆದುಕೊಂಡು ನಾವು ಡಿಪಾಸಿಟ್ ತೆಗೆದುಕೊಳ್ಳುತ್ತೇವೆ ಎಂದು. ಆದರೆ ಇವತ್ತು ಅದೂ ಕೂಡ ಆದೇಶ ಆಗಿಲ್ಲ. ಎಷ್ಟು ಉಪಯೋಗ ಮಾಡುತ್ತಾರೆ, ಅಷ್ಟು ದುಡ್ಡು ಕೊಡಬೇಕು. ಇದೇ ಶಾಸನ ಸಭೆಯಲ್ಲಿ, 12 ತಿಂಗಳ ಸರಾಸರಿ ತೆಗೆದುಕೊಂಡು ಮಾಡುತ್ತೇವೆಂದು ಹೇಳಿದ್ದರು. ಆದರೂ ಕೂಡ, ಕೆ.ಇ.ಬಿ ನಲ್ಲಿ ಇದು ಜಾರಿ ಆಗಿಲ್ಲ ಇಷ್ಟೇ ಹೊರತು, ಫ್ಯೂಯಲ್ ಕಾಸ್ಟ್ ಅಂದರೆ, ಕೋಲ್ ಕಾಸ್ಟ್ ಹೆಚ್ಚಾದರೆ, ಅದೂ ಅಡಿಷನಲ್ ಬರ್ಡನ್ ಇಂಡಸ್ಟ್ರೀಸ್‌ಗೆ ಕೊಡಬೇಕು. ಅಂದರೆ, ಅಡಿಷನಲ್ ಬರ್ಡನ್ ಯಾವ ರಾಜ್ಯದಲ್ಲೂ ಇಲ್ಲ. ಈ ಫ್ಯೂಯೆಲ್‌ನಲ್ಲಿ ಹೆಚ್ಚಿಗೆಯಾದರೆ, ಕೋಲ್ ಮತ್ತೊಂದರಲ್ಲಿ, not only your cost is more, in addition if there is hike in fuel, the burden is shifted agian. ಅಂದರೆ, ಅಲ್ಟಿಮೇಟ್ಲಿ ಬರ್ಡನ್ ಎಲ್ಲಾ ಸಾಮಾನ್ಯ ಜನರ ಮೇಲೆ ಬೀಳುತ್ತದೆ. ಇವತ್ತು ಕೈಗಾರಿಕೆ, most of the industries are in recession. ರಾಜ್ಯದಲ್ಲಿ ಮುಖ್ಯಮಂತ್ರಿಗಳು ಹೇಳುತ್ತಾರೆ, by 2000 AD I am going to take Karnataka to No.1 position. ಹಾಗಿದ್ದರೆ ಏನು ತೆಗೆದುಕೊಳ್ಳುವುದಕ್ಕೆ ಸಾಧ್ಯವಿದೆ? How can you take Karnataka to No.1 position with all this? ಹಾಗಾಗಿ ಇವತ್ತು ಸರ್ಕಾರ ಇದರ ಬಗ್ಗೆ ವಿಚಾರ

ಮಾಡಬೇಕಾಗುತ್ತದೆ; ಇದರ ಬಗ್ಗೆ ಪುನರ್‌ಪರಿಶೀಲನೆ ಮಾಡಬೇಕಾಗುತ್ತದೆ; ಈ ಹೆಚ್ಚುವರಿಯನ್ನು ವಿತ್‌ಡ್ರಾ ಮಾಡಬೇಕಾಗುತ್ತೆ. ಎ.ಇ.ಹೆಚ್. ಕನ್‌ಸ್ಯೂಮರ್ಸ್ ಬಗ್ಗೆ, ವಾಟರ್ ಸಪ್ಲೈ, ಕಮರ್ಷಿಯಲ್ ಎಸ್ಟಾಬ್ಲಿಷ್‌ಮೆಂಟ್ಸ್‌ಗಳ ಬಗ್ಗೆ ನಾನು ಒತ್ತಾಯ ಮಾಡುತ್ತೇನೆ, ಏಕೆಂದರೆ, ಇವರಿಗೆ ಬಹಳ ದೊಡ್ಡ ಅನ್ಯಾಯವಾಗಿದೆ. ಕೈಗಾರಿಕೆಗಳು, ಅದರಲ್ಲಿಯೂ ಸಣ್ಣ ಕೈಗಾರಿಕೆಗಳು sustain ಮಾಡುವುದಕ್ಕೆ ಸಾಧ್ಯವಿಲ್ಲ; ಅವರು ಬಹಳ ಕಷ್ಟದಲ್ಲಿದ್ದಾರೆ. ಇವತ್ತು ಮುಖ್ಯವಾಗಿ ಪವರ್ ಜನರೇಷನ್ ಮಾಡುವುದರಲ್ಲಿ ಯಾವ ಕ್ರಮವನ್ನೂ ತೆಗೆದುಕೊಂಡಿಲ್ಲ. ಈ ಪವರ್ ಜನರೇಷನ್‌ಗೆ ನಿಮ್ಮ ಕಡೆಯಿಂದ ಯಾವ ಕ್ರಮ ನಡೆದಿದೆ? ಇವತ್ತು ಇನ್‌ಸ್ಟಾಲ್ ಕೆಪಾಸಿಟಿ ನೋಡಿ, ನೀವು 1990-91ರಲ್ಲಿ ಅಧಿಕಾರಕ್ಕೆ ಬಂದಿರಿ. The installed capacity was 2985 Mega Watts. In 1991-92 it is 3014. You have added only 29 MW more. In the year 1992-93 it is 3128 i.e., another 114 MW were increased. ನೀವು ಅಧಿಕಾರಕ್ಕೆ ಬಂದ ಮೂರೂವರೆ ವರ್ಷಗಳಲ್ಲಿ 130 ಮೆಗಾವ್ಯಾಟ್ಸ್ ಮಾತ್ರ ಪವರ್ ಹೆಚ್ಚು ಮಾಡಿದಿರಿ. ಒಂದು ಕಡೆಯಿಂದ, ಗೋವಾಕ್ಕೆ ರಿಯಾಯಿತಿ ರೇಟ್‌ನಲ್ಲಿ ಪವರ್ ಕೊಡುತ್ತೀರಿ. ಇಲ್ಲಿ ಪವರ್ ಜನರೇಷನ್ ಮಾಡುವುದಿಲ್ಲ. ಬಂಗಾರಪ್ಪನವರ ಕಾಲದಲ್ಲಿ ಎಷ್ಟೋ ಅಗ್ರಿಮೆಂಟ್ಸ್ ಆದವು. ಆ ಅಗ್ರಿಮೆಂಟ್‌ಗಳ ಪರಿಸ್ಥಿತಿ ಏನು? ಸ್ವಿಟ್ಸರ್‌ಲ್ಯಾಂಡ್‌ನಿಂದ ಬರುತ್ತಾರೆ, ಅಮೇರಿಕಾದಿಂದ ಬರುತ್ತಾರೆ, ಸ್ವೀಡನ್‌ನಿಂದ ಬರುತ್ತಾರೆ ಎಂದು ಹೇಳಿದ್ದರು. ಆದರೆ ಯಾವ ಅಗ್ರಿಮೆಂಟ್ ಕೂಡ ಇಂಪ್ಲಿಮೆಂಟ್ ಆಗಿಲ್ಲ. ಪವರ್ ಜನರೇಷನ್ ಬಗ್ಗೆ ಯಾವ ಚಿಂತನೆಯೂ ಇಲ್ಲ. ಕೇವಲ easiest resort, cheapest resort-'Increase the power tariff.' ನಿಮ್ಮ ಕೈಯಲ್ಲಿ ಅಧಿಕಾರ ಇದೆ, ಮಾಡುತ್ತಾ ಹೋಗಿ. ಇದನ್ನು ಜನಗಳು ಇನ್ನೆಷ್ಟು ದಿನ ಸಹಿಸಲಿಕ್ಕೆ ಸಾಧ್ಯ? ತಾವು ಏನು ಅನ್‌ಪ್ರಿಸೀಡೆಂಟೆಡ್ ಆಗಿ ಪವರ್ ಚಾರ್ಜ್ ಹೈಕ್ ಮಾಡಿದ್ದೀರಿ ಅದನ್ನು ತಕ್ಷಣ ರಾಜ್ಯದ ಜನರ ಹಿತ ದೃಷ್ಟಿಯಿಂದ, ಕೈಗಾರಿಕೆಗಳ ಹಿತದೃಷ್ಟಿಯಿಂದ ವಾಪಸ್ಸು ಪಡೆಯಬೇಕಾಗುತ್ತದೆ. ಕಾಂಗ್ರೆಸ್ ಪಕ್ಷದಿಂದ ಒಂದು ಮೆಮೋರಾಂಡಮ್ ಅನ್ನು ನರಸಿಂಹರಾಯರಿಗೆ ಕೊಟ್ರಿ. ಇದರಲ್ಲಿ ನೀವು ಹೇಳಿದ್ದೀರಿ,

"The first few months of the new Government under Sri Veerappa Moily's leadership consisting of 14-member team of senior, matured and experienced Council of Ministers evoked good public response, restored credibility of the State Government and the Congress Party. But, with the *expanded* airbus Ministry from 14 to 41, the reputation and the credibility of the State Government to provide the anticipated administration has effected serious set back. The declining credibility and the falling image of the party are due to the following among other reasons......" ಹೀಗೆ ಹಲವಾರು ಕಾರಣಗಳನ್ನು ಕೊಟ್ಟಿದ್ದೀರಿ. ಇವರ ಇನ್ ಎಫಿಷಿಯನ್ಸಿ, ಇವರ ಅವಿಶ್ವಾಸ, ಇವರು ಸುಳ್ಳು ಮಾತನಾಡುತ್ತಾರೆ, ಇವರಲ್ಲಿ ವಿಶ್ವಾಸ ಇಲ್ಲವೆಂದು ಅದರಲ್ಲಿ ಆಪಾದನೆ ಮಾಡಿದ್ದೀರಿ. ನಮ್ಮ ನಾಯಕರ ಮೇಲೂ ಕೆಲವು ಆಪಾದನೆ ಮಾಡಿದ್ದೀರಿ. ರಾಮಕೃಷ್ಣ ಹೆಗಡೆಯವರ ಮೇಲೆ, ನಮ್ಮ ಪಕ್ಷದ ಮೇಲೆ, ಬಿ.ಜೆ.ಪಿ. ಮೇಲೆ ಆಪಾದನೆ ಮಾಡಿದ್ದೀರಿ. ಬಿ.ಜೆ.ಪಿಯವರು ಜನತಾದಳದೊಂದಿಗೆ hand

in glove ಇದ್ದಾರೆ ಅಂತ. ಎಲ್ಲಾ ಇದೆ ಓದು ಅಂದರೆ, ಓದುತ್ತೇನೆ. ಎಲ್ಲಾ ಕೈಯಲ್ಲೇ ಇದೆ. ನಾನು ಒಂದು ಮಾತನ್ನು ತಮಗೆ ಕೇಳುತ್ತೇನೆ, ಇವತ್ತು ನಿಮ್ಮಲ್ಲಿ ಇಷ್ಟು ಕಚ್ಚಾಟ ಇರುವಾಗ, ನಿಮ್ಮಲ್ಲಿ ಇಷ್ಟು ಜಗಳ ಇರುವಾಗ, ನೀವು ಬೀದಿಯಲ್ಲಿ ಬಂದಾಗ ನಾವು ಏನು ಸಹಾಯ ಮಾಡಲಿಕ್ಕೆ ಬರುತ್ತದೆ ನಿಮ್ಮ ಮುಖ್ಯಮಂತ್ರಿಗಳಿಗೆ? ಕುಲದೀಪ್‌ಸಿಂಗ್ ವರದಿ ಬಗ್ಗೆ ನಮಗೇನೂ ವರಿ ಇಲ್ಲ. ಇವತ್ತು ನೀವು ಅಧಿಕಾರದಲ್ಲಿ ಬಂದು ಮೂರೂ ಮುಕ್ಕಾಲು ವರ್ಷವಾಯಿತು. ಇಲ್ಲಿಯವರೆಗೆ 3 ಜನ ಮುಖ್ಯಮಂತ್ರಿಗಳಾದರು. ಕುಲದೀಪ್‌ಸಿಂಗ್ ವರದಿಯನ್ನು ತೆಗೆದುಕೊಂಡು ವೀರೇಂದ್ರಪಾಟೀಲರು ಏನುಮಾಡಿದರು? ಬಂಗಾರಪ್ಪನವರು ಏನು ಮಾಡಿದರು? ವೀರಪ್ಪಮೊಯಿಲಿಯವರು ಏನು ಮಾಡುತ್ತಿದ್ದಾರೆ? ನಾನು ನಿಮ್ಮ ಸರ್ಕಾರಕ್ಕೆ ಛಾಲೆಂಜ್ ಮಾಡುತ್ತೇನೆ, ನಿಮಗೆ ಧೈರ್ಯ ಇದ್ರೆ, I challenge. You act on the kuldip Singh Commission Report. We are prepared to face it. We want to expose kuldip Singh. ಯಾವ ಪ್ರಕಾರ ಏಕೆ ಆ ಕಮಿಷನ್ ಅಪಾಯಿಂಟ್ ಆಯಿತು? ಆ ಕಮಿಷನ್‌ನಲ್ಲಿ ಏನು ಹುರುಳು ಇದೆ? We want to expose him. I give a challenge to the Chief Minister. If your government has courage, we want you to prosecute Hegde. We want to take action against Mr. Hegde. ಪೊಳ್ಳು ರೆಪ್ರೆಸೆಂಟೇಷನ್ ಅನ್ನು ನಿಮ್ಮ ಸಲುವಾಗಿ ಕೊಟ್ಟು ಹೆಗಡೆಯವರ ಇಮೇಜ್‌ಗೆ ಧಕ್ಕೆ ತರಲಿಕ್ಕೆ ಪ್ರಯತ್ನ ಮಾಡಬೇಡಿ. We are not worried about it. We are not cowards. ಕಂದಾಯ ಸಚಿವರಿಗೂ ಸಹ ಕುಲದೀಪ್ ಸಿಂಗ್ ವರದಿಯಲ್ಲಿ ಸತ್ಯ ಏನಿದೆ ಎಂದು ಗೊತ್ತು. I have read the Kuldip Singh Commission report in detail. Is there one line against Mr. Hegde? One line! ಇದ್ದರೆ ಬಂಗಾರಪ್ಪನವರು ಬಿಡುತ್ತಿದ್ದರೇನು? ಹರಾಜು ಹಾಕುತ್ತಿದ್ದರು ಒಂದು ಲೈನ್ ಇದ್ದಿದ್ದರೆ ಹೆಗಡೆಯವರಿಗೆ;

ಪ್ರೊ : ಎಂ.ಡಿ ನಂಜುಂಡಸ್ವಾಮಿ :- ದೇಶಪಾಂಡೆಯವರೆ, may be, there is not a single line in the Kuldip Singh Commission Report. But, there are two lines in the Supreme Court judgement. There are two lines. ಸುಪ್ರೀಮ್ ಕೋರ್ಟ್ ಜಡ್ಜ್‌ಮೆಂಟ್‌ನಲ್ಲಿ ಕುಲದೀಪ್‌ಸಿಂಗ್ ಆಯೋಗದಲ್ಲಿ ಏನು ಫೈಂಡಿಂಗ್ ಇದೆ ಅದನ್ನು ಎತ್ತಿ ಹಿಡಿದಿದ್ದಾರೆ. There are two lines indicating Mr. Hegde and I want this government to take action.

ಶ್ರೀ ಆರ್.ವಿ.ದೇಶಪಾಂಡೆ : – ಈಗ ನಾನೇ ಹೇಳಿದ್ದೇನಲ್ಲಾ, ಅದಕ್ಕೆ ನಂಜುಂಡಸ್ವಾಮಿಯವರ ವಕಾಲತ್ ಅವಶ್ಯಕತೆ ಇಲ್ಲ. ಸುಪ್ರಿಮ್ ಕೋರ್ಟ್ ಜಡ್ಡ್‌ಮೆಂಟ್‌ನಲ್ಲಿ ಏನಿದೆ? ಮಾಲಾಫೈಡ್ ಛಾಲೆಂಜ್ ಮಾಡಿದ್ದಾರೆಯಾ? Supreme Court has not given any judgement on mala fide. What is there, I want to know. Professor should enlighten.

Prof. M.D. Nanjundaswamy: I want to enlighten.

ಮನು ನಿಚ್ಚಾನಿಗೆ ಮತ್ತೆ ಮುಖ್ಯಮಂತ್ರಿಗೆ ಬಹಳ ಹತ್ತಿರದ ಸಂಪರ್ಕ ಇರುವುದರಿಂದ ಭ್ರಷ್ಟಾಚಾರ ನಡೆದಿದೆ ಎಂದು ಸುಪ್ರೀಮ್ ಕೋರ್ಟ್ ಹೇಳಿದೆ.

ಶ್ರೀ ಆರ್.ವಿ.ದೇಶಪಾಂಡೆ : - ಪ್ರೊಫೆಸರ್ ಅವರು ಅವರ ಶೈಲಿಯಲ್ಲಿ ಹೇಳಿದ್ದಾರೆ. ಅದರಲ್ಲಿ ಮನು ನಿಚ್ಚಾನಿಗೆ ಸಹಾಯ ಮಾಡಿದ್ದಾರೆಂದು ಹೇಳಿಲ್ಲ.

PROF. M.D. NANJUNDASWAMY: I am bringing the Supreme Court judgement copy tomorrow.

SRI R.V.DESHAPANDE: Alright. I myself said to take aciton. As Leader of the Opposition belonging to the same party, I am asking you to take action. What more you want? I have said to take action. There is no necessity of your support on that also. When I demand, what more you want?

ಹಾಗಾಗಿ ಮಾನ್ಯ ಅಧ್ಯಕ್ಷರೇ, ಈ ಮೆಮೊರಾಂಡಮ್‌ನಲ್ಲಿ ಏನಿದೆ? ಅದು ಅವರಿಗೆ ಬಿಟ್ಟಿದ್ದು. ಅದನ್ನು ನಾನು ಏಕೆ ಟಚ್ ಮಾಡಿದೆ ಎಂದರೆ, it is more relevant to me because it concerns to some extent my party and also the BJP. ಹಾಗಾಗಿ ಇವತ್ತು ನಿಮ್ಮ ಸ್ಕೋರ್ ಸೆಟಲ್ ಮಾಡುವುದಕ್ಕೆ please don't involve us. We are not interested. If Veerappa Moily is the Chief Minister or if you become the Chief Minister, what we have to do? ನಾವು ಏನೂ ಆಗುವುದಿಲ್ಲವಲ್ಲಾ? ಹಾಗಾಗಿ ನಿಮ್ಮ ಸರ್ಕಾರದಲ್ಲಿ ಆಗುವ ಇಚ್ಛೆಯೂ ಇಲ್ಲ. ನಾನು ಇಷ್ಟೇ ಹೇಳುತ್ತೇನೆ, ಈ ತರಹದ ಮೆಮೊರಾಂಡಮ್ಮನ್ನು ಕೊಡುವುದು ನಿಮಗೆ ಬಿಟ್ಟಿದ್ದು. ಆದರೆ ವಿರೋಧ ಪಕ್ಷಗಳ ಮೇಲೆ ಹೇಳುವಾಗ ಸ್ವಲ್ಪ ಜವಾಬ್ದಾರಿಯಿಂದ, ಗೌರವದಿಂದ ಹೇಳ್ರಿ ಎಂದು ಹೇಳುತ್ತೇನೆ. ಇಷ್ಟು ಲಘುವಾಗಿ ನೀವು ಮೆಮೊರಾಂಡಮ್ಮನ್ನು ಕೊಡುತ್ತಾ ಹೋದರೆ ಇದರಿಂದ ನಿಮಗೆ ಏನೂ ಲಾಭವಾಗಲಿಕ್ಕೆ ಸಾಧ್ಯವಿಲ್ಲ. ಈ ಮೆಮೊರಾಂಡಮ್‌ನಲ್ಲಿ ಬೇರೆ ಕೆಲವು ವಿಚಾರಗಳು, ಇನ್‌ಎಫಿಷಿಯನ್ಸಿ ಬಗ್ಗೆ, ಎಕ್ಸೈಸ್ ಬಗ್ಗೆ ಇವೆ. ಅದನ್ನು ನಾನು ಅಲಾಯದ ಡೀಲ್ ಮಾಡುತ್ತಿದ್ದೇನೆ. ಈಗ ನಾನು ಎಕ್ಸೈಸ್‌ಗೆ ಬರುತ್ತೇನೆ. ಮಾನ್ಯ ಅಧ್ಯಕ್ಷರೇ, ಇವತ್ತು ಸರ್ಕಾರದ ಎಕ್ಸೈಸ್ ನೀತಿ ಏನಿದೆ? ಅದರಲ್ಲಿ ಅರ್‍ಯಾಕ್ ನೀತಿ ಏನಿದೆ? ಇದು either it is in the interest of the government nor the consumer. It is only to help the arrack manufacturers, more than the manufacturers, it is the contractors. ಇವತ್ತು ಮಾನ್ಯ ಮುಖ್ಯಮಂತ್ರಿಗಳು ಬಾಟ್ಲಿಂಗ್ ಕಾಂಟ್ರಾಕ್ಟ್ ಕ್ಯಾನ್ಸಲ್ ಮಾಡಿದರು. ಬಾಟ್ಲಿಂಗ್ ಕಾಂಟ್ರಾಕ್ಟ್ ಕ್ಯಾನ್ಸಲ್ ಮಾಡುವ ಉದ್ದೇಶ ಏನಿತ್ತು? ದೇಸಾಯಿ ಕಮಿಷನ್ ಬಂದ ನಂತರ ಬಲ್ಕ್ ಅರ್‍ಯಾಕ್ ಮಾಡಬಾರದು ಅದು ಹ್ಯೂಮನ್ ಲೈಫ್‌ಗೆ ಡೇಂಜರ್ ಇದೆ, ಪಿಲ್‌ಫರೇಜ್ ಇದೆ, ಹಾಗಾಗಿ ಸೀಲ್ಡ್ ಮಾಡಿ ಮಾರಾಟ ಮಾಡಬೇಕೆಂದು ಸೂಚನೆ ಕೊಟ್ಟರು. ಅದರ ಮೇರೆಗೆ ನಮ್ಮ ಸರಕಾರ ಇದ್ದಾಗ ಬಾಟ್ಲಿಂಗ್ ಕಂಟ್ರಾಕ್ಟ್ ಕೊಟ್ಟರು. ಇದು ಬಂಗಾರಪ್ಪನವರ ಕಾಲದಲ್ಲಿ ಪುನಃ ರಿನ್ಯೂ ಆಯಿತು. ಹೀಗೆ ಆದಾಗ ಮಾನ್ಯ ಮುಖ್ಯಮಂತ್ರಿಯವರು ಬಾಟ್ಲಿಂಗ್ ಕಾಸ್ಟ್ ಹೆಚ್ಚಿಗೆ ಇದೆ ಬಾಟ್ಲಿಂಗ್ ಕಂಟ್ರಾಕ್ಟರ್ಸ್ ಹೆಚ್ಚಿಗೆ ಹಣ ಮಾಡುತ್ತಾ ಇದ್ದಾರೆ, ಇದರಿಂದ ಕನ್‌ಸ್ಯೂಮರ್ಸ್‌ಗೆ ಏನೂ ಬೆನಿಫಿಟ್ ಆಗುತ್ತಾ ಇಲ್ಲ, ಸರಕಾರಕ್ಕೂ ಆದಾಯವು ಬರುತ್ತಾ ಇಲ್ಲ, ಯಾಕೆಂದರೆ ಸಾರಾಯಿ ಬಾಟಲ್‌ಗಳಲ್ಲಿ ಮಾರಾಟ ಆಗುತ್ತಾ

ಇಲ್ಲ, ಅದು ಲೂಸ್‌ನಲ್ಲಿ ಮಾರಾಟವಾಗಿ ಬಾಟ್ಲಿಂಗ್ ಚಾರ್ಜನ್ನು ಅವರು ತೆಗೆದುಕೊಳ್ಳುತ್ತಾ ಇದ್ದಾರೆ, ಹಾಗಾಗಿ ಇವೊತ್ತು ನಾವೂ ಬಾಟ್ಲಿಂಗ್ ಕಂಟ್ರಾಕ್ಟ್ ಕ್ಯಾನ್ಸಲ್ ಮಾಡಿ, ಸ್ಯಾಚೆಟ್‌ಗಳಲ್ಲಿ ಮಾರಾಟ ಮಾಡುತ್ತೇವೆ ಎಂದು ಹೇಳಿದರು. The object of the Chief Minister was laudable. ನಾವು ಅದನ್ನು ಸ್ವಾಗತ ಮಾಡಿದ್ದೇವೆ. ಯಾಕೆಂದರೆ ಅದರಿಂದ ಸರಕಾರಕ್ಕೆ ಹೆಚ್ಚಿನ ಆದಾಯವು ಬರುವುದಿದ್ದರೆ, ಕನ್‌ಸ್ಯೂಮರ್ಸ್‌ಗೆ ಅದರಿಂದ ಬೆನಿಫಿಟ್ ಆಗುವುದಿದ್ದರೆ, ಅದನ್ನು ನಾವು ಒಪ್ಪಿಕೊಳ್ಳಲೇಬೇಕಾಗುತ್ತದೆ. ಆದರೆ ಪರಿಸ್ಥಿತಿಯು ಏನಾಗಿದೆ? ಇವೊತ್ತು ಸರಕಾರ ಸ್ಯಾಚೆಟ್‌ನಲ್ಲಿ ಸಾರಾಯಿ ಮಾರಾಟ ಮಾಡಬೇಕೆಂದು ಹೇಳಿದೆ. ಆ ದಿಶೆಯಲ್ಲಿ ಎರಡು ಗವರ್ನಮೆಂಟ್ ಏಜನ್ಸಿಗಳನ್ನು ನೇಮಕ ಮಾಡಿದರು, ಅವುಗಳು ಅಂದರೆ ಎಂಎಸ್‌ಐಎಲ್ ಮತ್ತು ಮೈಶುಗರ್. ಹಾಗಾದರೆ ಅವರು ಏನು ಮಾಡಿದ್ದಾರೆ? ಅವರೇ ಏನಾದರೂ ಸ್ಯಾಚೆಟ್‌ಗಳನ್ನು ಮಾಡುತ್ತಾ ಇದ್ದಾರೋ? ಇಲ್ಲ, ಅವರು ಮಾಡುತ್ತಾ ಇಲ್ಲ. ಅವರು ಏನು ಮಾಡಿದರು? ಅವರು ಈ ಕೆಲಸವನ್ನು ಪುನಃ ಬೇರೆಯವರಿಗೆ ಕೊಟ್ಟರು.

So, in the name of bottling contractors, some sachet contractors came. If MSIL amd Mysugar had no infrastructure, why that responsibility was given to them? What was the necessity? Very well, you could have called the same bottling contractors and told them, 'You cannot do bottling and do in sachets.' That was the easiest way. But, governmment wanted to get rid of bottling contractors to help some arrack contractors. The modus opernadi was to have two front organisations- MSIL and Mysugar. If MSIL and Mysugar are making sachets, I have no objection. They are not making. ಅವರು ಇವೊತ್ತು ಮಾಡುತ್ತಾ ಇಲ್ಲ, ಇನ್ನು ಮುಂದೆಯೂ ಮಾಡುವುದಿಲ್ಲ. ಏಕೆಂದರೆ ಅವರ ಕಡೆಯಲ್ಲಿ ಯಾವುದೇ ಇನ್‌ಫ್ರಾಸ್ಟ್ರಕ್ಚರ್ ಇಲ್ಲ. Minimum and maximum price fixation is a mandatory provision. The Government has to mandatorily prefix the minimum and maximum price as per rule 4 of the Karnataka Excise (Arrack vends special conditions) Rules, 1967 gazetted on 23.11.67. ಸರಕಾರದ ಈ ಆಜ್ಞೆಯ ಪ್ರಕಾರ ಮ್ಯಾಗ್ಸಿಮಮ್ ಮತ್ತು ಮಿನಿಮಮ್, ಹೀಗೆ ಎರಡೂ ರೇಟ್‌ಗಳನ್ನು ಮ್ಯಾಂಡೇಟರಿ ಮಾಡಬೇಕು. ಕಂಪೆಲ್‌ಸಿವ್ ಆಗಿ ಡೆಪ್ಯುಟಿ ಕಮಿಶನರ್ ಯಾರು ಹರಾಜು ಮಾಡುತ್ತಾರೆ ಅವರು, ಅಥವಾ ಎಕ್ಸೈಸ್ ಕಮಿಶನರ್ ಫಿಕ್ಸ್ ಮಾಡಬೇಕೆಂದು ಇದೆ. 1992-93ನೇ ಇಸವಿಯಲ್ಲಿ ಮಿನಿಮಮ್ ಪ್ರೈಸ್ 45 ಇತ್ತು. ಮ್ಯಾಗ್ಸಿಮಮ್ ಪ್ರೈಸ್ 75 ಇತ್ತು. ಅದರ ಮೇಲೆ ಸರ್ಕಾರಕ್ಕೆ ಬರುವ ಎಂಟ್ರಿಟ್ಯಾಕ್ಸ್ 0.17 ಪೈಸೆಗಳು. Works contract tax was 0.38 paise, sales tax was Rs. 4.24 paise. In all government was getting Rs. 4.79 revenue as tax revenue per one litre of arrack sold. ಇದು 1993-94ರಲ್ಲಿ ಏನಾಯಿತು? ಮಿನಿಮಮ್ 45 ಎಂದು ಫಿಕ್ಸ್ ಮಾಡಿದರು. ಮ್ಯಾಗ್ಸಿಮಮ್ ಪ್ರೈಸ್ ಫಿಕ್ಸ್ ಮಾಡಿಲ್ಲ;

which was mandatory. It is the biggest lapse on the part of the government. ಅದು ಏಕೆ ಮಾಡಿಲ್ಲ? ಅದು ಈ ಸದನಕ್ಕೆ ಗೊತ್ತಾಗಬೇಕಾಗುತ್ತದೆ. I charge that it is only to help the contractors. I will come to it afterwards. 45 ಎಂದು ಫಿಕ್ಸ್ ಮಾಡಿದರೆ ಎಂಟ್ರಿಟ್ಯಾಕ್ಸ್ 0.3 ಆಯಿತು. ವರ್ಕ್ ಕಂಟ್ರ್ಯಾಕ್ಟ್ 0.9 ಆಯಿತು. ಸೇಲ್ಸ್‌ಟ್ಯಾಕ್ಸ್ 2.67 ಆಯಿತು. ಒಟ್ಟು ರೆವಿನ್ಯೂ ಸರಕಾರಕ್ಕೆ 2.79 ಆಯಿತು. In 1992-93, per litre, the government was getting Rs. 4.79 and in 1993-94, it came down to Rs. 2.79. So, a net loss of Rs. 2/- against one litre is lost to the exchequer. Rs.2/- loss, I may be wrong in these figures. It is subject to correction from the Excise Minister or the Chief Minister. According to my estimate 12 crore litres of arrack is sold. Some say it is 8 crore litres and some say it is 9 crore litres. I am subject to correction of the figures. If 12 crores is multiplied by Rs.2/-, it comes to Rs. 24 crores. Rs.24 crores is the net loss to the State Exchequer because of this. So, I would like to know whether this policy is in the interest of the consumer? It is only in the interest of arrack contractors. ಬಾಟ್ಲಿಂಗ್ ಕಂಟ್ರ್ಯಾಕ್ಟರ್‌ಗೆ ಹೇಗಿದೆ, ಸರ್ಕಾರಕ್ಕೆ ರೆವಿನ್ಯೂ ಬರಲಿಲ್ಲ. Further, bottling contractors were paying Rs.25 and add paise per litre of bottle. Now, the arrack contractors have to pay about Rs.16/-. So, the Hon. Chief Minister's intention was that this Rs.9 and add paise is to be transferred to the consumer. Rs.25 and add paise is the amount which the arrack contractor was paying. Bottling charges were more, Ultimately, it has to go to the consumers through the arrack contractors. There is no stake here by the government. It was a good decision. Burden was there on the consumer. I welcome it. So, as per the CM's statement here, he wanted to help the consumers. So, now Rs.16/- is the cost of one litre of arrack in sachets. So, sachet's cost is Rs. 2.32, Rs. 13.1 becomes the cost of one litre. So, for every one litre, there is a saving of Rs. 9 and add paise per litre, which should have been passed on to the consumers. Whether it has been passed on to the consumers to-day? The answer shall be 'no.' Even if hundred times the Chief Minister says that 'I have given this benefit to the consumers.', it is impossible. You cannot do it. If your real intention was to help the consumers, then the minimum price should have been brought down to Rs. 35/- ಕನ್‌ಸ್ಯೂಮರ್‌ಗೆ 10ರೂ. ಬೆನಿಫಿಟ್‌ಗೆ ಮಾಡಬೇಕು ಅಂತ ನಿಮ್ಮ ಇಚ್ಛೆ ಇದ್ದರೆ Minimum price should have been brought down to Rs.36/- or Rs.35-. ಅದಕ್ಕೇನು ಉತ್ತರ ಕೊಡುತ್ತಾರೆ? ರೆಂಟಲ್ಸ್

ಹೆಚ್ಚು ಬಂದಿದೆ ಈ ವರ್ಷ ಅಂತ ಹೇಳುತ್ತಾರೆ. ರೆಂಟಲ್ಸ್ 24 ಕೋಟಿ ಒಂದು ಕಡೆ ಹೆಚ್ಚು ಬಂದಿದೆ, 20 ಕೋಟಿ ಆದಾಯ ಹೋಗಿದೆ. I will come to it also. In 1989-90, the rental collection gained excess revenue. In 1989-90, per month it was Rs. 11.53 crores. For 1990-91 it was Rs.31.71 crores, 1991-92 Rs 29.37 crores, 1992-93 Rs. 32.89 crores and for 1993-94 it is Rs.35 crores. So, the per year increase in crores, last year was Rs. 394 crores. This year it becomes Rs. 420 crores. So, through rentals the Government is to get Rs. 26 crores more. But when you are getting 26 crores more, Rs.24 crores you have already lost from the State Exchequer because of sales tax and entry tax. So, what is the benefit you get? Today the minimum price is Rs.45. In that , the arrack contractor who was making huge profits at Rs. 45 minimum price and maximum Rs. 75, today that Rs. 9 and add paise is also saved by him. If you multiply 12 crores litres by Rs.9 and add paise, the net gain made by the excise contractors is Rs.108 crores. By candelling bottling contracts and giving arrackin sachets, the consumer is absolutely not benefited. Today consumers are paying a higher price than last year. So, where the benefit has gone? If it has really gone to the consumers, I welcome your decision. But that benefit of Rs.9 and add paise has been gulped, and has been pocketed by the politicians and the arrack contractors.

SRI M.VEERAPPA MOILY: It has been presented before the Supreme and High Courts by both the advocates of the arrack bottling contractors...

SRI R.V.DESHPANDE: That is alright. If you want to brand me that I am defending the case of arrack I have no objection. I only request you to meet on my arguments.

ಶ್ರೀ ಎಂ. ವೀರಪ್ಪಮೊಯಿಲಿ:- ಹಳೆ ಶಾನುಭೋಗರು ಯಾರೋ ಮಾಹಿತಿಯನ್ನು ಕೊಟ್ಟಿರುವ ಹಾಗೆ ಹೇಳುತ್ತಿದ್ದೀರಿ. Better you check up with statistics. I have an answer. These are all absolutely not right. I would like you to check up your records.

SRI R.V.DESHPANDE: I have filed a public interest litigation also, and I have engaged Mr.Datar. So, I know the case well. What I am saying

is, you please convince me, is it not a fact that bottling contractors are selling arrack at Rs.25 and add paise and is it not a fact that you are selling arrack at Rs.16 including the sachet? If both things are true, where this Rs.9/- and add is going? You explain. If you explain that Rs.9/- is going to the consumer, I have no arguments. I will withdraw my case. But, if you cannot convince me that this is not going to the consumer, then I have to presume, this House has to presume and the people of the State have to presume that there is "golmol" here. maximim price is not fixed. Why? What is the reason? When there is a mandatory provision, why have you not fixed the maximum price? This has given a free hand to the arrack contractors to fix any rate they like. Last year the rate(maximum) fixed was Rs. 75/00. Alright, they cannot go beyond Rs.75.

In your argument you may say, rentals we are getting more. What is the rental hike? It is hardly Rs. 4 crore as against a loss of Rs.24 crore to the State exchequer. So, I want to ask you now, because you have given a free hand to these arrack contractors, the result is, they may fix the rate at Rs.90 also, Rs.100 also. In Hassan it may be Rs.80/-, in Bangalore it may be 90 or 95. There is no restriction on him. They will take that benefit as they would sell for any price. ಕಳೆದ ವರ್ಷ 75 ರೂಪಾಯಿ ಮ್ಯಾಕ್ಸಿಮಮ್ ಇದ್ದರೆ 59 ರೂಪಾಯಿ ಕಾಸ್ಟ್ ಅನ್ನು ಡಿಡಕ್ಟ್ ಮಾಡಿದರೆ ಬರುವ ಲಾಭ ಅವರಿಗೆ ಹೋಗುತ್ತಿತ್ತು.

5.05 ಪಿ ಎಂ.

Sri M.Veerappa Moily: Just to correct the factual error, ಕಳೆದ ವರ್ಷ ಮ್ಯಾಕ್ಸಿಮಮ್ ಪ್ರೈಸ್ 75 ರೂಪಾಯಿ ಫಿಕ್ಸ್ ಮಾಡಿದ್ದೆವು. ಈ ವರ್ಷ fixed by the Excise Commissioner is 70 ರೂಪಾಯಿ ಕಡಿಮೆ ಫಿಕ್ಸ್ ಮಾಡಿದ್ದಾರೆ.

Sri. R.V.Deshpande:- I don't know that. I am sorry, if it is fixed. If it was done 3-4 days back, I don't know. But, my information is....

ಶ್ರೀ ಸಿ.ಬೈರೇಗೌಡ :- ಈಗ ಈ ವರ್ಷದ ನಿಮ್ಮ ನೋಟಿಫಿಕೇಷನ್ ಇಲ್ಲಿ ಇದೆ. ಹಿಂದಿನ ವರ್ಷದ ನೋಟಿಫಿಕೇಷನ್ ನನ್ನಲ್ಲಿದೆ. ಹಿಂದಿನ ವರ್ಷದ ನೋಟೀಫಿಕೇಷನ್‌ನಲ್ಲಿ ನೀವು ಮಿನಿಮಮ್ ಪ್ರೈಸ್, ಮ್ಯಾಕ್ಸಿಮಮ್ ಪ್ರೈಸನ್ನು ಫಿಕ್ಸ್ ಮಾಡಿದ್ದೀರಿ. ಈ ವರ್ಷದ ನೋಟೀಫಿಕೇಷನ್‌ನಲ್ಲಿ ಮಿನಿಮಮ್ ಪ್ರೈಸ್ ಇದೆಯೇ ವಿನಹಾ ನೀವು ಇದನ್ನು ಹರಾಜಿಗೆ ಇಡುವ ಮೊದಲೇ

ನೋಟೀಫಿಕೇಷನ್‌ನಲ್ಲಿ ಮ್ಯಾಕ್ಸಿಮಮ್ ಪ್ರೈಸನ್ನು ಕೂಡ ಹಾಕಬೇಕು. ನಾನು ಅದನ್ನೇ ಓದುತ್ತಿದ್ದೇನೆ. ನನಗಂತೂ ಕೂಡ ಇವತ್ತಿನವರೆಗೂ ಇಲ್ಲಿ ಸಿಕ್ಕಿಲ್ಲ.

Sri.M.Veerappa Moily: It has been fixed. I am making an announcement.

Sri. C. Byregowda: When it was fixed? We wanted to know.

ಶ್ರೀ ಎಂ. ವೀರಪ್ಪಮೊಯಿಲಿ : - ನೋಟೀಫಿಕೇಷನ್ ಕೊಡುತ್ತಿದ್ದೇವೆ.

ಶ್ರೀ ಸಿ. ಬೈರೇಗೌಡ : - ಈ ವರ್ಷದ ನೋಟಿಫಿಕೇಷನ್ ಇಲ್ಲಿಯೇ ಇದೆ. We want to know when it was fixed.

ಉಪಾಧ್ಯಕ್ಷರು : - ಮಾನ್ಯ ಬೈರೇಗೌಡರೇ, ತಾವು ಕೂಡ ಹೆಸರನ್ನು ಕೊಟ್ಟಿದ್ದೀರಿ, ತಮ್ಮ ಸರದಿ ಬಂದಾಗ ಮಾತನಾಡಬಹುದು. ಮಾನ್ಯ ವಿರೋಧಪಕ್ಷದ ನಾಯಕರೇ, ತಾವು ಇನ್ನೂ ಎಷ್ಟು ಟೈಮ್ ತೆಗೆದುಕೊಳ್ಳುತ್ತೀರಿ?

ಶ್ರೀ ಆರ್.ವಿ.ದೇಶಪಾಂಡೆ : - ಮುಗಿಸುತ್ತೇನೆ ಸ್ವಾಮಿ, ಇದು ನೋ ಕಾನ್ಫಿಡೆನ್ಸ್ ಮೋಷನ್;

ಉಪಾಧ್ಯಕ್ಷರು : - ಎಷ್ಟು ಟೈಮ್ ತೆಗೆದುಕೊಳ್ಳುತ್ತೀರಿ ಎಂದು ಕೇಳಿದ್ದು ಮುಗಿಸಿರಿ ಎಂದು ಹೇಳಲಿಲ್ಲ.

ಶ್ರೀ ಆರ್.ವಿ.ದೇಶಪಾಂಡೆ : - ಮುಗಿಸುತ್ತೇನೆ. ಹಾಗಾಗಿ ಇವತ್ತು ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ. I have to believe him. I don't want to raise this issue. May be yesterday or day before yesterday it might have been fixed. Alright. But what I am saying, you convince me on two points. ನಿಮ್ಮ ಸ್ಟೇಟ್ ರೆವಿನ್ಯೂ ಸ್ಟೇಟ್ ಎಕ್ಸ್‌ಚೆಕರ್‌ಗೆ ಸೇಲ್ಸ್‌ಟ್ಯಾಕ್ಸ್, ಎಂಟ್ರಿಟ್ಯಾಕ್ಸ್ ಕಡಿಮೆಯಾಯಿತೋ ಅಥವಾ ಇಲ್ಲವೋ? ಆ ಒಂಭತ್ತು ರೂಪಾಯಿ ಬೆನಿಫಿಟ್ ಕನ್‌ಸ್ಯೂಮರ್ಸ್‌ಗೆ ಪಾಸ್ ಆಗದೇ ಅರ್ರ್ಯಾಕ್ ಕಂಟ್ರಾಕ್ಟರ್‌ಗೆ ಹೋಯಿತೋ ಇಲ್ಲವೋ? ಮತ್ತು ಇಷ್ಟು ದಿನ ಏಪ್ರಿಲ್‌ದಿಂದ ಆಗಸ್ಟ್‌ತನಕ ಅರ್ರ್ಯಾಕ್ ಕಂಟ್ರಾಕ್ಟರ್ಸ್ ಲೂಟಿ ಮಾಡಿದ ಬಗ್ಗೆ ಏನು ಹೇಳುತ್ತೀರಿ? ಏಪ್ರಿಲ್, ಮೇ, ಜೂನ್, ಜುಲೈ, ಆಗಸ್ಟ್ , ಐದು ತಿಂಗಳು there was no maximum rate. According to me even if they make Rs.90 or Rs.100/-, they can make a profit of Rs.418 crores. With maximum rate of Rs. 100/-, the Excise Contractors on a sale of 12 crore litres can make an extra profit of 418 crores. ಒಂದು ಕಡೆ ಸ್ಟೇಟ್ ಎಕ್ಸ್‌ಚೆಕರ್ has lost; ಮತ್ತೊಂದು ಕಡೆ ಕನ್‌ಸ್ಯೂಮರ್ಸ್‌ಗೆ ಬೆನಿಫಿಟ್ ಇಲ್ಲ. There the contractors have made 96 to 98 crores. And because of not fixing of the maximum price which the Hon'ble Chief Minister says he has fixed now...

SRI M. VEERAPPA MOILYY: Excise year commences from July.

SRI R.V.DESHPANDE: I am subject to correction, because I am not an expert in excise. ಹಾಗಾಗಿ ಕಳೆದ ಮೂರು ತಿಂಗಳಿಂದ ತಾವು ಫಿಕ್ಸ್ ಮಾಡಿಲ್ಲ. ಅದರ ಲಾಭವನ್ನು ಅರ್ರ್ಯಾಕ್ ಕಂಟ್ರಾಕ್ಟರ್ಸ್ ತೆಗೆದುಕೊಂಡಿದ್ದಾರೆ. So, I would like to know what have you to say on this? In addition, various Commissions, various High Courts and the Supreme Court have held arrack should not be sold in bulk. Your government has sold in bulk.

ಶ್ರೀ ಎಂ. ಮಹದೇವ್:- ಈ ಚರ್ಚೆಯನ್ನು ನಾಳೆಯಾದರೂ ಮುಂದುವರಿಸಿ. ಇದಕ್ಕೆ ಟೈಮ್ ಫಿಕ್ಸ್ ಮಾಡಿ. ನಾಳೆಯಾದರೂ ಮುಂದುವರಿಸಬಹುದು. ಅಡ್ಜರ್ನ್‌ಮೆಂಟ್ ಮೋಷನ್‌ಗೆ ಸಮಯವನ್ನು ಫಿಕ್ಸ್ ಮಾಡಿ.

ಉಪಾಧ್ಯಕ್ಷರು :- ವಿರೋಧಪಕ್ಷದ ನಾಯಕರ ಭಾಷಣ ಮುಗಿಯಲಿ. ಆಮೇಲೆ ಟೈಮ್ ಫಿಕ್ಸ್ ಮಾಡುತ್ತೇನೆ.

Sri R.V. Deshpande: Wherever arrack is supplied in bulk due to disruption of supply of arrack in sachets, the rate to be charged for such bulk arrack is Rs. 4.55. Duty and sales tax as applicable may also be charged. Please ensure to follow this instructions. This is the instruction of the Excise Commissioner. Then, I have sought in your letter dated so and so, you are permitted to supply arrack in bulk to the licensed arrack contractors of all the distilleries of Bidar, Gulburga, Bellary, Raichur, Belgaum, Dharwar, Bijapur and Uttar Kannada Districts. This order will be in force for 15 days. But this order is still there. I have received a telegram from Hassan, which says that " In Hassan Unit of Mysugar Co. all arrack shops of Holenarsipur and Arkalgud Taluks are dry from the above date. So, the Government rental payment is impossible during that period. Please arrange to supply arrack."ಎಂದು ಟೆಲಿಗ್ರಾಂ ಕೊಟ್ಟು ನನಗೆ ಕಾಪಿ ಕಳಿಸಿದರು. ಇವತ್ತು ಅರ್ರ್ಯಾಕ್ ಅನ್ನು ಬಲ್ಕ್‌ನಲ್ಲಿ ಮಾರಾಟ ಮಾಡಿ contractors are getting Rs. 2.32 benefit. If the arrrack is sold in sachets, Rs. 2.32 they have to pay. Because they are selling in bulk, another benefit of Rs. 2.32 the arrack contractors are getting. ಅಷ್ಟೇ ಅಲ್ಲ, selling arrack in bulk is not correct. Various Commissions, High Courts and the Supreme Court have held that selling of arrack in bulk is dangerous, hazardous to human lives. ಇಷ್ಟು ಗೊತ್ತಿದ್ದರೂ ತಾವು ಮಾರಾಟ ಮಾಡಲಿಕ್ಕೆ ಏಕೆ ಪರ್ಮಿಷನ್ ಕೊಟ್ಟಿರಿ? ತಾವು ಉತ್ತರ ಹೇಳಬಹುದು. You may say, Mysugar and MSIL had no infrastructure. So, without infrastructure why did you take a decision? Without giving it to Mysugar or MSIL, you

could have given it to other contractors. I don't mind. ಎಲ್ಲೆಲ್ಲಿ ಗವರ್ನಮೆಂಟಿಗೆ ರೆವಿನ್ಯೂ ಬರುತ್ತದೆ, ಎಲ್ಲೆಲ್ಲಿ ಕನ್ಸೂಮರ್‌ಗೆ ಬೆನಿಫಿಟ್ಸ್ ಇದೆ we cannot come in the way. We have to uphold those orders. ಆದರೆ ಇವತ್ತು ಬಲ್ಕ್‌ನಲ್ಲಿ ಮಾರಾಟ ಮಾಡುತ್ತಿದ್ದೀರಿ. ಅಲ್ಲಿ ಸ್ಯಾಚೆಟ್ ಕಾಸ್ಟ್‌ನಲ್ಲಿ ಅರ್ರ್ಯಾಕ್ ಕಂಟ್ರ್ಯಾಕ್ಟರ್ಸ್‌ಗೆ ಸೇವ್ ಆಗುತ್ತಿದೆ. ಆ ಹಣ - Rs. 2.32 he is trying to get from the consumer. ಇವತ್ತು ಎಲ್ಲಾ ಹಂತದಲ್ಲಿ ತಾವು ಈ ಎಲ್ಲಾ ಆಜ್ಞೆಯಿಂದ ಕೇವಲ ಅರ್ರ್ಯಾಕ್ ಕಂಟ್ರ್ಯಾಕ್ಟರ್‌ಗೆ ಸಹಾಯ ಮಾಡುವ ಉದ್ದೇಶದಿಂದ ಈ ಕೆಲಸ ಆಗಿದೆಯೇ ವಿನಃ ಇದರಲ್ಲಿ ಸ್ಟೇಟ್ ಎಕ್ಸ್‌ಚೆಕ್ಕರ್ ಕನ್ಸೂಮರ್ ಇಂಟರೆಸ್ಟ್ ಉಳಿದಿಲ್ಲ. ಇವತ್ತು ನಮ್ಮ ಕಾಂಗ್ರೆಸ್(ಐ) ಸ್ನೇಹಿತರು ಮಾನ್ಯ ನರಸಿಂಹರಾವ್‌ಜಿಗೆ ಮತ್ತೊಂದು ಮೆಮೊರ್‍ಯಾಂಡಮ್ ಕೊಟ್ಟಿದ್ದಾರೆ ಅದನ್ನು ತಾವು ಕೇಳಬಹುದು, ನನಗೆ ಎಲ್ಲಿ ಬಂತು ಎಂದು; ತಾವು ಕೊಟ್ಟಿದ್ದೀರಿ.

The memorandum reads thus:

"Dear Sri Narasimha Raoji,

We the members of the Congress(I) Legislature Party charge the Chief Minister of Karnataka, Sri M.Veerappa Moily for having colluded with arrack contractors in irresponsible and illegal method for which he owes an explanation to you, to the legislators and dutifully to the people of Karnataka on allegations, " arrack in sachets, consumers taken for a ride, government interest neglected, shops to arrack contractors....."

This is the memorandum given by the Congress(I) Legislators.

ಇದಕ್ಕೆ ಪ್ರೇಮ ಚಂದ್ರ ಸಾಗರ್ ಚಂದ್ರಶೇಖರ್ ಮಟ್ಟಿ, ಪುಟ್ಟಸ್ವಾಮಿ ಗೌಡ, ಉಮಾಪತಿ ಇವರೆಲ್ಲ ಸೇರಿ ಸಹಿ ಮಾಡಿದ್ದಾರೆ. I will table it on the table of the House also. ಇವತ್ತು ಕಾಂಗ್ರೆಸ್(ಐ) ಲೆಜಿಸ್ಲೇಟರ್ಸ್ ತಾವು ಏನು ಮಾನ್ಯ ಮುಖ್ಯಮಂತ್ರಿಗಳ ಮೇಲೆ ಛಾರ್ಜ್ ಮಾಡಿದ್ದೀರಿ, ಇವತ್ತು ಈ ಅರ್ರ್ಯಾಕ್ ಬಾಟ್ಲಿಂಗ್ ಕ್ಯಾನ್ಸಲ್ ಮಾಡಿ ಸ್ಯಾಚೆಟ್‌ನಲ್ಲಿ ಕೊಟ್ಟಿದ್ದಾರೆ, ಅದರಿಂದ ಲಾಭ ಕೇವಲ ಅರ್ರ್ಯಾಕ್ ಕಂಟ್ರ್ಯಾಕ್ಟರ್ಸ್‌ಗೆ ಆಗಿದೆ. ಸರ್ಕಾರಕ್ಕೆ ಮತ್ತು ಕನ್ಸೂಮರ್‌ಗೆ ಇಲ್ಲ. ಇದರಲ್ಲಿ ನಿಮಗೆ ವಿಶ್ವಾಸ ಇದ್ದರೆ ನನ್ನ ಕಡೆ ಎಲ್ಲ ನಿಮ್ಮ ಸಿಗ್ನೇಚರ್ಸ್ ಇದೆ. ಎಲ್ಲಾ ಇದೆ, ಆದಕಾರಣ ನೀವುಗಳು ನಮ್ಮ ಈ ನೋ-ಕಾನ್ಫಿಡೆನ್ಸ್ ಮೋಷನ್‌ಗೆ ಸಪೋರ್ಟ್ ಮಾಡಬೇಕು.

ಶ್ರೀ ಗೋಪಾಲ ಮುಕುಂದ ಕಾನಡೆ: ಅದಕ್ಕೆಲ್ಲಾ ಮುಂದೆ ಬರುವುದಕ್ಕೆ ಹೋಗಬೇಡಿ; ನಿಮ್ಮದು ಏನು ಇದೆ, ಅದನ್ನು ಹೇಳಿ.

ಶ್ರೀ ಸಿ.ಆರ್. ಸಗೀರ್ ಅಹಮದ್(ಸಣ್ಣ ಕೈಗಾರಿಕೆ ಸಚಿವರು):- ಮಾನ್ಯ ದೇಶಪಾಂಡೆಯವರೆ, ನಿಮ್ಮಲ್ಲಿ ಯಾವುದೇ ಮೆಟೀರಿಯಲ್ ಇಲ್ಲವಾ? ಬರೇ ನಮ್ಮ ಮೇಲಿನ ಮೆಟೀರಿಯಲ್ ತೆಗೆದುಕೊಂಡಿದ್ದೀರಲ್ಲ. ನೀವು ಹೊಸದಾಗಿ ಏನಾದರೂ ಮಾಡಿ; ಇವೆಲ್ಲ ನಾವು ಮಾಡಿ ಆಗಿದೆ. We have a right to present the fact to the party high command.

Don't take the memorandum and highlight again and again. You come out with new facts.

ಶ್ರೀ ಆರ್.ವಿ.ದೇಶಪಾಂಡೆ :- He is worried.

ಶ್ರೀ ಎಂ. ಮಹದೇವ್ :- ಆ ಕಾಪಿ ನಿಮಗೆ ಎಲ್ಲಿ ಸಿಕ್ಕಿತು? ನಮ್ಮ ಸಿಗ್ನೇಚರ್ ಇದ್ದ ಕಾಪಿ ನಿಮಗೆ ಎಲ್ಲಿ ಸಿಕ್ಕಿತು?

ಶ್ರೀ ಆರ್.ವಿ. ದೇಶಪಾಂಡೆ : ನಾನು ಸತ್ಯ ಹೇಳಿದರೆ, ನೀವು ಕಷ್ಟದಲ್ಲಿ ಸಿಕ್ಕಿಕೊಳ್ಳುತ್ತೀರಿ.

ಶ್ರೀ ಎಂ. ಮಹದೇವ್ : ಏನೂ ಇಲ್ಲ, ಹೇಳಿ.

(ಗೊಂದಲ)

ಉಪಾಧ್ಯಕ್ಷರು :- ಮಹದೇವ್ ಅವರೇ, ತಾವು ಕುಳಿತುಕೊಳ್ಳಿ, ಅವರು ಮುಂದುವರಿಸಲಿ.

ಶ್ರೀ ಎಂ. ಮಹದೇವ್ :- ನಿಮಗೆ ಅದನ್ನು ಯಾರು ಸಪ್ಲೈ ಮಾಡಿದರು, ಅದು ನಿಮಗೆ ಹೇಗೆ ಸಿಕ್ಕಿತು ? ಸತ್ಯ ಹೇಳುತ್ತೀರಾ? ನೀವು ಸತ್ಯ ಹೇಳುತ್ತೀರಿ ಎಂದು ನಮ್ಮ ನಂಬಿಕೆ. ಇಲ್ಲ ಎಂದರೆ ನೀವು ಸುಳ್ಳುಗಾರರು ಎಂದು ನಾವು ಹೇಳಬೇಕಾಗುತ್ತದೆ.

ಶ್ರೀ ಆರ್.ವಿ. ದೇಶಪಾಂಡೆ :- ಎಐಸಿಸಿ ಅಧ್ಯಕ್ಷರಿಗೆ ನೀವುಗಳು ಬರೆದ ಪತ್ರ ನಮಗೆ ಯಾವ ಮೂಲದಿಂದ ಬಂತೆಂದು ಸದಸ್ಯರಾದ ಮಹದೇವುರವರು ಕೇಳಬಾರದು.

ಶ್ರೀ ಎಂ. ಮಹದೇವ್: ಮಾನ್ಯ ವಿರೋಧಪಕ್ಷದ ನಾಯಕರು ಮಾತನಾಡುವುದಕ್ಕೆ ನಮ್ಮದೇನೂ ಅಡ್ಡಿ ಇಲ್ಲ. ಅವರು ಸತ್ಯವನ್ನು ಹೇಳಲಿ. ನಾವು ನಮ್ಮ ಪಕ್ಷದವರಾದ ಎಐಸಿಸಿ ಅಧ್ಯಕ್ಷರಿಗೆ ನಾವು ಮನವಿ ಪತ್ರ ಕೊಟ್ಟಿದ್ದು, ಅದು ನಿಮ್ಮ ಬಳಿ ಹೇಗೆ, ಎಲ್ಲಿಂದ ಬಂತು?

ಶ್ರೀ ಆರ್.ವಿ. ದೇಶಪಾಂಡೆ:- ಆ ಪತ್ರದ ಪ್ರತಿ ನಮಗೆ ಹೇಗೆ, ಎಲ್ಲಿಂದ ಬಂತು ಎನ್ನುವುದನ್ನು ನಾನು ಹೇಳಬೇಕೆಂದೇನೂ ಇಲ್ಲ. ಆದರೂ ಮಹದೇವುರಂತಹವರ ಇಂಟ್ರೆಸ್ಟ್ ಅನ್ನು ನಾವು ಕಾಯ್ದುಕೊಂಡು ಹೋಗಬೇಕಾಗುತ್ತದೆ. ಹಾಗಾಗಿ, ನಾನು ಕೆಲವು ವಿಷಯವನ್ನು ಎಕ್ಸ್‌ಪೋಸ್ ಮಾಡುವುದಿಲ್ಲ.

ಶ್ರೀ ಎಂ. ಮಹದೇವು: ಪರವಾಗಿಲ್ಲ ; ಎಕ್ಸ್‌ಪೋಸ್ ಮಾಡಿ. ಯಾವ ಮೂಲದಿಂದ ತಮಗೆ ಆ ಪತ್ರ ಬಂದಿತೆನ್ನುವುದನ್ನು ಹೇಳಿ.

ಶ್ರೀ ಕೆ.ಎಸ್. ಕಾಳಮರಿಗೌಡ:- ನೀವು ನಿಜವಾದ ವಿರೋಧಪಕ್ಷದವರೇ ಆಗಿದ್ದರೆ, ನಮ್ಮನ್ನು ಇಕ್ಕಟ್ಟಿಗೆ ಸಿಲುಕಿಸಬೇಕೆಂಬ ಉದ್ದೇಶ ನಿಮಗಿದ್ದರೆ ನೀವು ಈಗ ಹೆಸರುಗಳನ್ನು ಹೇಳಲೇಬೇಕಾಗುತ್ತದೆ.

(ಗೊಂದಲ)

ಶ್ರೀ ಆರ್.ಎನ್. ನಾಯಕ್: ನಿಮಗಿದ್ದರೆ ಆ ಪತ್ರದ ಪ್ರತಿ ನಿಮಗೆ ಎಲ್ಲಿಂದ ಬಂತು ಎನ್ನುವುದನ್ನು ನೀವು ಹೇಳಬಾರದು. ಅದು ಸತ್ಯವಿದೆ. ಏಕೆಂದರೆ, ನಿಮಗೆ ಅನಂತರ ಪ್ರತಿ ಸಿಗುವುದಿಲ್ಲ, ಅದು ಸಹಜ. ಆದರೆ, ನೀವು ಹೀಗೆಯೇ ಮಾತನಾಡಬೇಕೆಂದು ನಿಮಗೆ ಗುಪ್ತವಾದ ನಿರ್ದೇಶನ ಬಂದಿದೆಯೆಂದು ನಾನು ಹೇಳುತ್ತೇನೆ. ನಿಮಗಿತ್ತಿರುವ ನಿರ್ದೇಶನದ ಪ್ರಕಾರವೇ ನೀವು ಮಾತನಾಡುತ್ತಿದ್ದೀರೆಯೇ ಹೊರತು ನಿಮ್ಮ ಪಕ್ಷದ ವತಿಯಿಂದ ಮಾತನಾಡುತ್ತಿಲ್ಲ. ಆದರೆ, ಈ

ಮಾಹಿತಿ ನನಗೆ ಎಲ್ಲಿಂದ ಬಂತೆನ್ನುವುದನ್ನು ನಾನು ಹೇಳುತ್ತೇನೆ. ಆದರೆ ಈ ಮಾಹಿತಿ ನನಗೆ ಎಲ್ಲಿಂದ ಬಂತು ಅಂತ ನಾನು ಹೇಳುವುದಿಲ್ಲ.

ಶ್ರೀ ಎಂ.ಮಹದೇವು: ವಿರೋಧ ಪಕ್ಷದ ನಾಯಕರು ಮಾತನಾಡುವುದರಲ್ಲಿ ನಮ್ಮದೇನೂ ಅಭ್ಯಂತರವಿಲ್ಲ. ತಾವು ವಿರೋಧ ಪಕ್ಷದ ನಾಯಕರಾಗಿ ಸತ್ಯ ಮಾತನಾಡುವುದಾದರೆ ಆದರೆ, ಆ ಪತ್ರದ ಪ್ರತಿ ತಮಗೆ ಎಲ್ಲಿಂದ ಬಂತು ಎನ್ನುವುದನ್ನಾದರೂ ಹೇಳಿ.

ಶ್ರೀ ಆರ್.ವಿ.ದೇಶಪಾಂಡೆ:- ನಾನು ಸದನದಲ್ಲಿ ಮಾತನಾಡಬೇಕಾದರೆ ಯಾರಿಂದ ನಿರ್ದೇಶನ ತೆಗೆದುಕೊಳ್ಳಬೇಕು, ಯಾರಿಂದ ನಿರ್ದೇಶನ ತೆಗೆದುಕೊಳ್ಳಬಾರದೆಂಬುದು ನನಗೆ ಚೆನ್ನಾಗಿ ಗೊತ್ತಿದೆ. ನಾನು ಏನು ಸದನದಲ್ಲಿ ಹೇಳಿದ್ದೇನೆ, ಅದನ್ನು ತಾವು ಒಪ್ಪಿಕೊಂಡಿದ್ದಕ್ಕೆ ನಮಗೆ ನೀವು ಬೆಂಬಲ ನೀಡಿ ಎಂದು ಹೇಳುತ್ತಿದ್ದೇನೆ. ನಾನು ಇವೊತ್ತು ಮುಖ್ಯಮಂತ್ರಿಗಳ ವಿರುದ್ಧ ಏನು ವಾದ ಮಾಡಿದ್ದೇನೆ, ಈ ವ್ಯವಹಾರದಲ್ಲಿ ಭ್ರಷ್ಟಾಚಾರವಾಗಿದೆ. lot of money has been exchanged. ಏನು ಚಾರ್ಜ್ ಮಾಡಿದ್ದೇನೆ, ಅದೇ ಚಾರ್ಜ್ ಅನ್ನು ನೀವು ನರಸಿಂಹರಾವ್‌ರವರಿಗೆ ಕೊಟ್ಟಿರಿ, ನಿಮ್ಮ ಎಐಸಿಸಿ ಅಧ್ಯಕ್ಷರಿಗೆ ಕೊಟ್ಟಿರಿ. ಆ ರೀತಿ ಕೊಟ್ಟಿರುವ ಪತ್ರದ ಪ್ರತಿ ನಮ್ಮ ಬಳಿ ಹೇಗೆ ಬಂತು ಎನ್ನುವುದರ ಬಗ್ಗೆ ನಿಮಗೇಕೆ ಚಿಂತೆ? ನಿಮಗೆ ಧೈರ್ಯ—ಸ್ಥೈರ್ಯವಿದ್ದರೆ ನಮಗೆ ಬೆಂಬಲ ನೀಡಿ ಎಂದು ಹೇಳುತ್ತಿದ್ದೇನೆ.

ಶ್ರೀ ಎಂ.ಮಹದೇವ್: ನಾವು ನಮ್ಮ ಪಕ್ಷದ ಅಧ್ಯಕ್ಷರಿಗೆ ಬರೆದಿರುವ 'ಕಾನ್‌ಫಿಡೆನ್ಷಿಯಲ್ ರೆಪ್ರಸೆಂಟೇಷನ್' ನಮಗೆ ಮತ್ತು ಅಧ್ಯಕ್ಷರಿಗೆ ಮಾತ್ರ ಗೊತ್ತು. ಆ ಪತ್ರ ನಿಮಗೆ ಹೇಗೆ ಬಂತು ಎಂದು ಕೇಳುತ್ತಿದ್ದೇನೆ.

ಶ್ರೀ ಬಿ.ಹೆಚ್.ಬನ್ನಿಕೋಡ್: ಮಾನ್ಯ ಉಪಾಧ್ಯಕ್ಷರೆ, 'ನಮಗೆ ಮೆಮೊರಾಂಡಮ್ ಬಂದಿದೆ, ನಾನು ಏನು ಹೇಳುತ್ತೇನೆ, ಅದು ಸತ್ಯ, ಈ ಮೆಮೊರಾಂಡಮ್ ಹೈಕಮಾಂಡಿಗೆ ಕೊಟ್ಟಿದೆ, ನೀವು ಒಪ್ಪಿಕೊಳ್ಳಿರಿ' ಎಂದು ಏನು ನಮ್ಮ ವಿರೋಧಪಕ್ಷದ ನಾಯಕರು ಹೇಳಿದರು. ಅದಕ್ಕೆ, ಆ ಪತ್ರದ ಪ್ರತಿ ಎಲ್ಲಿಂದ ಬಂತು? ಎಂದು ಮಾನ್ಯ ಸದಸ್ಯ ಸ್ನೇಹಿತರು ಕೇಳುತ್ತಿದ್ದಾರೆ. ಈ ಕಾಂಗ್ರೆಸ್ ಸದಸ್ಯರು ಏನು ಮಾಡುವುದಕ್ಕೆ ಹೊರಟಿದ್ದಾರೆನ್ನುವುದು ರಾಜ್ಯದ ಜನತೆಗೆ ಗೊತ್ತಾಗಲಿ; ಆ ಪತ್ರದಲ್ಲಿ ಪಕ್ಷದ ನಾಯಕತ್ವದ ಕುರಿತು ಅವಿಶ್ವಾಸದ ಸಂಗತಿ ಇದೆ, ಸತ್ಯ ಸಂಗತಿಗಳಿವೆ... ರಾಜ್ಯಕ್ಕೆ ಅನ್ಯಾಯವಾಗಿದೆ, ಭ್ರಷ್ಟಾಚಾರ ತಾಂಡವವಾಡುತ್ತಿದೆ. ರಾಜ್ಯದ ಹಿತದೃಷ್ಟಿಯಿಂದ ಅವರು ನಮಗೆ ಬೆಂಬಲ ಕೊಡುವ ಕೆಲಸ ಮಾಡಲಿ.

ಶ್ರೀ ಎಂ.ಮಹದೇವ್: ಬನ್ನಿಕೋಡ್‌ರವರೆ, ನಿಮ್ಮಿಂದ ನಾವು ಕಲಿಯಬೇಕಾದ್ದೇನೂ ಇಲ್ಲ. ನಾವು ಸರ್ಕಾರಕ್ಕೆ ರೆಪ್ರೆಸೆಂಟೇಷನ್ ಕೊಟ್ಟಿದ್ದರೆ ಕೇಳುತ್ತಿರಲಿಲ್ಲ; ನಾವು ಮನವಿಯನ್ನು ಕೊಟ್ಟಿರುವುದು ಕಾಂಗ್ರೆಸ್ ಪಕ್ಷದ ಅಧ್ಯಕ್ಷರಿಗೆ. ಅವರಿಗೆ ಕೊಟ್ಟಂಥ ಮನವಿ ಪತ್ರದ ಪ್ರತಿ ನಿಮಗೆ ಹೇಗೆ ನೇರವಾಗಿ ಬಂತು?

ಶ್ರೀ ಎಂ.ನಾರಾಯಣಸ್ವಾಮಿ: ಮಾನ್ಯ ಉಪಾಧ್ಯಕ್ಷರೆ, ಈ ಕಾಂಗ್ರೆಸ್ ಸದಸ್ಯರು ಸೀರೆ ಬಿಚ್ಚಿರುವುದು ಸಂತೆಯಲ್ಲಿ, ಸಂತೆಯಲ್ಲಿ ಯಾರು ನೋಡಿದರು ಎಂದರೆ ಎಲ್ಲರೂ ನೋಡಿದ್ದಾರೆ. ನಮಗೆ ಹೇಗೆ ಮಾಹಿತಿ ಸಿಕ್ಕಿತು ಎಂಬುದನ್ನು ಇವರು ಕೇಳುತ್ತಿದ್ದಾರೆ. ಆದರ ಬಗ್ಗೆ ನಿಮಗೆ ಚಿಂತೆ ಬೇಡ.

ಶ್ರೀ ಆರ್.ವಿ.ದೇಶಪಾಂಡೆ :- ನಮಗೆ ಪತ್ರ ಎಲ್ಲಿಂದ, ಹೇಗೆ ತರಿಸಿಕೊಳ್ಳಬೇಕೆನ್ನುವುದು ವಿರೋಧಪಕ್ಷ ಮಾಡಬೇಕಾದ ಕೆಲಸ. ನಾವು ಮೂಲದಿಂದ ಮಾಹಿತಿಯನ್ನು ತರಿಸಿಕೊಳ್ಳುತ್ತೇವೆಂಬುದರ ಬಗ್ಗೆ ನಿಮಗೆ ಚಿಂತೆ ಇರಬಾರದು. To the contrary ------- ನೀವು ಅಪ್ರಿಷಿಯೇಟ್ ಮಾಡಬೇಕು. ನೀವು ನಿಮ್ಮ ಕಾಂಗ್ರೆಸ್ ಅಧ್ಯಕ್ಷರಿಗೆ ಬರೆದಿರುವ ಮೆಮೊರಾಂಡಮ್ ನಮ್ಮ ಕೈಯಲ್ಲಿದೆ, ಜೊತೆಗೆ ಸಿಗ್ನೇಟರಿಗಳು ಕೂಡ ಇವೆ. ಹಾಗಾಗಿ, ನಾನು ಹೇಳುತ್ತಿದ್ದೇನೆ: ತಾವು ಏನು ಮಾಡಿದ್ದೀರಿ, ಅದು ತಪ್ಪೆಂದು ನಾನು ಹೇಳುವುದಿಲ್ಲ, ತಾವು ಸರಿಯಾದ ಕೆಲಸವನ್ನೇ ಮಾಡಿದ್ದೀರಿ. ಆದಕ್ಕಾಗಿ, ನಾನು ನಿಮ್ಮನ್ನು ಅಭಿನಂದಿಸುತ್ತೇನೆ. ಏಕೆಂದರೆ, ರಾಜ್ಯದ ಬೊಕ್ಕಸದ ಬಗ್ಗೆ ನಿಮಗೆ ಚಿಂತನೆ ಇದೆ, ಗ್ರಾಹಕರ ಬಗ್ಗೆ ನಿಮಗೆ ಚಿಂತನೆ ಇದೆ; ಆದುದರಿಂದಲೇ, ತಾವು ಈ ರೀತಿ ಮಾಡಿದ್ದೀರಿ ನಿಮ್ಮನ್ನು ನಾನು ಟೀಕಿಸುತ್ತಿಲ್ಲ. ನಾನು ಮುಖ್ಯಮಂತ್ರಿಯವರನ್ನು ಅಟ್ಯಾಕ್ ಮಾಡುತ್ತಿದ್ದೇನೆ. ಇದಕ್ಕೆ ನೀವು ಬೇಸರಪಡುವ ಕಾರಣವಿಲ್ಲ.

(ಗೊಂದಲ)

SRI R.V.DESHPANDE:- I would like to make

(ಗೊಂದಲ)

ಶ್ರೀ ಸಿ.ಬೈರೇಗೌಡ :- ಹಿಪ್ಪೊಕ್ರ್ಯಾಟ್ಸ್ ಯಾರು ಎನ್ನುವುದು ಈ ರಾಜ್ಯದ ಜನತೆಗೆ ಗೊತ್ತಾಗಲಿ ಬಿಡಿ; ಆತ್ಮವಂಚನೆಯನ್ನು ಯಾರು ಯಾರಿಗೆ ಮಾಡಿಕೊಳ್ಳುತ್ತಿದ್ದಾರೆ ಎನ್ನುವ ಬಗ್ಗೆ ಜನತೆಗೆ ಗೊತ್ತಾಗಲಿ ಬಿಡಿ; ಅದು ನಿಜವೋ? ಅಥವಾ ಅಲ್ಲವೋ? ಎನ್ನುವುದನ್ನು ಹೇಳಲಿ.

(INTERRUPTIONS)

ಶ್ರೀ ಆರ್.ವಿ.ದೇಶಪಾಂಡೆ :- ಇವತ್ತು ಏನು ಮುಖ್ಯಮಂತ್ರಿಗಳ ಮೇಲೆ ಅಬ್ಕಾರಿ ಲಾಬಿಯ ಬಗ್ಗೆ ವಿಚಾರ ಬರುತ್ತಿದೆ ಮತ್ತು ಇವತ್ತು ಏನಾಗಿದೆ ಎಂದರೆ

The Government of India decided to decontrol molases. The Government of India announced during the month of May that they are going to decontrol molases. In Parliament it was announced on 10.6.1993. At that time auctions were going on in our State. As per conventions auctions have to be held during the month of May. Especially Bangalore auctions are held first. This time auctions were held in June and the *Bangalore auctions* were held last. I would like to know from the Chief Minister as to why it was done so? Afterwards, in the notification they have fixed the rate as Rs. 3.89 ps. per litre. ಸಕ್ಕರೆ ಫ್ಯಾಕ್ಟರಿಯಿಂದ ಮೊಲ್ಯಾಸಸ್‌ನ್ನು ತೆಗೆದುಕೊಂಡು ಅದನ್ನು ಸ್ಪಿರಿಟ್ ಮಾಡಿ ಏನು ಸಾರಾಯಿಯನ್ನು ಪಡೆಯುತ್ತಾರೋ ಅದರ ಬೆಲೆಯನ್ನು 3.89 ಪೈಸೆ ಎಂದು ನಿಗದಿ ಮಾಡಿದ್ದಾರೆ. ಇದನ್ನು ಯಾವ ಆಧಾರದ ಮೇಲೆ ಮಾಡಿದರು?

What is the basis? Consequent upon the announcement of the decontrol by the Government of India there is price increase. ಹರಾಜು

ಜೂನ್‌ನಲ್ಲಿ ನಡೆಯುತ್ತದೆ, ಜೂನ್ 10ರಲ್ಲಿ ಭಾರತ ಸರ್ಕಾರದವರು ಪಾರ್ಲಿಮೆಂಟ್‌ನಲ್ಲಿ ಇದರ ಬಗ್ಗೆ ಪ್ರಕಟಣೆ ಮಾಡುತ್ತಾರೆ. ಅದೇನೆಂದರೆ

The Government of India said that they are going to announce the date of decontrol of molases in due course. They have also subsequently announced it on the floor of the Parliament. And here the Excise Commissioner fixes the rate as Rs.3.89 per litre. Can they sell it at the rate of Rs. 3.89 today? The price of molases has gone up because of the decontrol. Now, the Government cannot afford to give it at the rate of Rs. 3.89 per litre to contractors; but the contractors will never pay a pie more because there is an agreement for one year and they will have to sell it at Rs.3.89 per litre today. The cost of molases will be doubled now. The Government, according to me, on an average on every litre, will be losing between Rs 1 1/2 to 2 because of the decision not to increase the price of molases even after the decontrol of molases by the Government of India. There is a loss to the tune of Rs.20-25 crores to the exchequer. Who is going to reimburse? Whether the Chief Minister assures me that in case it is more he will recover it from contractors? They will not give more; they will say no; because there is an agreement. Consequent on the decontrol of molases, the price of molases will be increased, there will be hike in the price of spirit and the cost of manufacturing of arrack will go up. As already said there is a revenue loss to the exchequer to the tune of Rs.25 crores. Only in arrack there is a loss to the extent of Rs.24 crores which is Rs. 9 difference per bulk litre and the same has not been passed to the consumer. There is a gain of Rs. 94.8 crores to contractors. Now the Chief Minister is telling that they have fixed the market price. I believe it, Even if you take into consideration that it is Rs. 70/-, the excise contractors will be making Rs. 30 per bulk litre. That will be coming to about Rs.300 and add crores. So, total loss consequent upon the decontrol of molases will be Rs.48 crores to the Government. Rs.94 crores will be pocketed by contractors in addition to Rs.300 crores benefit which they enjoy.

ಇದನ್ನು ನಾನು ಕೇಳುತ್ತಿದ್ದೇನೆ. ನಿಮಗೆ ಅಧಿಕಾರದಲ್ಲಿ ಉಳಿಯುಲಿಕ್ಕೆ ಯಾವ ನೈತಿಕ ಹಕ್ಕೂ ಇಲ್ಲ. This is a scandal of the century. ಇದನ್ನು ನೋಡುವಾಗ ಬೇರೆ ಏನೂ ಇಲ್ಲವೆಂದು

ಅನಿಸುತ್ತದೆ. But, today the Chief Minister owes an explanation not only to this House, but to the people of this State. Why he really cancelled bottling contracts and went in for sachets? If his intention is to help people I appreciate it, but the intention is otherwise; it is beyond doubt. I have no hesitation in saying that the Hon'ble Chief Minister has lost the confidence of this house.

ಇವತ್ತು ಕಾಂಗ್ರೆಸ್ ಶಾಸಕರೂ ಒಪ್ಪಿಕೊಳ್ಳುತ್ತಾರೆ. ಮಾನ್ಯ ಮುಖ್ಯಮಂತ್ರಿಯವರ ಆಡಳಿತ ಕುಸಿದುಬಿದ್ದಿದೆ; ಅಭಿವೃದ್ಧಿ ಕೆಲಸವಾಗುತ್ತಿಲ್ಲ. ಭ್ರಷ್ಟಾಚಾರ ಬೆಳೆದಿದೆ. ಮಾನ್ಯ ಮುಖ್ಯಮಂತ್ರಿಗಳು ಯಾರ ಮೇಲೂ ವಿಶ್ವಾಸವಿಡುತ್ತಿಲ್ಲ. ಶಾಸಕರ ಕೆಲಸವಾಗುತ್ತಿಲ್ಲ. ಮಂತ್ರಿಗಳು ಬೇಜವಾಬ್ದಾರಿಯಾಗಿದ್ದಾರೆ. ಮಂತ್ರಿ ಮಂತ್ರಿಗಳಲ್ಲಿ ಜಗಳ ಇದೆ. ಉಪಮುಖ್ಯಮಂತ್ರಿ ಮತ್ತು ಕಂದಾಯ ಸಚಿವರಿಬ್ಬರೂ ಹಿರಿಯ ಸಚಿವರಾಗಿ ಅವರೇ ಬೆಂಗಳೂರಿನ ಪ್ಯಾಲೆಸ್‌ನಲ್ಲಿ ನಡೆದ ಭಿನ್ನಮತೀಯರ ಸಭೆಗೆ ಹೋದರು. ಏನು ನಿಮ್ಮಲ್ಲಿ ಸೌಹಾರ್ದತೆ ಇದೆ, ಹೊಂದಾಣಿಕೆ ಇದೆ ಎಂದು ಹೇಳಿದರೆ ಆದನ್ನು ನಾನು ನಂಬಲಿಕ್ಕೆ ಸಾಧ್ಯವಿದೆಯೇ? ನೀವು ನಿಮ್ಮ ಕಾನ್‌ಷಿಯಸ್‌ನಿಂದ ಹೇಳಿ. ನಾವು ಬಹಳ ಸಮರ್ಥ ಇದ್ದೀವೆಂದು ಹೇಳಿ. ನೀವು ಹಾಗೆ ಹೇಳಿದರೆ ನನ್ನದೇನೂ ಅಬ್ಜೆಕ್ಷನ್ ಇಲ್ಲ. ಆದರೆ ಜನ ನಿಮ್ಮ ಮಾತನ್ನು ನಂಬಬೇಕಲ್ಲ.

ಶ್ರೀ ಹಾರನಹಳ್ಳಿ ರಾಮಸ್ವಾಮಿ(ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : - ಹಳೆ ಮೈಸೂರಿನಲ್ಲಿ 1948ರಿಂದ ಕಾಂಗ್ರೆಸ್ ಅಧಿಕಾರಕ್ಕೆ ಬಂತು. ಈ 45 ವರುಷಗಳಲ್ಲಿ ಅನೇಕ ಮುಖ್ಯಮಂತ್ರಿಗಳು ಅನೇಕ ಕಾಂಗ್ರೆಸ್ಸಿನವರು ಅಧಿಕಾರ ಮಾಡಿದರು. ಜನತಾ ಪಕ್ಷದವರಾದ ನೀವೂ ಸಹ ಮಾಡಿದಿರಿ. ಎಲ್ಲಾ ಕಾಲದಲ್ಲಿಯೂ ಅಧಿಕಾರರೂಢ ಪಕ್ಷಗಳಲ್ಲಿ ಸ್ವಲ್ಪ ವೈಬ್ರೇಷನ್ಸ್ ಇದ್ದೇ ಇರುತ್ತದೆ ಅದನ್ನೆಲ್ಲಾ ದೊಡ್ಡದು ಮಾಡಿಕೊಂಡು ಹೋಗುವುದು ಸರಿಯಲ್ಲ. This is a part of vibrant democracy. You should accept that checks and balances are there in all the parties within the Party.

(ಗೊಂದಲ)

ಶ್ರೀ ಹೆಚ್.ಏಕಾಂತಯ್ಯ : - ಅಂತಹ ಎಲ್ಲಾ ಸಂದರ್ಭದಲ್ಲೂ ಸಹ ವಿರೋಧಪಕ್ಷದಲ್ಲಿ ಕುಳಿತು ಹೇಳಿದಂತಹ ಮಾತನ್ನೇ ನಾವು ಹೇಳುತ್ತಿದ್ದೇವೆ. ತಾವು ಸಾವಧಾನವಾಗಿ ಕೇಳಿ.

ಶ್ರೀ ಹಾರನಹಳ್ಳಿ ರಾಮಸ್ವಾಮಿ : - ನೀವು ಏನೇ ಮಾಡಿದರೂ ಕೂಡ ನಾವೆಲ್ಲ ಒಂದೇ ಅದು ನಿಮ್ಮ ವಿರುದ್ಧ.

ಶ್ರೀ ಆರ್.ವಿ.ದೇಶಪಾಂಡೆ : - 12 ಜನ ಶಾಸಕರನ್ನು ಸಸ್ಪೆಂಡ್ ಮಾಡಿದಿರಿ. ಚಾಕುಚೂರಿ ಕಲ್ಚರ್ ನಡೆಯುತ್ತಿದೆ. ಇದೇ ನಿಮ್ಮ ಸಂಸ್ಕೃತಿಯಾಗಿದೆ. ನಿಮ್ಮದಿಲ್ಲವೆಂದು ನನಗೆ ಗೊತ್ತು. ಅದು ಇದ್ದರೆ ನಿಮಗೇನು ಅರ್ಹತೆ ಇದೆ ಉಳಿಯಲಿಕ್ಕೆ? ಮಾನ್ಯ ಮುಖ್ಯಮಂತ್ರಿಗಳು ಸಂಧಾನದ ಮಾತನ್ನಾಡುತ್ತಾರೆ. ಇನ್ನೂ ಮಾತುಕತೆ ಮಾಡುತ್ತೇವೆ ಮಾತುಕತೆ ಮಾಡುತ್ತೇವೆಂದು ಹೇಳುತ್ತಾರೆ. ಆದರೆ ಕಂದಾಯ ಸಚಿವರು ಇವರ ಮಾತಿನ ಮೇಲೆ ಒಪ್ಪಿಕೊಂಡ ಹಾಗೆ ಕಾಣುವುದಿಲ್ಲ. ಇವತ್ತು ಉಪ

ಮುಖ್ಯಮಂತ್ರಿಗಳ ಸ್ಟೇಟ್‌ಮೆಂಟನ್ನು ನಾನು ಓದಿದ್ದೇನೆ. ಬರೀ ಮಾತನಾಡಿದರೆ ಏನು ಪ್ರಯೋಜನವಿದೆ? I am a Minister, I have to go to the Chief Minister if he calls.

ಈ ರೀತಿಯ ರಿಲೇಷನ್ಸ್ ನಿಮ್ಮಲ್ಲಿದ್ದರೆ ಅದು ಸರಿಯಾಗುವುದಿಲ್ಲ. ಅವರು ಸಚಿವ ಸಂಪುಟದ ಸಭೆಗೆ ಬರುವುದಿಲ್ಲ. If a Minister is sick or does not come being in Head quarters and do not attend the Cabinet meeting, What I am to say. Do you say, that is the caution; do you agree that there is collective responsibility? ಕಲೆಕ್ಟೀವ್ ರೆಸ್ಪಾನ್ಸಿಬಿಲಿಟಿ ನಿಮ್ಮಲ್ಲಿ ಇದ್ದಿದ್ದರೆ, ನೀವು ಸಮಾಲೋಚನೆ ಮಾಡಿ ಒಂದು ಅಂತಿಮ ನಿರ್ಣಯಕ್ಕೆ ಬಂದಿದ್ದಿರೆ ಪರಿಸ್ಥಿತಿ ಇವತ್ತು ಈ ಮಟ್ಟಕ್ಕೆ ಬರುತ್ತಿರಲಿಲ್ಲ. ಮಾನ್ಯ ಮುಖ್ಯಮಂತ್ರಿಗಳಲ್ಲಿ ಯಾವುದೇ ಕರೇಜ್ ಉಳಿದಿಲ್ಲ. ಇಷ್ಟೊಂದು ಡಿಸಿಡೆಂಟ್ಸ್ ಆಕ್ಟಿವಿಟೀಸ್ ನಡೆಯುತ್ತಿದ್ದರೂ ಅವರು ಏನು ಕ್ರಮವನ್ನು ತೆಗೆದುಕೊಂಡಿದ್ದಾರೆ? Ministers ಯಾರಿರಬೇಕು? ಯಾರಕಡೆ ಯಾವ ಪೋರ್ಟ್‌ಫೋಲಿಯೋ ಇರಬೇಕು ಎಂಬುದನ್ನು ನಾನು ಹೇಳುವುದಕ್ಕೆ ಹೋಗುವುದಿಲ್ಲ. I am not going into that. But, It is the Chief Minister who should look into that. when the total administration is collapsing, when you are in a collusion course, the Chief Minister is not able to take any action against anybody. ಇವತ್ತು 41 ಜನ ಮಂತ್ರಿಗಳನ್ನು ಮಾಡಿಕೊಂಡಿದ್ದೀರಿ. ಒಬ್ಬೊಬ್ಬರ ಕೈಯಲ್ಲಿ ಒಂದೊಂದು ಪೋರ್ಟ್‌ಫೋಲಿಯೋ ಕೊಟ್ಟಿದ್ದೀರಿ. ಒಬ್ಬೊಬ್ಬ ಮಂತ್ರಿಗೆ ಒಂದು ತಿಂಗಳಿಗೆ 2-3 ಫೈಲುಗಳೂ ಬರುವುದಿಲ್ಲ. ಕ್ಯಾಬಿನೆಟ್ ಮಿನಿಸ್ಟರ್ಸ್ ಅಂತ ಮಾಡಿದ್ದೀರಿ. ಇದರಲ್ಲಿ ಏನು ಅರ್ಥವಿದೆ. ನಾಲ್ಕು ಜನ ಮಂತ್ರಿಗಳಿಗೆ ಒಬ್ಬ ಸೆಕ್ರೆಟರಿ. ಇದು ಅವರಿಗೆ ಸಾಕಾಗಿ ಹೋಗಿದೆ. ಒಂದೇ ಸಮಯದಲ್ಲಿ 4 ಜನ ಮಂತ್ರಿಗಳೂ ಒಬ್ಬ ಸೆಕ್ರೆಟರಿಯನ್ನು ಕೇಳಿದರೆ ಅವರು ಎಲ್ಲಿ ಹೋಗಬೇಕು? ಯಾವ ಛಾರ್ಜ್ ಮಾಡಿದರೂ ನಿಮ್ಮ ಮುಖ್ಯಮಂತ್ರಿಗಳು ಕೇಳುವುದಿಲ್ಲ. ಇವತ್ತು ಎಲ್ಲ ಹಂತದಲ್ಲಿ, ಎಲ್ಲ ವಿಚಾರದಲ್ಲೂ ಈ ಸರ್ಕಾರ ಇಷ್ಟೊಂದು ವಿಫಲವಾಗಿದೆ ಎಂದರೆ ನಾವು ಈ ನೋ ಕಾನ್‌ಫಿಡೆನ್ಸ್ ಮೋಷೇನ್ನನ್ನು ಮೂವ್ ಮಾಡದೇ ವಿಧಿಯೇ ಇಲ್ಲ. ಹಾಗಾಗಿದೆ. We have no other alternative, we have no other way but to move this No Confidence Motion. I am not encouraging defections. I do not want to encourage defections. I am against defections.

ಶ್ರೀ ಪಿ.ಜಿ.ಆರ್. ಸಿಂಧ್ಯ : – ಮಾನ್ಯ ಅಧ್ಯಕ್ಷರೆ, ನಿನ್ನೆಯ ದಿವಸ ಮಾನ್ಯ ಮುಖ್ಯಮಂತ್ರಿಗಳು ಬಳ್ಳಾರಿಯಲ್ಲಿ ಮಾತನಾಡುತ್ತಾ ತನ್ನನ್ನು ತಾನೇ ಚಂದ್ರಗುಪ್ತನಿಗೆ ಹೋಲಿಕೆ ಮಾಡಿಕೊಂಡು ಚಂದ್ರಗುಪ್ತ ಮಗಧರಾಜ್ಯದ ಮೇಲೆ ಹೋರಾಟ ಮಾಡಿ ಸೋತುಬರುವಾಗ ತನ್ನ ಸಾಮ್ರಾಜ್ಯ ಯಾವರೀತಿ ಇದೆ ಎಂದು ನೋಡುವುದಕ್ಕೆಂದು ಒಂದು ಗುಡಿಸಲಿಗೆ ಹೋಗುತ್ತಾನೆ. ಹೊಟ್ಟೆ ಹಸಿದಿರುತ್ತದೆ. ಅಲ್ಲಿ ಒಬ್ಬ ಅಜ್ಜಿ ಅಡಿಗೆಯನ್ನು ಮಾಡುತ್ತಿರುತ್ತಾಳೆ. ದೋಸೆಯನ್ನು ಅರ್ಧದಲ್ಲೇ ತೆಗೆದುಕೊಳ್ಳುವುದಕ್ಕೆ ಚಂದ್ರಗುಪ್ತ ಪ್ರಯತ್ನಮಾಡುತ್ತಾನೆ. ಇದರಿಂದ ಚಂದ್ರಗುಪ್ತನಿಗೆ ಬಹಳ ನೋವಾಗುತ್ತದೆಂಬ ಮಾತನ್ನು ಮಾನ್ಯ ಮುಖ್ಯಮಂತ್ರಿ ಯವರು ಹೇಳಿದ್ದಾರೆ. ಅವರು ಬಹಳ ಚೆನ್ನಾಗಿ ಹೋಲಿಕೆಯನ್ನು ಮಾಡಿ ಹೇಳಿದ್ದಾರೆ. ನಾನು ಅಧಿಕಾರಕ್ಕೆ ಬಂದಿದ್ದೇನೆ. ಹೇಗಾದರೂ ಮಾಡಿ ಈ

ಅಧಿಕಾರವನ್ನು ಉಳಿಸಿಕೊಳ್ಳಬೇಕೆಂಬ ಉದ್ದೇಶದಿಂದ ಬಿಸಿ ದೋಸೆಯನ್ನೋ, ವಡೆಯನ್ನೋ, ಇಡ್ಲಿಯನ್ನೋ ತಿನ್ನುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಆದರೆ ನಮ್ಮ ಮಗಧ ರಾಜರು ಮಾತ್ರ ಬಹಳ ಸುಖವಾಗಿದ್ದಾರೆ. ಮುಖ್ಯಮಂತ್ರಿಗಳು ಬಹಳ ಚೆನ್ನಾಗಿ ಹೋಲಿಕೆ ಮಾಡಿಕೊಂಡಿದ್ದಾರೆ. ನಮ್ಮ ಮಗಧರಾಜ್ಯದ ಸೈನಿಕರು ಏನು ಕೇಳುತ್ತಿದ್ದಾರೆಂದರೆ, ವಿರೋಧಪಕ್ಷದ ನಾಯಕರು ಮಂಡಿಸಿರುವ ಈ ಅವಿಶ್ವಾಸ ನಿರ್ಣಯಕ್ಕೆ ತಾವು ದಯವಿಟ್ಟು ಅವಕಾಶ ಕೊಡಬೇಕು. ಏಕೆಂದರೆ ಅವರು ತಮ್ಮ ಸೋಲನ್ನು ಒಪ್ಪಿಕೊಂಡಿದ್ದಾರೆ. ಚಂದ್ರಗುಪ್ತ ತಾನು ಎನ್ನತಕ್ಕ ಮಾತನ್ನೂ ಹೇಳಿಕೊಂಡು ತನ್ನ ಸೋಲನ್ನು ಒಪ್ಪಿಕೊಂಡಿದ್ದಾರೆ. ಆದರೆ ನಿಮ್ಮ ಕೈಗೆ ಅಂದರೆ ಮಗಧರಾಜರಿಗೆ ಸ್ವಲ್ಪ ಸಾಮ್ರಾಜ್ಯವನ್ನು ಕೊಡುತ್ತೇವೆ. ನೀವು ಆಳಿ ನಮಗೆ ಸಂತೋಷ. ಜನರು ನಿಮಗೆ 5 ವರ್ಷದವರೆಗೆ ಓಟು ಕೊಟ್ಟಿದ್ದಾರೆ. 5 ವರ್ಷದೊಳಗೆ ಚುನಾವಣೆ ಆಗಬೇಕೆಂಬ ಅಪೇಕ್ಷೆ ನಮಗೇನೂ ಇಲ್ಲ. ಮಗಧರಾಜರೇ, ಏತಕ್ಕೆ ನಿದ್ರೆ ಮಾಡುತ್ತಿದ್ದೀರಿ? ನೀವು ನಿದ್ದೆಯಿಂದ ಎದ್ದೇಳಿ. ನಮ್ಮ ಅವಿಶ್ವಾಸ ನಿರ್ಣಯಕ್ಕೆ ತಾವು ಸಪೋರ್ಟ್ ಮಾಡಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಒಬ್ಬ ಮಾನ್ಯ ಸದಸ್ಯರು :- ಪರಿಶೀಲಿಸುತ್ತೇವೆ.

Sri R.V.Deshpande :- I would not like to encourage defections. ನನಗೆ ವಿಶ್ವಾಸವಿಲ್ಲ. ಆದರೆ ಶ್ರೀಮತಿ ಇಂದಿರಾಗಾಂಧಿಯವರು ಕಾನ್‌ಷಿಯಸ್ ಕಾಲನ್ನು ಹಿಂದೆ ರಾಷ್ಟ್ರಪತಿಯವರ ಚುನಾವಣೆಯಲ್ಲಿ ಕೊಟ್ಟಿದ್ದರು. ಅದೇರೀತಿ ನಾನು ತಮ್ಮಲ್ಲಿ ವಿನಂತಿ ಮಾಡಿಕೊಂಡು ಕಾನ್‌ಷಿಯಸ್ ಕಾಲ್ ಕೊಡುತ್ತಿದ್ದೇನೆ. ನೀವು ಮಾನ್ಯ ನರಸಿಂಹರಾವ್‌ರವರಿಗೆ ಅಟ್ಯಾಕ್ ಬಗ್ಗೆ ಕೊಟ್ಟಂಥ ಮೆಮೋರ್‍ಯಾಂಡಂ ಏನಿದೆ ಅದರ ಬಗ್ಗೆ ಹೇಳುವುದಾದರೆ ನನ್ನ ದೃಷ್ಟಿಯಲ್ಲಿ ಅದರಲ್ಲಿ ಹುರುಳಿದೆ. ತಾವು ಶಾಸನಸಭೆಯಲ್ಲಿ ಸ್ಪಷ್ಟವಾಗಿ ಹೇಳಿದ್ದೀರಿ. ಪತ್ರಿಕೆಗಳಲ್ಲಿ ಹೇಳಿದ್ದೂ ಇದೆ. ಅದರಲ್ಲಿ ಮಾನ್ಯ ಕಂದಾಯ ಮಂತ್ರಿಗಳು ಉಪಮುಖ್ಯಮಂತ್ರಿಗಳೂ, ನೀವು ನಮಗೆ ಸದನದ ಹೊರಗೆ ಎಲ್ಲ ಸಪೋರ್ಟನ್ನೂ ಕೊಟ್ಟಿದ್ದೀರಿ. ಇವತ್ತು ನಿಮ್ಮ ಸಪೋರ್ಟನ್ನು ಈ ಸದನದ ಒಳಗೂ ಕೂಡ ಕೇಳುತ್ತಿದ್ದೇನೆ. ನೀವು ಮಾಡಿದ ಆರೋಪದಲ್ಲಿ ವಿಶ್ವಾಸ ನಿಜವಾಗಿ ಇದ್ದರೆ ನೀವು ಡಿಸಿಡೆಂಟ್ಸ್ ಎಂದು ಹೆದರಿಕೊಳ್ಳಬೇಡಿ, ಸೇಫರ್ಸ್ ಆಫ್ ದಿ ಸ್ಟೇಟ್ ಎಂದು ಕೊಡಿ. ನಿಮಗೆ ಆ ಧೈರ್ಯ, ಆ ಶಕ್ತಿ ಇದ್ದರೆ, ಡೆಪ್ಯುಟಿ ಚೀಫ್ ಮಿನಿಸ್ಟರ್, ರೆವಿನ್ಯೂ ಮಿನಿಸ್ಟರ್‌ರವರಿಗೆ ಸಪೋರ್ಟ್ ಮಾಡಿ. ಅವರು ಇದರಲ್ಲಿ ಲೀಡ್ ತೆಗೆದುಕೊಳ್ಳಬೇಕು.ನಮ್ಮ ಸ್ನೇಹಿತರು ಇಲ್ಲಿ ಕುಳಿತಿದ್ದಾರೆ. ಶ್ರೀ ನರಸಿಂಹರಾಯರಿಗೆ ಎರಡು ಮನವಿ ಪತ್ರಗಳನ್ನು ಕೊಟ್ಟಿದ್ದಾರೆ. ಅವರ ಧೈರ್ಯ, ಆತ್ಮಸಾಕ್ಷಿಯಿಂದ ರಾಜ್ಯದ ಹಿತದೃಷ್ಟಿಯಿಂದ ನಮ್ಮ ಅವಿಶ್ವಾಸ ನಿರ್ಣಯಕ್ಕೆ ಬೆಂಬಲಕೊಡಬೇಕು. ನೀವು ಬೆಂಬಲಮಾಡಲಿಲ್ಲವೆಂದರೆ, ನೀವು ಹೊರಗಡೆ ಏನು ಮಾತನಾಡಿದರೂ ಜನರು ನಂಬುವುದಿಲ್ಲ. ಇವರು ಕೇವಲ ಅಧಿಕಾರದ ಸಲುವಾಗಿ ಕಚ್ಚಾಟ ಮಾಡುತ್ತಿದ್ದಾರೆ ಎಂದು ಜನರು ಹೇಳಬಹುದು. ನಿಮ್ಮ ಬಗ್ಗೆ ಗೌರವವಿದೆ, ನೀವು ಕೊಟ್ಟ ಮನವಿಪತ್ರ ಸತ್ಯವೇ ಆಗಿದ್ದರೆ ಶಾಸನಸಭೆಯಲ್ಲೂ ಸಹ ಆ ಧೈರ್ಯವನ್ನು ತೋರಿಸಿ. ಅಧಿಕಾರ ಬರುತ್ತದೆ, ಹೋಗುತ್ತದೆ; ಸರ್ಕಾರ ಹೋಗುತ್ತದೆ ಎನ್ನುವ ಧೈರ್ಯವಿದ್ದರೆ ಚುನಾವಣೆಗೆ ಹೋಗಬಹುದು. ಆದುದರಿಂದ ಇವತ್ತು ನೀವು ದಯಮಾಡಿ ಇದರ ಬಗ್ಗೆ ವಿಚಾರ ಮಾಡಿ; ಇನ್ನೂ ಸಮಯವಿದೆ. ನಾನು ಏನು ಮನವಿ ಮಾಡಿದ್ದೇನೆ, ತಾವು ಅದಕ್ಕೆ ಮನ್ನಣೆ ಕೊಡಬೇಕು. ಈ ವಿಶ್ವಾಸ

ನಿರ್ಣಯಕ್ಕೆ ಬೆಂಬಲಕೊಡಿ ಎಂದು ಕೇಳುತ್ತಾ, ಇನ್ನು ಈ ಲಾ ಅಂಡ್ ಆರ್ಡರ್ ಬಗ್ಗೆ ಹೇಳುವುದಕ್ಕೆ ಹೊರಟರೆ,

(ಗೊಂದಲ)

ಮಾನ್ಯ ಅಧ್ಯಕ್ಷರೇ, 22-2-93ರಂದು ಮಾಜಿ ಮಂತ್ರಿಗಳಾದ ಶ್ರೀ ನಾಡಗೌಡ ಸಾಹೇಬರ ಕ್ಷೇತ್ರದಲ್ಲಿ ಸಾಲ್ವದ್ಗಿ ಒಂದು ಹಳ್ಳಿ ಇದೆ. ಆ ಹಳ್ಳಿಯಲ್ಲಿ ಬಿ.ಡಿ.ಒ ಇನ್ವಿಟೇಷನ್ ಪ್ರಿಂಟ್ ಮಾಡಿಸುತ್ತಾರೆ. ನಮ್ಮ ಸ್ನೇಹಿತರಾದಂತಹ ಶ್ರೀ ನಾಗೇಗೌಡರಿಂದ ಪಶುಸಂಗೋಪನಾ ದವಾಖಾನೆ ಮತ್ತು ಒಂದು ಹಾಸ್ಟೆಲ್ ಉದ್ಘಾಟನೆ ಆಗಬೇಕಾಗಿತ್ತು. ಯಾವ ಕಟ್ಟಡವೂ ಇಲ್ಲ; ಆದರೂ ಬಿ.ಡಿ.ಒ ಪ್ರಿಂಟ್ ಮಾಡುತ್ತಾರೆ. ಶಾಸಕರಿಗೂ ಇನ್ವಿಟೇಷನ್ ಮುಟ್ಟುವುದಿಲ್ಲ. ಅಲ್ಲಿ 9 ಗಂಟೆಗೆ ರಿಸರ್ವ್ ಪೋಲಿಸ್‌ನವರು ಹೋಗುತ್ತಾರೆ.

ಶ್ರೀ ಸಿ.ಎಸ್.ನಾಡಗೌಡ :- ನೀವು ಪ್ರಸ್ತಾಪ ಮಾಡಿದ ಮೇಲೆ ನಾನು ಅದನ್ನು ಹೇಳಬೇಕಾಗುತ್ತದೆ. ಏಕೆಂದರೆ ನನ್ನನ್ನು ಒಳಗೊಂಡು ನೀವು ಮಾತನಾಡಿದ್ದೀರಿ. Because I am here, I am answerable. I will clarify that matter.

ಶ್ರೀ ಆರ್.ವಿ.ದೇಶಪಾಂಡೆ :- ಮಾನ್ಯ ಅಧ್ಯಕ್ಷರೇ, ಅಲ್ಲೇ ಮಸೀದಿ ಪಕ್ಕದಲ್ಲಿ ಜನರು ಸೇರಿ ಯಾವ ಜಾಗದಲ್ಲಿ ಕಾರ್ಯಕ್ರಮವಾಗಬೇಕಾಗಿತ್ತು. ಅಲ್ಲಿ ಒಬ್ಬ ನಾನಾಗೌಡ ಅನಂತ್ ಎಂಬವನು ಶಾಸಕರಿಗೆ ಧಿಕ್ಕಾರ ಎಂದು ಬಣ್ಣ ಬಳಿಯುತ್ತಿದ್ದ ಆಗ ಅವನ ಬಳಿ ಕೆಲವರು ಹೋಗಿ ಕೇಳುತ್ತಾರೆ. ಏನು ಬರೆಯುತ್ತಿದ್ದೀಯಾ? ಏನು ಹೇಳುತ್ತಿದ್ದೀಯಾ ಅಂತ. ಆಗ ಅವನು ಶಾಸಕರಿಗೆ ಧಿಕ್ಕಾರ ಎನ್ನುತ್ತಿದ್ದೇನೆ ಎಂದಾಗ ಅವನನ್ನು ಕಲ್ಲಿನಲ್ಲಿ ಹೊಡೆದರು. ಈಗ ಅವನು ಮೀರಜ್ ಆಸ್ಪತ್ರೆಯಲ್ಲಿದ್ದಾನೆ. ಶಾಸಕರು ತಾಳಿಕೋಟೆ ಐ.ಬಿ.ಯಲ್ಲಿ ಕುಳಿತು ಪೋಲಿಸರಿಗೆ ಮಾರ್ಗದರ್ಶನ ಕೊಡುತ್ತಾರೆ. ಇಂಥ ಜನರನ್ನು ಬಂಧಿಸಿ ಎನ್ನುತ್ತಾರೆ. ಮಾಜಿ ಲೋಕಸಭಾ ಸದಸ್ಯರೂ ಆದ ಗುರುರೆಡ್ಡಿಯವರ ಮನೆಯಲ್ಲಿರುವ ಹೆಣ್ಣುಮಕ್ಕಳನ್ನು ಬಿಟ್ಟರೆ 26 ಜನರು ಆರೋಪಿಗಳು ಆಗಿದ್ದಾರೆ. ಯಾರು ನಿರಪರಾಧಿಗಳು ಇದ್ದಾರೆ ಅವರ ಮೇಲೆ ಕ್ರಿಮಿನಲ್ ಕೇಸ್, ಯಾರು ಕಲ್ಲು ತೂರಾಟ ಮಾಡಿದ್ದಾರೆ ಅವರ ಮೇಲೆ ಯಾವ ಕ್ರಮವೂ ಇಲ್ಲ. ಲಾ ಅಂಡ್ ಆರ್ಡರ್ ಬಗ್ಗೆ ಮಾತನಾಡುವಾಗ ಅದನ್ನು ಹೇಳುತ್ತೇನೆ. ಇವತ್ತು ಯಾವ ಮಟ್ಟದಲ್ಲಿ ನಿಮ್ಮ ಸರ್ಕಾರದ ಆಡಳಿತ, ಮತ್ತು ಪೋಲೀಸ್ ನಿಯಂತ್ರಣ ಹೋಗಿದೆ ಎಂಬುದಕ್ಕೆ ಉದಾಹರಣೆಯನ್ನು ಕೊಟ್ಟಿದ್ದೇನೆ. ಅಲ್ಲಿನ ಪಿ.ಎಸ್.ಐ ಗಾಯಗೊಂಡಿದ್ದಾರೆ.

ಶ್ರೀ ಸಿ.ಎಸ್. ನಾಡಗೌಡ :- ಮಾನ್ಯ ಉಪಾಧ್ಯಕ್ಷರೇ, ಮಾನ್ಯ ವಿರೋಧಪಕ್ಷದ ನಾಯಕರು ಈ ಸಭೆಯ ಹಿರಿಯ ಸದಸ್ಯರು ಕೂಡ. ಅವರು ಕೇವಲ ತಮ್ಮದೇ ಆದಂತಹ ಪಕ್ಷದ ಒಬ್ಬ ಮುಖಂಡ ಹೇಳಿದ ಎಂದುಕೊಂಡು ಅದನ್ನು ಪ್ರಸ್ತಾಪ ಮಾಡುವುದು ಕೂಡ ಸರಿಯಲ್ಲ. ಆ ವಿಷಯದ ಹಿನ್ನೆಲೆಯಲ್ಲಿ ಏನು ನಡೆದಿದೆ ಎನ್ನುವಂಥಾದ್ದನ್ನು ತಾವು ತಿಳಿದುಕೊಳ್ಳಬೇಕು. ಪ್ರತಿಯೊಂದರಲ್ಲೂ ಕೂಡ ರಾಜಕೀಯ ಬೆರೆಸಿ, ಒಂದು ಕುತಂತ್ರವನ್ನು ಮಾಡುವ ಜನರಿಗೆ ವಿಧಾನಸಭೆ ಅಲ್ಲ, ಹೊರಗಡೆ ಕೂಡ ಆಸ್ಪದ ಮಾಡಿ ಕೊಡಬಾರದು ಎನ್ನುವಂಥಾದ್ದು ಈ ಸಂದರ್ಭದಲ್ಲಿ ನನ್ನ ಕಳಕಳಿಯ ವಿನಂತಿ ಕೂಡ ಆಗಿದೆ. ಏನು ಮಾಡಿದ್ದಾರೆ ಗುರ್ರೆಡ್ಡಿಯವರು 35 ವರ್ಷದಿಂದ ಅಧಿಕಾರ ಚಲಾಯಿಸಿದರೂ ಕೂಡ ಆ ಹಳ್ಳಿಗೆ ಒಂದು ಸರ್ಕಾರದ ಯೋಜನೆಯನ್ನು ಆ ಸಂದರ್ಭದಲ್ಲಿ ಅವರಿಗೆ ತರುವುದಕ್ಕೆ ಆಗಲಿಲ್ಲ. ನಾವು ಅಧಿಕಾರಕ್ಕೆ ಬಂದಮೇಲೆ ಅಲ್ಲಿ ಸುಮಾರು ಒಂದು ಸೋಷಿಯಲ್ ವೇಲ್‌ಫೇರ್

ಹಾಸ್ಟೆಲ್ ತರಿಸಿದ್ದೇವೆ. ಏಕೆ ತರಿಸಿದ್ದೇವೆ? ಅಲ್ಲಿರುವಂತಹ ಹರಿಜನ ಗಿರಿಜನರಿಗೆ ಅನುಕೂಲವಾಗಲಿ ಎಂದು. ಬಡ ಜನರಿಗೆ ಅನುಕೂಲವಾಗಲಿ ಎಂದು ಒಂದು ಹೈಸ್ಕೂಲನ್ನು ತಂದಿದ್ದೇವೆ. ರೈತರಿಗೆ ಅನುಕೂಲವಾಗಲಿ ಎಂದು, ದನದ ದವಾಖಾನೆ ತಂದಿದ್ದೇವೆ. ನೀರಿನ ಯೋಜನೆ ತಂದಿದ್ದೇವೆ. ಇದೆಲ್ಲಾ ನನ್ನ ಊರಿಗೆ ಅವರು ಮಾಡಲಾರದಂಥಾದ್ದನ್ನು ನಾನು ಮಾಡಿದ್ದರಿಂದ ತನಗೆ ಅಸಹ್ಯ ತರುವಂಥಾಗುತ್ತಿದೆ ಎಂದು, ಅವಮಾನವಾಗುತ್ತಿದೆ ಎಂದು ಹೇಳಿ ನಾವು ಕಾರ್ಯಕ್ರಮ ನಡೆಸುವಂತಹ ದಿವಸದಲ್ಲಿ ಆತ ತನ್ನ ಮಗನನ್ನು ಕಳುಹಿಸಿ 20 ಜನರಿಗೆ ಕುಡಿಸಿ, ಅಲ್ಲಿ ಬೋರ್ಡ್‌ನಲ್ಲಿ ಬರೆಸಿದ್ದಾರೆ. ಇದನ್ನು ನಾನು ಹೇಳುವಂಥಾದ್ದು. ಅಲ್ಲ ಅಷ್ಟು ಅಶ್ಲೀಲ ಪದಗಳನ್ನು ಬರೆಸಿದ್ದಾರೆ. ವರಿಷ್ಠ ಅಧಿಕಾರಿಗಳು ಹಾಗೂ ಇಂಟಲಿಜೆನ್ಸ್‌ನವರು ಕೂಡ ರಿಪೋರ್ಟ್ ಮಾಡಿದ್ದಾರೆ. ಅಂತಹವರಿಗೆ ಇವರು ಬೆಂಬಲವನ್ನು ಸೂಚಿಸುತ್ತಾ ಇದ್ದಾರೆ. ಅಶ್ಲೀಲವಾದಂತಹ ಶಬ್ದಗಳನ್ನು ಅಲ್ಲಿ ಬಳಸಿದ್ದಾರೆ. ನಾನೂ ಕೂಡ ತಮ್ಮ ಜನತಾಪಕ್ಷದಲ್ಲಿ ಇದ್ದೆ. ಅವರು ಮಾಡುವಂತಹ ಒಂದು ಕೃತಿಗೆ ನಾನು ಆ ಪಕ್ಷ ಬಿಟ್ಟು ಈ ಪಕ್ಷವನ್ನು ಸೇರಬೇಕಾಯಿತು. ಇವತ್ತು ತಾವು ಇದನ್ನು ತಿಳಿದುಕೊಳ್ಳಬೇಕು. ನಾನು ಆ ಪಕ್ಷದಲ್ಲಿ ಹೇಗೆ ಇದ್ದೆ. ನಾನು ಎಕ್ಸಿಕ್ಯೂಟಿವ್ ಕಮಿಟಿ ಮೆಂಬರ್ ಆಗಿದ್ದೆ. ಅವರು ಮಾಡಿದಂತಹ ಒಂದು ಕೆಟ್ಟ ಕೃತಿಗೆ ಪ್ರತಿಯೊಂದು ಹಂತದಲ್ಲೂ ಕೂಡ ರಾಜಕೀಯವನ್ನು ಬಳಸಬೇಕಾದವರು....

(ಗೊಂದಲ)

ಶ್ರೀ ಸಿ.ಎಸ್. ನಾಡಗೌಡ:- ಅವರು ನಿಮ್ಮ ನಾಯಕರೇ? ಅವರು ನಿಮ್ಮ ಮುಖಂಡರೇ? ಯಾವ ಒಂದು ಬಡ ಜನರ ಕಾರ್ಯಕ್ರಮವನ್ನು ಅನುಷ್ಠಾನಕ್ಕೆ ತರುತ್ತಿರುವಾಗ ನಡೆದಂಥ ಘಟನೆಯನ್ನು ಇಲ್ಲಿ ಪ್ರಸ್ತಾಪ ಮಾಡುತ್ತಿದ್ದೀರಿ. ಹೊಡೆದಾಟ ಯಾವ ಕಾರಣಕ್ಕೆ ಆಗಿದೆ. ನಾನು ಇನ್ನು ಮುದ್ದೆಬಿಹಾಳದಲ್ಲಿ ಐಬಿಯಲ್ಲಿ ತಯಾರಾಗುತ್ತಾ ಇಲ್ಲ. ಬೆಳಗಿನ ಜಾವದಲ್ಲಿ 20 ಜನರನ್ನು ಕೂಡಿಸಿ ಪ್ರತಿ ಮನೆಮನೆಗೂ ಅವರನ್ನು ಕಳುಹಿಸಿ ಎಚ್ಚರಿಕೆಯನ್ನು ನೀಡುತ್ತಿದ್ದಾರೆ; ಯಾರು ಕಾರ್ಯಕ್ರಮಕ್ಕೆ ಹೋಗುತ್ತೀರಿ, ಅವರಿಗೆ ಹೊಡೆಯುತ್ತೇವೆ ಎಂದು. ಅಂತಹ ಸಂದರ್ಭದಲ್ಲಿ ಪೋಲೀಸರು ಹೋಗಿದ್ದಾರೆ. ನೀವು ಈ ರೀತಿ ಮಾಡುವಂಥಾದ್ದು ಸರಿಯಲ್ಲ ಎಂದು ವಾರ್ನ್ ಮಾಡಿದ್ದಾರೆ. ಆದರೂ ಅವರ ಮಗ ಕಲ್ಲು ತೆಗೆದುಕೊಂಡು ಅಲ್ಲಿರುವಂತಹ ಒಬ್ಬ ನಮ್ಮ ಸಾಲ್ವಡಗಿ ಎಂದು ಜಿಲ್ಲಾಪರಿಷತ್ ಅಧ್ಯಕ್ಷ ಆಗಿದ್ದಂತಹವರ ಒಬ್ಬ ಬ್ರದರ್ ಕುಳಿತಿದ್ದಾನೆ. ಆತ ಸುಮಾರು 60 ವರ್ಷ ವಯಸ್ಸಿನ ಮುದುಕ, ಅವನನ್ನು ಹಿಡಿದು ತಲೆಗೆ ಹೊಡೆದಿದ್ದಾನೆ. ಯಾರೆಂದರೆ ಇದೇ ಗುರ್‍ರೆಡ್ಡಿಯವರು ಮಗನೇ ಈ ರೀತಿ ಮಾಡಿದ್ದಾನೆ. ಅಧಿಕಾರಿಗಳು ಹೋಗಿ ಅವನನ್ನು ಅರೆಸ್ಟ್ ಮಾಡಿದ್ದಾರೆ. ನೀವು ಏನಾದರೂ ಅಲ್ಲಿ ಕ್ರಮ ಕೈಗೊಳ್ಳುತ್ತಿದ್ದರೆ ನಿಷ್ಪಕ್ಷಪಾತವಾಗಿ ಕ್ರಮ ತೆಗೆದುಕೊಳ್ಳಿ ಎಂದು ನಾನು ಅವರಿಗೆ ಆದೇಶವನ್ನು ಮಾಡಿದ್ದೇನೆ. ನಾನು ಅಲ್ಲಿ ತಾಳಿಕೋಟೆಗೆ ಬಂದಿದ್ದು 7 ಗಂಟೆಗೆ. ತಾಳಿಕೋಟೆಯಿಂದ ಮುದ್ದೆಬಿಹಾಳ್‌ಗೆ ನನಗೆ ಟೆಲಿಫೋನ್ ಸಂಪರ್ಕ ಕೂಡ ಅವತ್ತು ಇಲ್ಲ. ನೀವು ಹೇಳುತ್ತೀರಿ; ನಾನು ಐಬಿಯಲ್ಲಿ ಕುಳಿತು ಮಾಡಿಸಿದ್ದೇನೆ ಎಂದು. ಗುಟ್ಟಿನ ರಾಜಕೀಯ ಮಾಡುವಂತಹ ಜನರಿಗೆ ನಿಷ್ಪಕ್ಷಪಾತವಾಗಿ ಪಕ್ಷದಿಂದ ಹೊರಗೆ ಹಾಕುವಂಥ ಪ್ರಯತ್ನವನ್ನು ಮಾಡಿ. ಅವರನ್ನು ಹತೋಟಿಗೆ ತರುವಂತಹ ಪ್ರಯತ್ನ ಮಾಡಿ. ನಿಮ್ಮೆಲ್ಲರಿಗೂ ಅವರು ಏನು ಮಾಡಿದ್ದಾರೆ ಎನ್ನುವುದು ತಮಗೂ ಗೊತ್ತಿದೆ.

ಶ್ರೀ ಆರ್.ವಿ. ದೇಶಪಾಂಡೆ : - ಮಾನ್ಯ ಉಪಾಧ್ಯಕ್ಷರೇ, ನಿಜ, ನನಗೆ ಬಂದ ಮಾಹಿತಿ ಪ್ರಕಾರ ನಾನು ಇಲ್ಲಿ ಪ್ರತಿಪಾದನೆ ಮಾಡಿದ್ದೇನೆ. Let them enquire into it. If it is proved that my hand is there, I will resign.

ಶ್ರೀ ಸಿ.ಎಸ್.ನಾಡಗೌಡ : - ಇಲ್ಲದಿದ್ದರೆ ನೀವು ಅವರನ್ನು ಪಕ್ಷದಿಂದ ಹೊರಗೆ ಹಾಕುವ ಪ್ರಯತ್ನ ಮಾಡಿ.

ಶ್ರೀ ಆರ್.ವಿ. ದೇಶಪಾಂಡೆ : - ಮಾನ್ಯ ಗುರ್ರೆಡ್ಡಿಯವರು ಸಹ ನಮ್ಮ ಪಕ್ಷದ ಹಿರಿಯ ನಾಯಕರು. ಅವರು ಲೋಕಸಭಾ ಸದಸ್ಯರು. ಜಿಲ್ಲಾ ಅಭಿವೃದ್ಧಿ ಬ್ಯಾಂಕ್ ಅಧ್ಯಕ್ಷರು ಆಗಿದ್ದರು. ನಾಡಗೌಡರಿಗಿಂತ ಅಲ್ಲಿ ಅವರು ಜನರ ಪ್ರೀತಿಯನ್ನು ಹೆಚ್ಚಾಗಿ ಗಳಿಸಿದ್ದಾರೆ. ಹಾಗಾಗಿ ಅಷ್ಟು ಲಘುವಾಗಿ ಅವರ ಬಗ್ಗೆ ತಾವು ಮಾತನಾಡುವುದು ಬೇಡ. ಆದರೆ ಒಂದು ಮಾತು ನಾನು ಒಪ್ಪಿಕೊಳ್ಳುತ್ತೇನೆ . ಇದರ ಬಗ್ಗೆ ಅವರ ವರ್ಶನ್ ಅವರು ಹೇಳಿದ್ದಾರೆ. ಸರ್ಕಾರ ತನಿಖೆ ಮಾಡಿ ಯಾರು ತಪ್ಪಿತಸ್ಥರು ಇದ್ದಾರೆ ಅವರ ಮೇಲೆ ಕ್ರಮ ತೆಗೆದುಕೊಳ್ಳಬಹುದು. ಅದನ್ನು ನಾನು ಒಪ್ಪಿಕೊಳ್ಳುತ್ತೇನೆ.

ಶ್ರೀ ಸಿ.ಎಸ್.ನಾಡಗೌಡ : - ನೀವು ಕೂಡ ರಾಜೀನಾಮೆ ಕೊಡುತ್ತೀರಾ?

ಶ್ರೀ ಆರ್.ವಿ.ದೇಶಪಾಂಡೆ : - ನಾನು ಬಹಳ ಸ್ಪಷ್ಟವಾಗಿ ಹೇಳಿದ್ದೇನೆ, ನನಗೆ ಬಂದ ಮಾಹಿತಿ ಮೇಲೆ ಈ ರೀತಿ ಹೇಳಿದ್ದೇನೆ ಎಂದು ಹೇಳಿದ್ದೇನೆ. ಜಿಲ್ಲಾಧಿಕಾರಿ ಬಿಜಾಪುರದಿಂದ ಇದನ್ನು ಎನ್‌ಕ್ವೈರಿ ಮಾಡಲಿ. ಎನ್‌ಕ್ವೈರಿ ರಿಪೋರ್ಟ್ ಬರಲಿ. ಆಗ ಸತ್ಯ ಹೊರಗೆ ಬರುತ್ತದೆ. ತಾವು ಹೇಳಿದ್ದು ಕರೆಕ್ಟ್ ಇದೆಯೋ ಹೇಗೆ ಎಂದು.

ಶ್ರೀ ಸಿ.ಎಸ್. ನಾಡಗೌಡ : - ಮಾನ್ಯ ಮದನ್‌ಗೋಪಾಲ್‌ರವರು ಕೂಡ ಹೋಗಿ ನಿಮ್ಮ ಮಾಜಿ ಸದಸ್ಯರಿಗೆ ಈಗಾಗಲೇ ವಾರ್ನ್ ಮಾಡಿದ್ದಾರೆ. ನಿನ್ನೆ ದಿವಸ ಹೋಗಿ, ನೀವು ಸೀನಿಯರ್ ಲೀಡರ್ ಆಗಿ ಈ ತರಹ ಮಾಡಿದರೆ ಒಳಗಡೆ ಹಾಕಬೇಕಾಗುತ್ತದೆ ಎಂದು ವಾರ್ನ್ ಮಾಡಿ ಬಂದಿದ್ದಾರೆ. ಅದು ನಿಮಗೆ ಗೊತ್ತಿದೆಯೇ?

ಶ್ರೀ ಆರ್.ವಿ.ದೇಶಪಾಂಡೆ : - ಮಾನ್ಯ ಉಪಾಧ್ಯಕ್ಷರೇ, ಈಗಾಗಲೇ ನಾನು ಹೇಳಿದ್ದೇನೆ. ಈಗ ನಾಡಗೌಡರವರು ಕೆಲವು ವಿಚಾರವನ್ನು ಹೇಳಿದ್ದಾರೆ, ಮತ್ತು ಸ್ಪಷ್ಟ ಪಡಿಸಿದ್ದಾರೆ ನೀವು ಹೇಳಿದ್ದು ಸುಳ್ಳು ಎಂದು ನಾನು ಹೇಳುತ್ತಾ ಇಲ್ಲ. ಆದರೆ ಇವತ್ತು ನಾವು ಸತ್ಯ ಏನು ಇದೆ ಎಂದು ತಿಳಿದುಕೊಳ್ಳಬೇಕಾಗಿದೆ. ತಾವು ಅದಕ್ಕೆ ಒಪ್ಪಿಕೊಳ್ಳುತ್ತೀರಿ. ಇದಕ್ಕೆ ತಮ್ಮ ಸರ್ಕಾರದಿಂದಲೂ ಆದೇಶ ಬೇಕು. ಜಿಲ್ಲಾಧಿಕಾರಿಯಿಂದ ಇದರ ಬಗ್ಗೆ ಎನ್‌ಕ್ವೈರಿ ಮಾಡಿ ಎಂದು ತಾವು ಸರ್ಕಾರಕ್ಕೆ ಆದೇಶ ಮಾಡಿ; ಎನ್‌ಕ್ವೈರಿ ಆಗಲಿ. ಏನು ಸತ್ಯ ಇದೆ ಅದು ಹೊರಗೆ ಬರುತ್ತದೆ. ಹಾಗಾಗಿ ಹೊನ್ನಾರಹೊಳೆ ಗುರ್ರೆಡ್ಡಿಯವರು ತಪ್ಪುಮಾಡಿದ್ದರೆ ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ನೀವು ತಪ್ಪುಮಾಡಿದ್ದರೆ ನಿಮ್ಮ ಮೇಲೂ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಆದರಲ್ಲಿ ಯಾವ ಭಿನ್ನಾಭಿಪ್ರಾಯವೂ ಇಲ್ಲ.

ಶ್ರೀ ಸಿ.ಎಸ್.ನಾಡಗೌಡ : - ಮಾನ್ಯ ಅಧ್ಯಕ್ಷರೇ, ಈಗಾಗಲೇ ರಿಪೋರ್ಟ್ ಬಂದಿದೆ. ಮಾನ್ಯ ವಿರೋಧಪಕ್ಷದ ನಾಯಕರೇ, ಎನ್‌ಕ್ವೈರಿ ಮಾಡತಕ್ಕಂಥ ಸ್ಟೇಜ್ ಇದಲ್ಲ. ಈಗಾಗಲೇ ಸರ್ಕಾರಕ್ಕೆ ರಿಪೋರ್ಟ್ ಕಳುಹಿಸಿಕೊಟ್ಟಿದ್ದಾರೆ. ಅನ್‌ಅಫಿಷಿಯಲ್ ಆಗಿ ತಾವು ಡಿ.ಸಿ.ಯವರ ಜೊತೆಯಲ್ಲಿ

ಮಾತನಾಡಿ. ತಾವು ಹಿರಿಯ ನಾಯಕರಿದ್ದೀರಿ, ಅಲ್ಲಿ ಏನು ನಡೆದಿದೆ ಎಂಬುದನ್ನು ಸ್ಪಷ್ಟವಾಗಿ ಅವರು ನಿಮಗೆ ಹೇಳುತ್ತಾರೆ.

ಶ್ರೀ ಆರ್.ವಿ.ದೇಶಪಾಂಡೆ:- ಮೊದಲು ವಿಚಾರಣೆ ಮಾಡಿ ಎಂದು ತಾವು ಒಪ್ಪಿಕೊಂಡಿರಿ, ಈಗ ಬೇಡವೆಂದು ಹೇಳುತ್ತಿದ್ದೀರಿ. ಇಲ್ಲೇ ಗೊತ್ತಾಗುತ್ತದೆ; ಇನ್ನು ಮಾನ್ಯ ಅಧ್ಯಕ್ಷರೇ, ಈಗಾಗಲೇ ಸಾಕಷ್ಟು ವಿಚಾರಗಳನ್ನು ಪ್ರಸ್ತಾಪ ಮಾಡಿದ್ದೇನೆ, ನಮ್ಮ ಸ್ನೇಹಿತರು ಅವರು ಸಹ ಈ ವಿಚಾರದಲ್ಲಿ ಪ್ರಸ್ತಾಪ ಮಾಡುತ್ತಾರೆ ಎಂದು ನನಗೆ ಕಾಣಿಸುತ್ತದೆ, ಆ ಭಾಗದಲ್ಲಿರುವ ಕೆಲವು ಸದಸ್ಯರುಗಳು ಈ ವಿಚಾರದಲ್ಲಿ ಪ್ರಸ್ತಾಪ ಮಾಡಬಹುದು. ಕೊನೆಯದಾಗಿ ನಾನು ಇಷ್ಟೇ ಹೇಳುತ್ತೇನೆ, ಎಲ್ಲಿ ಹಂತದಲ್ಲೂ ಈ ಸರ್ಕಾರ ವಿಫಲವಾಗಿದೆ, ಇವತ್ತು ನಿರುದ್ಯೋಗ ಬೆಳೆಯುತ್ತಿದೆ, ಜನ ಕಷ್ಟದಲ್ಲಿದ್ದಾರೆ, ರೈತರು ಕಷ್ಟದಲ್ಲಿದ್ದಾರೆ, ಸಾಮಾನ್ಯ ಜನರು ಕಷ್ಟದಲ್ಲಿದ್ದಾರೆ, ಆದ್ದರಿಂದ ಸರ್ಕಾರದ ವಿರುದ್ಧ ವಿರೋಧಪಕ್ಷದ ನಾವೆಲ್ಲರೂ ನೋಕಾನ್‌ಫಿಡೆನ್‌ಷನ್ ಮೋಷನ್ನನ್ನು ಮೂವ್ ಮಾಡಿದ್ದೇವೆ. ಅದಕ್ಕೆ ಇಡೀ...

ಶ್ರೀ ಗೋಪಾಲ ಮುಕುಂದ ಕಾನಡೆ:- ಮಾನ್ಯ ದೇಶಪಾಂಡೆಯವರೇ, ಎಲ್ಲ ಜಿಲ್ಲೆಯ ವಿಷಯಗಳನ್ನು ತಾವು ಮಾತನಾಡಿದಿರಿ; ಆದರೆ ನಿಮ್ಮ ಡಿಸ್ಟ್ರಿಕ್ಟ್‌ನ ವಿಷಯವನ್ನು ಬಿಟ್ಟುಬಿಟ್ಟಿರಲ್ಲ. ಭಟ್ಕಳದ್ದು.

ಶ್ರೀ ಆರ್.ವಿ. ದೇಶಪಾಂಡೆ:- ಭಟ್ಕಳ್‌ದು ಹೇಳಿ ಆಯಿತಲ್ಲ.

ಶ್ರೀ ಗೋಪಾಲ ಮುಕುಂದ ಕಾನಡೆ:- ಏನು ಹೇಳಿದಿರಿ, ಸರಿಯಾಗಿ ಹೇಳಲಿಲ್ಲ, ಹಾರಿಕೆ ಉತ್ತರ ಕೊಟ್ಟಿರಿ. ಕರೆಕ್ಟಾದ ಉತ್ತರ ಕೊಡಲಿಲ್ಲ.

ಶ್ರೀ ಆರ್.ವಿ.ದೇಶಪಾಂಡೆ:- ಭಟ್ಕಳದ ಬಗ್ಗೆ ಹೇಳಿ ಆಯಿತು. ನೀವು ಇದ್ದಿಲ್ಲ. ನಾನು ಹೇಳುವಾಗ ಅವರು ಇದ್ದಿರಲಿಲ್ಲ, ನಾನು ಏನು ಮಾಡಲಿ?

ಶ್ರೀ ಗೋಪಾಲ ಮುಕುಂದ ಕಾನಡೆ:- ನೀವು ಏನು ಮಾಡಿದಿರಿ, ನಿಮ್ಮ ಹಿಂದಿನವರು ಏನು ಮಾಡಿದರು ಎನ್ನುವುದರ ಬಗ್ಗೆ ಹೇಳಲೇ ಇಲ್ಲ.

ಶ್ರೀ ಆರ್.ವಿ.ದೇಶಪಾಂಡೆ:- ನಾವು ಇದ್ದಾಗ ಭಟ್ಕಳದಲ್ಲಿ ಏನೇನು ಗಲಾಟೆ ಇದ್ದಿರಲಿಲ್ಲ. ಮಾನ್ಯ ಆರ್.ಎನ್.ನಾಯಕರು ಶಾಸಕರಾಗಿದ್ದರು, ಅವರನ್ನು ಬೇಕಾದರೆ ಕೇಳಿ. ನಮ್ಮ ಆರೂವರೆ ವರ್ಷ ಕಾಲದಲ್ಲಿ ಇಂತಹ ಒಂದು ಘಟನೆಯೂ ನಡೆದಿರಲಿಲ್ಲ. ಇವತ್ತು ಏಪ್ರಿಲ್‌ನಿಂದ ಆರು ತಿಂಗಳ ಒಳಗೆ ಹರಾಜ್ ಹಾಕಿದ್ದೀರಿ. ಈ ಒಂದು ಮೆಮೊರ್‍ಯಾಂಡಮ್ ಬಗ್ಗೆ ಒಂದು ಅಶ್ಯೂರೆನ್ಸ್ ಕೊಟ್ಟಿದ್ದಾರೆ. ಅದನ್ನು ನಾನು ಸದನದ ಮುಂದೆ ಇಡುತ್ತಿದ್ದೇನೆ, ಇದು ಈ ಮನೆಯ ಡಾಕ್ಯುಮೆಂಟ್ ಆಗಿದೆ. ಇದು ರಾಜ್ಯದ ಜನತೆಗೂ ಗೊತ್ತಾಗಬೇಕಾಗುತ್ತದೆ, ಯಾವರೀತಿಯಿಂದ ಆಡಳಿತ ವ್ಯವಸ್ಥೆ ನಡೆಯುತ್ತಿದೆ ಎಂದು. ಇಷ್ಟು ಹೇಳಿ ಇಷ್ಟೊಂದು ಸಮಯ ತಾವು ಕೊಟ್ಟಿದ್ದಕ್ಕಾಗಿ ತಮಗೆ ವಂದಿಸುತ್ತೇನೆ.

ಶ್ರೀ ಎಂ.ರಾಜಶೇಖರಮೂರ್ತಿ(ಕಂದಾಯ ಸಚಿವರು):- ಇನ್ನೊಂದು ಮೆಮೊರ್‍ಯಾಂಡಮ್ ಎಂದು ಹೇಳಿದರು. ಮೊದಲೊಂದು ಮೆಮೊರ್‍ಯಾಂಡಮ್ ಕೊಟ್ಟಿದ್ದರಲ್ಲ ಅದು ಯಾವುದು, ಇದು ಯಾವುದು ಎಂದು ಗೊತ್ತಿಲ್ಲ.

ಶ್ರೀ ಆರ್.ವಿ.ದೇಶಪಾಂಡೆ:- ನಾನು ಅರ್‍ಯಾಕ್ ಬಾಟ್ಲೀದು ಇಡುತ್ತಿದ್ದೇನೆ, ಏತಕ್ಕೆಂದರೆ ಇದರಲ್ಲಿ ಸಿಗ್ನೇಚರ್ ಎಲ್ಲ ಸರಿಯಾಗಿ ಬಂದಿದೆ. ಮತ್ತೊಂದು ಮೆಮೊರ್‍ಯಾಂಡಮ್ ಅದು ಕೂಡ ನಿಮಗೆ ಗೊತ್ತಿದೆ. ಹಾಗಾಗಿ ನಾನು ಇದನ್ನು ಸದನದ ಮುಂದೆ ಈ ಎರಡೂ ಮೆಮೊರ್‍ಯಾಂಡಮ್‌ಗಳನ್ನು

ಇಡುತ್ತಿದ್ದೇನೆ. ಇಷ್ಟು ಹೇಳಿ ಈ ಅವಿಶ್ವಾಸ ನಿರ್ಣಯವನ್ನು ಮಂಡಿಸುತ್ತಿದ್ದೇನೆ, ಇದಕ್ಕೆ ತಮ್ಮೆಲ್ಲರ ಬೆಂಬಲ ಬೇಕೆಂದು ಕೇಳುತ್ತಾ ನನ್ನ ಮಾತನ್ನು ಮುಗಿಸುತ್ತೇನೆ.

ಉಪಾಧ್ಯಕ್ಷರು :- ಈಗ ಸದನದ ಕಲಾಪವನ್ನು ಮುಂದೂಡಿ ನಾಳೆ ಮತ್ತೆ 11-00 ಗಂಟೆಗೆ ಸದನವು ಆರಂಭವಾಗುತ್ತದೆ.

[ಸದನವು 5-50 ನಿಮಿಷಕ್ಕೆ ಮುಕ್ತಾಯವಾಗಿ ಪುನಃ ದಿನಾಂಕ 2ನೇ ಸೆಪ್ಟೆಂಬರ್ 1993ರ ಗುರುವಾರ ಬೆಳಿಗ್ಗೆ 11-00 ಗಂಟೆಗೆ ಸೇರಲು ನಿರ್ಣಯಿಸಿತು]

(+ ಚಿಹ್ನೆ ಮಾನ್ಯ ಸದ್ಯಸರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.)